ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 20 | ಮೇ 9–15, 2022 | ಪುಟ 16 | ರೂ.10/-

https://janashakthi.wordpress.com e-mail : js_weekly@yahoo.com

ಮುಖ್ಯಮಂತ್ರಿ ಬದಲಾವಣೆಯ ಮಾತು ಈಗೇಕೆ?





ಎಲ್.ಐ.ಸಿ.ಯ ಶೇರು ಮಾರಾಟದ ಆರಂಭ: ಒಂದು ದೈತ್ಯ ಹಗರಣದ ಪ್ರಾರಂಭ



ಪರಿಶಿಷ್ಟರ ಅಭಿವೃದ್ಧಿ ಹಣ ದುರುಪಯೋಗ: ಸರಕಾರದ ದ್ರೋಹ



ಕಲ್ಯಾಣ ಪ್ರಭುತ್ವ ಶ್ರೀಲಂಕಾ: 'ರೋಗಿ' ಪ್ರಭುತ್ವವಾದದ್ದು ಹೇಗೆ?



ಹಬ್ಬ, ಜಾತ್ರೆಗಳು ಮತ್ತು ಕಮ್ಯೂನಿಸ್ಟರು

ಜಮ್ಮು ಮತ್ತು ಕಾಶ್ಮೀರ ಕ್ಷೇತ್ರ ಮರುವಿಂಗಡಣಾ ಆಯೋಗದ ಶಿಫಾರಸುಗಳನ್ನು ತಿರಸ್ಕರಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜಮ್ಮು ಮತ್ತು ಕಾಶ್ಮೀರ ಕ್ಷೇತ್ರ ಮರುವಿಂಗಡಣಾ ಆಯೋಗದ ಶಿಫಾರಸುಗಳು ಸ್ಪಷ್ಟವಾಗಿಯೂ ಅಸಮರ್ಥನೀಯ ಮತ್ತು ತರ್ಕಹೀನ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ. ಇದು ಜಮ್ಮು ಪ್ರದೇಶದಲ್ಲಿ ಆರು ಸ್ಥಾನಗಳನ್ನು ಮತ್ತು ಕಾಶ್ಮೀರ ಕಣಿವೆಯಲ್ಲಿ ಕೇವಲ ಒಂದು ಸ್ಥಾನವನ್ನು ಹೆಚ್ಚಿಸಲು ಶಿಫಾರಸು ಮಾಡಿದೆ. ಪ್ರಾದೇಶಿಕ ಕ್ಷೇತ್ರಗಳ ಮರುವಿಂಗಡಣೆ ಮಾಡಲು ಆಯೋಗವು 2011 ರ ಜನಗಣತಿಯನ್ನು ಪರಿಗಣಿಸಿದೆ. ಅಂತಹ ಪ್ರಕ್ರಿಯೆಯಲ್ಲಿ ಜನಸಂಖ್ಯೆಯು ಒಂದು ಬಹುಮುಖ್ಯ ಮಾನದಂಡವಾಗಿರುತ್ತದೆ. ಜನಗಣತಿಯ ಪ್ರಕಾರ ಕಾಶ್ಮೀರದ ಜನಸಂಖ್ಯೆ 68.9 ಲಕ್ಷ ಮತ್ತು ಜಮ್ಮುವಿನ ಜನಸಂಖ್ಯೆ 53.8 ಲಕ್ಷ.

ಆಯೋಗವು ಕಾಶ್ಮೀರಕ್ಕೆ 47 ಮತ್ತು ಜಮ್ಮುವಿಗೆ 43 ಸ್ಥಾನಗಳನ್ನು ಶಿಫಾರಸು ಮಾಡಿದೆ. ಜನಸಂಖ್ಯೆಯ ಆಧಾರದ ಮೇಲೆ ನ್ಯಾಯಯುತವಾದ ಮರುವಿಂಗಡಣೆಯಲ್ಲಿ ಕಾಶ್ಮೀರಕ್ಕೆ 51 ಮತ್ತು ಜಮ್ಮುವಿಗೆ 39 ಸ್ಥಾನಗಳನ್ನು ನೀಡಬೇಕಿತ್ತು. 44% ಜನಸಂಖ್ಯೆಯ ಜಮ್ಮು 48% ಸ್ಥಾನಗಳನ್ನು ಹೊಂದಿದ್ದರೆ, 56% ಪ್ರತಿಶತದಷ್ಟು ಜನಸಂಖ್ಯೆಯನ್ನು ಹೊಂದಿರುವ ಕಾಶ್ಮೀರವು ಕೇವಲ 52% ಸ್ಥಾನಗಳನ್ನು ಹೊಂದಿರುತ್ತದೆ.

ಹೀಗಾಗಿ, ಈ ಶಿಫಾರಸುಗಳು ಸ್ಪಷ್ಟವಾಗಿ ರಾಜಕೀಯ ದುರುದ್ದೇಶದಿಂದ ಕೂಡಿವೆ, ಜಮ್ಮು ಮತ್ತು ಕಾಶ್ಮೀರದ ಜನಸಂಖ್ಯಾ ಸ್ವರೂಪ ಮತ್ತು ಸಂಯೋಜನೆಯನ್ನು ಬದಲಾಯಿಸುವ ಗುರಿಯನ್ನು ಹೊಂದಿವೆ. ಆದ್ದರಿಂದ, ಈ ಶಿಫಾರಸುಗಳನ್ನು ತಿರಸ್ಕರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಹೇಳಿದೆ.

ಬುಲ್‌ಡೋಜರ್ ರಾಜಕೀಯದ ವಿರುದ್ಧ ದಿಲ್ಲಿಯಲ್ಲಿ ಪ್ರತಿಭಟನಾ ಧರಣಿ



ಏಪ್ರಿಲ್ 28 ರಂದು ಎಡಪಕ್ಷಗಳು ದಿಲ್ಲಿಯಲ್ಲಿ ಸಂಘಟಿಸಿದ್ದ ಆರ್‌ಎಸ್‌ಎಸ್–ಬಿಜೆಪಿಯ ಸತತ ವಿಭಜಕ ಕೋಮು ಆಕ್ರಮಣದ ವಿರುದ್ಧದ ಪ್ರತಿಭಟನಾ ಧರಣಿಯಲ್ಲಿ ನೂರಾರು ಜನರು ಭಾಗವಹಿಸಿದ್ದರು. ಸಿಪಿಐ(ಎಂ), ಸಿಪಿಐ, ಸಿಪಿಐ (ಎಂಎಲ್), ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕಿನ ದೆಹಲಿ ರಾಜ್ಯ ಸಮಿತಿಗಳು ಇದನ್ನು ಸಂಘಟಿಸಿದ್ದವು.

ಧರಣಿಯನ್ನು ಉದ್ದೇಶಿಸಿ ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಪೊಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್, ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಅಮರ್ಜೀತ್ ಕೌರ್, ಸಿಪಿಐ (ಎಂಎಲ್)–ಲಿಬರೇಷನ್ ಪೊಲಿಟ್‌ಬ್ಯೂರೋ ಸದಸ್ಯರಾದ ಕವಿತಾ ಕೃಷ್ಣನ್ ಮತ್ತು ಎಡ ಪಕ್ಷಗಳ ಇತರ ನಾಯಕರು ಮಾತನಾಡಿದರು.

ಜಹಾಂಗೀರಪುರಿಯಲ್ಲಿ ನಡೆದ ಧ್ವಂಸ ಕಾರ್ಯಾಚರಣೆಯು ಆ ಪ್ರದೇಶದಲ್ಲಿ ಕೋಮು ಉದ್ವಿಗ್ನತೆಯನ್ನು ಸೃಷ್ಟಿಸುವ ನೀಚ ತಂತ್ರದ ಭಾಗವಾಗಿದೆ. ಹನುಮ ಜಯಂತಿಯ ಹೆಸರಿನಲ್ಲಿ ಸಶಸ್ತ್ರ ಮೆರವಣಿಗೆಯ ಮೂಲಕ ಪ್ರದೇಶದಲ್ಲಿ ಕೋಮು ಸೌಹಾರ್ದತೆಯನ್ನು ಕದಡುವ ಹಿಂದುತ್ವ ಶಕ್ತಿಗಳ ಹಿಂದಿನ ಪ್ರಯತ್ನದ ಮುಂದುವರಿಕೆಯಾಗಿದೆ ಎಂದು ಭಾಷಣಕಾರರು ಒತ್ತಿ ಹೇಳಿದರು. ಬುಲ್ಡೋಜರ್‌ನಿಂದ ನೆಲಸಮ ಮಾಡಲಾಗುತ್ತಿರುವುದು ಕೇವಲ ಕಾರ್ಮಿಕ ವರ್ಗದ ಕುಟುಂಬಗಳ ಬಳಿ ಇರುವ ಅಲ್ಪ–ಸ್ವಲ್ಪ ಸೊತ್ತುಗಳನ್ನಷ್ಟೇ ಅಲ್ಲ, ಬದಲಿಗೆ ಭಾರತೀಯ ಪ್ರಜಾಪ್ರಭುತ್ವದ ಮೂಲ ಹಂದರವನ್ನೇ ನಾಶಪಡಿಸಲಾಗುತ್ತಿದೆ ಎಂದು ಪ್ರತಿಭಟನಾ ಸಭೆಯಲ್ಲಿ ಮಾತನಾಡಿದವರು ಹೇಳಿದರು..

ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ತಮ್ಮ ಭಾಷಣದಲ್ಲಿ, ಬೆಲೆ ಏರಿಕೆ ಮತ್ತು ನಿರುದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ವೈಫಲ್ಯದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಆಳುವ ಪಕ್ಷವು ಕೋಮುವಾದಿ ತಂತ್ರಗಳನ್ನು ಬಳಸುತ್ತಿದೆ ಎಂದು ಒತ್ತಿ ಹೇಳಿದರು. ಕೋಮುವಾದದ ವಿರುದ್ಧದ ಹೋರಾಟವು ಜನರ ದಿನನಿತ್ಯದ ಸಮಸ್ಯೆಗಳ ಮೇಲೆ ತೀವ್ರಗೊಳ್ಳುತ್ತಿರುವ ಹೋರಾಟಗಳ ಜೊತೆಯಲ್ಲಿ ಸಾಗಬೇಕು ಎಂದು ಅವರು ಹೇಳಿದರು.

ಈ ಪ್ರತಿಭಟನಾ ಧರಣಿ ಕೋಮುವಾದದ ವಿರುದ್ಧ ಮತ್ತು ಜನರ ಏಕತೆ, ಜೀವನ ಮತ್ತು ಜೀವನೋಪಾಯದ ರಕ್ಷಣೆಗಾಗಿ ಹೋರಾಟವನ್ನು ತೀವ್ರಗೊಳಿಸುವ ಸಂಕಲ್ಪವನ್ನು ಪುನರುಚ್ಚರಿಸಿತು.

ಮಾಧ್ಯಮ ರಕ್ಷಣಾ ಕಾಯ್ದೆ ಮತ್ತು ಶಾಶ್ವತ ವೇತನ ನಿಗದಿ ವ್ಯವಸ್ಥೆಯನ್ನು ತರಬೇಕು ವಿಶಾಲ ತಳಹದಿಯ 'ಮಾಧ್ಯಮ ಮಂಡಳಿ'ಯನ್ನು ರಚಿಸಬೇಕು–ಪತ್ರಕರ್ತರ ಸಂಘಟನೆಗಳ ಆಗ್ರಹ

ರಾಷ್ಟ್ರೀಯ ಪತ್ರಕರ್ತರ ಮೈತ್ರಿಕೂಟ (ಎನ್‌ಎಜೆ) ಮತ್ತು ದೆಹಲಿ ಪತ್ರಕರ್ತರ ಸಂಘ(ಡಿಯುಜೆ) ಕಳೆದ ವರ್ಷದಲ್ಲಿ ಮಾಧ್ಯಮಗಳ ಮೇಲೆ ಹೆಚ್ಚುತ್ತಿರುವ ದಾಳಿಗಳ ಬಗ್ಗೆ ಆಘಾತ ಮತ್ತು ಕೋಪವನ್ನು ವ್ಯಕ್ತಪಡಿಸಿದೆ ಮತ್ತು ಮಾಧ್ಯಮ ವ್ಯಕ್ತಿಗಳ ಮೇಲೆ ಮನಬಂದಂತೆ ಜರುಗಿಸುತ್ತಿರುವ ಬಂಧನ ಮತ್ತು ಇತರ ಕಾನೂನು ಹೆಸರಿನ ಕ್ರಮಗಳಿಂದ ರಕ್ಷಣೆ ನೀಡಲು, ಈ ಮೂಲಕ ಪತ್ರಕರ್ತರು ನಿರ್ಭಯವಾಗಿ ವಾಕ್ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮತ್ತು ಅವನ್ನು ಎತ್ತಿ ಹಿಡಿಯಲು ಅನುವಾಗುವಂತೆ ತಕ್ಷಣವೇ ಸಮಗ್ರ ಕಾನೂನನ್ನು ತರಬೇಕು ಎಂದು ಒತ್ತಾಯಿಸಿವೆ. ಅಲ್ಲದೆ ಹಲ್ಲಿಲ್ಲದ 'ಪತ್ರಿಕಾ ಮಂಡಳಿ'(ಪ್ರೆಸ್ ಕೌನ್ಸಿಲ್)ಯ ಬದಲು ಇಡೀ ಮಾಧ್ಯಮಕ್ಕೆ ವಿಶಾಲ ತಳಹದಿಯ 'ಮಾಧ್ಯಮ ಮಂಡಳಿ'(ಮೀಡಿಯಾ ಕೌನ್ಸಿಲ್)ಯನ್ನು ರಚಿಸಬೇಕು ಎಂದು ಈ ಎರಡು ಪತ್ರಕರ್ತರ ಸಂಘಟನೆಗಳು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಒಂದು ಜಂಟಿ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿವೆ.

ಕಳೆದ ಕೆಲವು ವರ್ಷಗಳಲ್ಲಿ ಪತ್ರಕರ್ತರು ಮತ್ತು ಅವರ ಜತೆಗೆ ದುಡಿಯುವವರ ದುಃಸ್ಥಿತಿಯನ್ನು ಗಮನಿಸಿ, ನೈತಿಕ ಪ್ರಶ್ನೆಗಳನ್ನು ಪರಿಶೀಲಿಸುವುದರೊಂದಿಗೆ, ಇಂದು ಪ್ರಚಲಿತದಲ್ಲಿರುವ ಸಂಪೂರ್ಣ ಮಾಧ್ಯಮಶ್ರೇಣಿಗಳನ್ನು ಪರಿಶೀಲಿಸಲು, ಸಂಬಂಧಪಟ್ಟ ಎಲ್ಲರನ್ನೂ ಒಳಗೊಳ್ಳುವ ಒಂದು ಪರಿಣಿತ ಭಾರತೀಯ ಮಾಧ್ಯಮ ಆಯೋಗವನ್ನು ರಚಿಸಬೇಕು, ಇದು ಮಾಧ್ಯಮಗಳೊಂದಿಗೇ ಹೊಸ ಏಕಸ್ವಾಮ್ಯಗಳು ಮತ್ತು ಹಿತಾಸಕ್ತಿಗಳು ಅಷ್ಟೇನೂ ಎದ್ದು ಕಾಣುತ್ತಿರದ ಸಂದರ್ಭಗಳಲ್ಲಿ ರಚಿಸಿದ್ದ ಮೊದಲನೇ ಮತ್ತು ಎರಡನೇ ಪತ್ರಿಕಾ ಆಯೋಗಗಳ ರೀತಿಯಲ್ಲಿ ಇರಬೇಕು ಎಂದು ಈ ಎರಡು ಸಂಘಟನೆಗಳು ಹೇಳಿವೆ.

ಹೆಚ್ಚುತ್ತಿರುವ ಉದ್ಯೋಗ ನಷ್ಟಗಳು ಮತ್ತು ಹಲ್ಲೆಗಳು

ಇಂದು ಪತ್ರಕರ್ತರ ಮುಂದೆ ಉದ್ಯೋಗ ನಷ್ಟಗಳು ಮತ್ತು ಕಾರ್ಮಿಕ ಕಾನೂನುಗಳನ್ನು ಕಳಚಿ ಹಾಕುವ ಪ್ರಶ್ನೆಗಳಲ್ಲದೆ, ಪತ್ರಕರ್ತರನ್ನು ಜೈಲಿಗೆ ಹಾಕುವುದು, ಸುಳ್ಳು ಪ್ರಕರಣಗಳು, ದಾಳಿಗಳು, ಇಂಟರ್ನೆಟ್ ಸ್ಥಗಿತಗೊಳಿಸುವಿಕೆ, ಬೇಹುಗಾರಿಕೆ ತಂತ್ರಾಂಶ ಮುಂತಾದ ಬಹಿರಂಗ ಫ್ಯಾಸಿಸಂನ, ಆಡಳಿತಾತ್ಮಕ ಮತ್ತು ಪೊಲೀಸ್‌ನ ಅತಿರೇಕಗಳು ಮುಂತಾದ ಅನೇಕ ಸವಾಲುಗಳು ಡಿಜಿಟಲ್ ಮಾಧ್ಯಮಗಳನ್ನು 'ನಿಯಂತ್ರಿಸಲು' ಹೆಚ್ಚುತ್ತಿರುವ ಕ್ರಮಗಳು, ಡಿಜಿಟಲ್ ಸಾಮಾಜಿಕ ಮಾಧ್ಯಮಗಳನ್ನು 'ನಿಯಂತ್ರಿಸುವ' ಪ್ರಯತ್ನಗಳು, ಟ್ರೋಲಿಂಗ್, ವ್ಯಾಪಕ ಲೈಂಗಿಕ ದುರುಪಯೋಗ ಮುಂತಾದ ಬಹುಮುಖೀ ಸವಾಲುಗಳು ನಿಂತಿವೆ; ಅಂತ್ಯವಿಲ್ಲದ ನ್ಯಾಯಾಂಗ ವಿಳಂಬಗಳು ವರ್ಷಗಳಿಂದ ಪತ್ರಕರ್ತರಿಗೆ ನ್ಯಾಯವನ್ನು ನಿರಾಕರಿಸುತ್ತಿವೆ. ಇವುಗಳ ನಡುವೆಯೂ ಅನೇಕ ದಿಟ್ಟ ಮಾಧ್ಯಮ ವ್ಯಕ್ತಿಗಳು ಅಧಿಕಾರಸ್ಥರ ಮುಖದೆದುರು ಸತ್ಯ ಹೇಳುವುದನ್ನು ಮುಂದುವರೆಸಿದ್ದಾರೆ ಎಂದು ಎನ್‌ಎಜೆ ಹಾಗೂ ಡಿಯುಜೆ ಜಂಟಿ ಹೇಳಿಕೆ ನೆನಪಿಸಿದೆ.


ವಿಷಾದದ ಸಂಗತಿಯೆಂದರೆ, ಮಾಧ್ಯಮಗಳಲ್ಲೇ ಅಧಿಕಾರಲ್ಲಿರುವವರ ತುತ್ತೂರಿ ಊದುತ್ತ ತಮ್ಮ ವೃತ್ತಿಗೆ ಅಪಖ್ಯಾತಿ ತರುವ ಅನೇಕರು ಇದ್ದಾರೆ, ಮಾಧ್ಯಮದ ದೊರೆಗಳು ಈ ಪ್ರಕ್ರಿಯೆಯಲ್ಲಿ ಶಾಮೀಲಾಗಿದ್ದಾರೆ. ತಮಗೆ ಬೇಕಾದಂತೆ ವರ್ತಿಸಲು ಸಿದ್ಧವಿರುವ 'ಪತ್ರಕರ್ತ'ರನ್ನು ನೇಮಿಸಿಕೊಂಡಿದ್ದಾರೆ, ವಿವಿಧ ಟಿವಿ ಚಾನೆಲ್‌ಗಳಲ್ಲಿ ಅವರ ಪ್ರತಿರಾತ್ರಿಯ ಮಂಗಾಟಗಳು ಮಾಧ್ಯಮದ ವಿಶ್ವಾಸಾರ್ಹತೆಯನ್ನು ನಾಶಪಡಿಸಿವೆ. ದ್ವೇಷಭಾಷಣಗಳು ಮತ್ತು ಮತ್ತು ನಕಲಿ ಸುದ್ದಿಗಳು ಸಾಮಾನ್ಯ ಸಂಗತಿಯಾಗಿ ಬಿಟ್ಟಿವೆ ಎಂದು ಪತ್ರಕರ್ತರ ಸಂಘಟನೆಗಳು ಖೇದ ವ್ಯಕ್ತಪಡಿಸಿವೆ.

ಹೇಳಿದಂತೆ ಕೇಳಲು ಸಿದ್ಧರಿಲ್ಲದ ಪತ್ರಕರ್ತರ ಮೇಲೆ ಹಲ್ಲೆಗಳ ಸಂಖ್ಯೆ ತೀವ್ರವಾಗಿ ಹೆಚ್ಚಿದೆ. ಸರ್ಕಾರ ಯುಎಪಿಎಯಂತಹ ಕರಾಳ ಕಾಯಿದೆಗಳ ಅಡಿಯಲ್ಲಿ ಪತ್ರಕರ್ತರನ್ನು ಜೈಲಿಗಟ್ಟುವುದನ್ನು ಮುಂದುವರೆಸಿದೆ. ವಸಾಹತುಶಾಹಿ ಯುಗದ ದೇಶದ್ರೋಹದ

ಪುಟ 10 ಕ್ಕೆ

ಡಿವೈಎಫ್‌ಐ 11ನೇ ಅಖಿಲ ಭಾರತ ಸಮ್ಮೇಳನ

ಮೇ 12 ರಿಂದ 15ರ ವರೆಗೆ – ಪಶ್ಚಿಮ ಬಂಗಾಲದಲ್ಲಿ



ಡಿವೈಎಫ್‌ಐನ 11ನೇ ಅಖಿಲ ಭಾರತ ಸಮ್ಮೇಳನ ಪಶ್ಚಿಮ ಬಂಗಾಲದ ಸಾಲ್ಟ್ ಲೇಕ್‌ನಲ್ಲಿ ಮೇ 12 ರಿಂದ 15 ರ ವರೆಗೆ ನಡೆಯಲಿದೆ. "ಜಾತ್ಯತೀತ ಭಾರತ ಮತ್ತು ಉದ್ಯೋಗದ ಹಕಗಕಿಗಾಗಿ ಯುವಜನ ಹೋರಾಟ" ಎಂಬುದು ಸಮ್ಮೇಳನದ ಘೋಷವಾಕ್ಯವಾಗಿದ್ದು, ಸಮ್ಮೇಳನ ನಡೆಯುವ ಸಥಳಕ್ಕೆ ಡಿಯಗೊ ಮೆರಡೋನಾ ನಗರ್ ಎಂದು ಹೆಸರಿಡಲಾಗಿದೆ. ಭಾರತದ ಎಲ್ಲ ಭಾಗಗಳಿಂದ ಸುಮಾರು 650 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಇವರಲ್ಲಿ ಕನಿಷ್ಟ 20 ಶೇ. ಯುವತಿಯರು. ಮೇ 12 ರಂದು ಒಂದು ಬೃಹತ್ ಯುವರ್‍ಯಾಲಿಯೊಂದಿಗೆ ಸಮ್ಮೇಳನ ಆರಂಭವಾಗಲಿದೆ.

ಈ ಸಮ್ಮೇಳನಕ್ಕೆ ಸಂಬಂಧಪಟ್ಟಂತೆ ದೇಶಾದ್ಯಂತ ವಿಚಾರ ಸಂಕಿರಣಗಳು, ಸಂವಾದ, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ನಡೆಯುತ್ತಿವೆ.

ಸಂಪಾದಕೀಯ

ಪರಿಶಿಷ್ಟರಿಗೆ ಬಗೆದ ದ್ರೋಹ

2018-20 ಅವಧಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕಲ್ಯಾಣಕ್ಕೆಂದು ಮೀಸಲಿಟ್ಟ ಮೊತ್ತದಲ್ಲಿ 7885 ಕೋಟಿ ರೂ.ಗಳನ್ನು ಅನ್ಯ ಉದ್ದೇಶಗಳಿಗೆ ಬಳಸಿರುವುದು ಬಿಜೆಪಿ ಸರಕಾರದ ದುರಾಡಳಿತವನ್ನು ತೆರೆದಿಟ್ಟಿದೆ. ಶತಮಾನಗಳಿಂದಲೂ ತುಳಿತಕ್ಕೊಳಗಾಗಿ ಅತ್ಯಂತ ಅಮಾನವೀಯ, ಸಾಮಾಜಿಕ-ಆರ್ಥಿಕ ಪರಿಸ್ಥಿತಿಯಲ್ಲಿ ಈ ಸಮುದಾಯಗಳು ಬದುಕುತ್ತಿವೆ. ಇತರೆ ಜನ ವಿಭಾಗಗಳೊಂದಿಗೆ ಸಮಾನತೆ ಸಾಧಿಸಲು ಸಾಮಾಜಿಕ ನ್ಯಾಯದ ಮೂಲಕ ಸಮಾಜದ ಮುಖ್ಯವಾಹಿನಿಯೊಂದಿಗೆ ಬೆರೆಯಬೇಕು ಎನ್ನುವ ಮೂಲ ಆಶಯದಿಂದಲೂ ಈ ಸಮುದಾಯಗಳನ್ನು ವಂಚಿಸಿ ದ್ರೋಹ ಬಗೆದಿದೆ.

ಸಾಮಾಜಿಕ, ಆರ್ಥಿಕ ಅಸಮಾನತೆ ಮತ್ತು ತಾರತಮ್ಯಗಳನ್ನು ಗಮನದಲ್ಲಿರಿಸಿ ಸಂವಿಧಾನದ ಆಶಯಗಳ ನಿಜ ಜಾರಿಗಾಗಿ ಶೋಷಿತ ಸಮುದಾಯಗಳು ತಲೆ ಎತ್ತಿ ನಿಲ್ಲಬೇಕಾದರೆ ವಿಶೇಷ ಗಮನ ಮತ್ತು ವಿಶಿಷ್ಟ ಕಾರ್ಯಯೋಜನೆ ಅತ್ಯಾವಶ್ಯಕ ಎಂಬ ಕೇಂದ್ರದ ಆಯೋಗಗಳ ಸಲಹೆಯಂತೆ 70 ರ ದಶಕದಲ್ಲಿ ಎಸ್.ಸಿ.ಎಸ್.ಪಿ ಮತ್ತು1975 ರಲ್ಲಿ ಟಿ.ಎಸ್.ಪಿ. ಹೆಸರಿನಲ್ಲಿ ವಿಶೇಷ ಯೋಜನೆಗಳನ್ನು ಕೇಂದ್ರ ಸರಕಾರ ಜಾರಿಗೆ ತಂದಿತು. ಇದನ್ನು ಅನುಸರಿಸಿ ಪ್ರತಿ ಬಜೆಟ್ ನಲ್ಲಿ ಮೀಸಲಿಟ್ಟ ವಿಶೇಷ ಅಭಿವೃದ್ಧಿ ನಿಧಿ ಬೇರೆ ಉದ್ದೇಶಗಳಿಗೆ ಬಳಕೆಯಾಗುತ್ತಿತ್ತು ಮತ್ತು ಬಜೆಟಿನಲ್ಲಿ ಇಟ್ಟಿರುವ ಮೊತ್ತದ ಅಲ್ಪ ಭಾಗ ಮಾತ್ರ ಖರ್ಚಾಗಿ ಉಳಿದ ಹಣ ಮತ್ತೆ ಸರಕಾರದ ಖಜಾನೆಗೆ ಹಿಂತಿರುಗಿ ಬರುತ್ತಿತ್ತು. ಯೋಜನೆ ಆರಂಭಗೊಂಡ ಹಲವು ವರ್ಷಗಳಲ್ಲಿ ಮೀಸಲಿಟ್ಟ ಕಡಿಮೆ ಇದ್ದ ಮೊತ್ತ 2013 ರ ನಂತರದಲ್ಲಿ ಗಣನೀಯವಾಗಿ ಹೆಚ್ಚಳವನ್ನು ಕಂಡಿತು. ವಾಸ್ತವದಲ್ಲಿ ಈ ಸಮುದಾಯಗಳಿಗೆಂದು ಮೀಸಲಿಟ್ಟ ಹಣ ಪೂರ್ತಿಯಾಗಿ ದಕ್ಕದೇ ಕೇವಲ ಕನ್ನಡಿಯೊಳಗಿನ ಗಂಟಾಗಿ ಉಳಿದಿದ್ದೇ ಸತ್ಯ. ಆದಿವಾಸಿ, ದಲಿತ ಹಾಗೂ ಪ್ರಜಾಸತ್ತಾತ್ಮಕ ಜನಚಳುವಳಿಗಳ ತೀವ್ರ ಆಕ್ಷೇಪ ದಿಂದ ಹಂಚಿಕೆಯಾದ ಹಣ ಯಾವುದೇ ಕಾರಣಕ್ಕೆ ಹಿಂದೆ ವಾಪಸು ಆಗಬಾರದು ಮತ್ತು ಅದನ್ನು ಈ ಉದ್ದೇಶಕ್ಕೆ ಮಾತ್ರವೇ ಮರುಬಳಕೆ ಮಾಡುವಂತೆ ಒತ್ತಡ ಹೇರಲಾಗಿತ್ತು. ಇಂಥದ್ದೊಂದು ಕಾಯ್ದೆಯನ್ನು ರೂಪಿಸಬೇಕೆಂದು ಅವಿಭಜಿತ ಆಂಧ್ರಪ್ರದೇಶದಲ್ಲಿ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯ ಬಿ.ವಿ.ರಾಘವಲು ರವರ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹದ ಬಳಿಕ ಅಲ್ಲಿ ಕಾಯ್ದೆಯೊಂದನ್ನು ರೂಪಿಸಿ ಜಾರಿಗೆ ತಂದದ್ದು ಉಲ್ಲೇಖನೀಯ. ಅದರಂತೆ ಕರ್ನಾಟಕದಲ್ಲಿಯೂ 2013 ರಲ್ಲಿ ಬೆಳಗಾವಿ ಅಧಿವೇಶನದಲ್ಲಿ ಸಿದ್ಧರಾಮಯ್ಯನವರ ನೇತೃತ್ವದ ಕರ್ನಾಟಕ ಸರ್ಕಾರ ಅಂತಹ ಕಾಯ್ದೆಯೊಂದನ್ನು ರೂಪಿಸಿತು. ಅದರಂತೆ ಖರ್ಚಾಗದೇ ಉಳಿದ ಹಣ ಮುಂದಿನ ಸಾಲಿನ ಬಜೆಟ್ ಜೊತೆಯಲ್ಲಿ ಬಳಕೆಗೆ ಲಭ್ಯವಾಗುವಂತೆ, ಮೀಸಲಾದ ಹಣ ಖರ್ಚಾಗದಿದ್ದಲ್ಲಿ ಅದಕ್ಕೆ ಜಿಲ್ಲಾಧಿಕಾರಿ ಮತ್ತು ಜಿಲ್ಲೆಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸುವುದು ಮತ್ತು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವ ಅಧಿಕಾರ ಇರುವ, ಜನಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಬಜೆಟ್ನಲ್ಲಿ ಹಣ ತೆಗೆದಿಡುವ ಮಹತ್ವದ ಅಂಶಗಳನ್ನು ಕಾಯ್ದೆ ಒಳಗೊಂಡಿದೆ. ಹೀಗಿರುವಾಗಲೂ ಪ್ರತಿ ಆಯ ವ್ಯಯದ ಸಾಲಿನ ವರ್ಷದಲ್ಲಿ ಸಾವಿರಾರು ಕೋಟಿ ಖರ್ಚಾಗದ ಮೊತ್ತ ಉಳಿದು 2020 -21ರ ಸಾಲಿನಲ್ಲಿ ಅಂತಹ ಮೊತ್ತ 10,000 ಕೋಟಿಗೂ ಮೀರಿ ಮತ್ತೇ ಹೊಸ ಬಜೆಟ್ನಲ್ಲಿ ಸೇರಿತ್ತು. ಕಳೆದ ವರ್ಷದ ಬಜೆಟ್ ಹಣವೂ ಸೇರಿದಂತೆ ಈ ಯೋಜನೆ 30 ಸಾವಿರ ಕೋಟಿ ರೂ.ಗಳನ್ನು ದಾಟಿತ್ತು . ಈ ಭಾರಿ ಎಂಬಂತೆ ಕಂಡರೂ ಸರ್ಕಾರದ ಕಾಳಜಿ ಮತ್ತು ಕಾರ್ಯವೈಖರಿಯ ವೈಫಲ್ಯತೆಯ ಮೇಲೆ ಬೆಳಕು ಚೆಲ್ಲುತ್ತದೆ. ಇಷ್ಟಾದರೂ ಸರಕಾರ ಯಾವೊಬ್ಬ ಅಧಿಕಾರಿಯ ಮೇಲೆ ಕಾನೂನು ಕ್ರಮಗಳನ್ನೇಕೆ ಜರುಗಿಸಿಲ್ಲ? ಈಗ ದೊರೆತ ಮಾಹಿತಿಯಂತೆ ಖರ್ಚು ಮಾಡಿದ ಹಣದಲ್ಲಿಯೇ 7885 ಕೋಟಿ ರೂ.ಗಳನ್ನು ರಸ್ತೆ, ಸೇತುವೆ, ಕುಡಿಯುವ ನೀರು, ನೀರಾವರಿ ಮುಂತಾದ ನಾಗರಿಕ ಸೌಲಭ್ಯಗಳನ್ನು ಒದಗಿಸಲೆಂದು ದುರ್ಬಳಕೆ ಮಾಡಲಾಗಿದೆ. ಈ ಹಣ ಬಹುತೇಕ ದಲಿತ, ಆದಿವಾಸಿಗಳ ನೆಲೆಗಳಿರದ ಪ್ರದೇಶಗಳಲ್ಲಿಯೇ ವೆಚ್ಚವಾಗಿರುತ್ತದೆ ಕೂಡ. ಇಂತಹ ದುರುಪಯೋಗಕ್ಕೆ ಮುಕ್ತಾವಕಾಶ ಕಲ್ಪಿಸುವಂತೆ ಈ ಕಾಯ್ದೆಯಲ್ಲಿ 7(ಡಿ) ಎನ್ನುವ ಕಳ್ಳ ಕಿಂಡಿಯನ್ನು ಸರಕಾರ ಇಟ್ಟಿದೆ. ಅದರ ಮೂಲಕ ಹಸಿದ ಈ ಸಮುದಾಯಗಳ ಅನ್ನಕ್ಕೆ ಕೈಹಾಕಿ ದೋಚಲು ಅವಕಾಶ ಮಾಡಿದೆ. ಕಾಯ್ದೆಯ ಈ ಅಂಶಕ್ಕೆ ತಿದ್ದುಪಡಿಯನ್ನು ತರಬೇಕೆಂದು ಪ್ರಬಲ ಆಗ್ರಹವಿದ್ದರೂ ಸರ್ಕಾರ ಪ್ರಜ್ಞಾಪೂರ್ವಕವಾಗಿಯೇ ನಿರ್ಲಕ್ಷಿಸುತ್ತಿದೆ. ಬಿಜೆಪಿ ಸರ್ಕಾರ ಮಾಡಿರುವ ವಂಚನೆಯ ಪ್ರಮಾಣವನ್ನು ಗಮನಿಸಿದರೆ ಯಾಕೆ ತಿದ್ದುಪಡಿಯನ್ನು ತಂದು ಬಿಗಿ ಕ್ರಮ ವಹಿಸಲು ಹಿಂದೇಟು ಹಾಕಲಾಗುತ್ತಿದೆ ಎನ್ನುವುದು ನಿಚ್ಚಳವಾಗಿ ಅರ್ಥವಾಗುತ್ತದೆ. ಇದು ಕೇವಲ ಬಿಜೆಪಿ ಮಾತ್ರವಲ್ಲ ಹಿಂದಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಇದೇ ನೀತಿಯನ್ನು ಅನುಸರಿಸುತ್ತಾ ಬಂದಿರುವುದು ಅವುಗಳ ಪಾಳೇಗಾರಿ ಹಿತಾಸಕ್ತಿಗಳ ಪರಿಣಾಮವಾಗಿದೆ. ಅತ್ಯಂತ ಕಡಿಮೆ ಪ್ರತಿರೋಧ ಒಡ್ಡುವ ಎಸ್.ಸಿ, ಎಸ್.ಟಿ, ಅಲೆಮಾರಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಎಂದರೆ ಯಾಮಾರಿಸುವ ಪ್ರಚಾರದ 'ತುಟಿ ಸೇವೆ' ಎಂದೇ ಈ ಪಕ್ಷಗಳು ಭಾವಿಸಿವೆ.

ಸಾಮಾನ್ಯವಾಗಿ, ಎಸ್ಸಿ ಮತ್ತು ಎಸ್ಟಿ ಮೀಸಲಾತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಮುದಾಯಗಳ ನಡುವೆ ಈ ವಿಶೇಷ ನಿಧಿಯೂ ಸಮನಾಗಿ ಹಂಚಿಕೆ ಆಗುತ್ತದೆ ಎನ್ನುವುದು ಕೂಡ ಹುಸಿಯಾಗಿದೆ. ಬಹುತೇಕ ಆದಿವಾಸಿ ಮತ್ತು ಅತ್ಯಂತ ದುರ್ಬಲ ದಲಿತ, ಅಲೆಮಾರಿ ವಿಭಾಗಗಳು ಇಂತಹ ವಿಶೇಷ ನಿಧಿಯ ಒಂದೆರಡು ಹನಿಗಳನ್ನು ಬಳಸಿಕೊಳ್ಳಲು ಅಸಮರ್ಥವಾಗಿವೆ. ಪರಿಣಾಮವಾಗಿ, ಈಗಲೂ ಅತ್ಯಂತ ದೀನ ಸ್ಥಿತಿಯಲ್ಲಿಯೇ ಬದುಕುತ್ತಿವೆ. ಸೋಲಿಗರು ಪಣಿಯ, ಪಂಜರಿ, ಎರವರು, ಜೇನು ಕುರುಬರು,ಬೆಟ್ಟ ಕುರುಬರು,ಕೊರಗರು ಹಸಲರು ಮುಂತಾದ ಬಹಳಷ್ಟು ಸಮುದಾಯಗಳು ಒಂದರ ನಂತರ ಮತ್ತೊಂದರಂತೆ ಅಳಿವಿನಂಚಿಗೆ ಸರಿಯುತ್ತಿವೆ. ಈ ಸಮುದಾಯಗಳ ಕಲ್ಯಾಣಕ್ಕೆಂದು ಮೀಸಲಿಟ್ಟ ಸಾವಿರಾರು ಕೋಟಿ ಹಣ ಅವರ ಮೂಲಭೂತ ಸಮಸ್ಯೆಗಳ ಪರಿಹಾರದ ನೆರವಿಗೆ ಬರುತ್ತಿಲ್ಲ.

ಒಂದು ವೇಳೆ ಈ ಸಮುದಾಯಗಳ ಬದುಕಿನಲ್ಲಿ ಪರಿವರ್ತನೆ ತರಲು ಹಣವನ್ನು ಬಳಸುವುದೆಂದರೆ ಅವರಿಗೆ ಮುಖ್ಯವಾಗಿ ಭೂಮಿ, ನಿವೇಶನ, ವಸತಿ ಮತ್ತು ಶಿಕ್ಷಣ ಹಾಗೂ ನಾಗರಿಕ ಸೌಲಭ್ಯಗಳು ಸಿಗುವಂತಾಗಬೇಕು. ಜೊತೆಗೆ ಪ್ರಗತಿಗೆ ಸಹಾಯಕವಾಗುವಂತೆ ಇತರೆ ಯೋಜನೆಗಳೂ ಜಾರಿಯಾಗಬೇಕು. ಅರಣ್ಯ ಹಕ್ಕುಗಳು ದೊರೆತು ಅವರ ಪಾರಂಪರಿಕ ಬದುಕು, ಜ್ಞಾನ ಮತ್ತು ಸಂಸ್ಕೃತಿ ಉಳಿಸಿಕೊಳ್ಳಬೇಕು. ಒಟ್ಟಾರೆ ಜೀವನ ನಿರ್ವಹಣೆ ಉತ್ತಮಗೊಳ್ಳಬೇಕು. ಮುಖ್ಯವಾಗಿ, ಈ ಸಮುದಾಯಗಳು ಬದುಕುಳಿಯ ಬೇಕೆಂದರೆ ಆರೋಗ್ಯ ರಕ್ಷಣೆ ಹಾಗೂ ವರ್ಷ ಪೂರ್ತಿ ಪೌಷ್ಟಿಕ ಆಹಾರದ ನಿರಂತರ ನೀಡಿಕೆ ಆಗಬೇಕು. ಆದರೆ ದಲಿತ ಮತ್ತು ಆದಿವಾಸಿ ಸಮುದಾಯಗಳ ಏಳಿಗೆಗೆ, ಸಾಮಾಜಿಕ ನ್ಯಾಯದ ಪುಟ 14 ಕ್ಕೆ

ಮುಖ್ಯಮಂತ್ರಿ ಬದಲಾವಣೆಯ ಮಾತು ಈಗೇಕೆ?

ಈ ವಾರ

ಎಸ್.ವೈ. ಗುರುಶಾಂತ್

ಕರ್ನಾಟಕದ ಸಚಿವ ಸಂಪುಟದ ಪುನರ್ರಚನೆ ಅಥವಾ ಸೇರ್ಪಡೆಯ ಸುತ್ತ ಚರ್ಚೆಗಳು ಈ ವಾರದ ಆರಂಭದಲ್ಲಿ ಬಿರುಸಾಗಿದ್ದವು. ಅದಕ್ಕಾಗಿ ಕೆಲವರ ದೆಹಲಿ ದಂಡಯಾತ್ರೆ ನಡೆದಿದ್ದವು. ಆದರೀಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬದಲಾಯಿಸುವ ಮಾತುಗಳು ರಾಜ್ಯದ ರಾಜಕೀಯ ವಲಯವನ್ನು ಗೊಂದಲಗೊಳಿಸಿವೆ. ಇದಕ್ಕೆ ಚಾಲನೆ ಕೊಟ್ಟವರು ಯಾರೋ ಸಾಧಾರಣ ನಾಯಕರಲ್ಲ. ಕರ್ನಾಟಕದ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಬಿ.ಎಲ್. ಸಂತೋಷ್ ಅವರು 'ಪದೇ ಪದೇ ಮುಖ್ಯಮಂತ್ರಿಗಳ ಬದಲಾವಣೆ ಬಿಜೆಪಿಯ ಶಕ್ತಿ' ಎಂದು ಮೈಸೂರಿನ ಕಾರ್ಯಕ್ರಮವೊಂದರಲ್ಲಿ ನೀಡಿದ ಹೇಳಿಕೆ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ಮಾತ್ರವಲ್ಲ, ಇದನ್ನು ಅನುಸರಿಸಿ ಅಮಿತ್ ಶಾ ರಾಜ್ಯಕ್ಕೆ ವಿಶೇಷ ಭೇಟಿಯನ್ನು ನೀಡಿ ಕುತೂಹಲ ಹೆಚ್ಚಿಸಿರುವುದು ಸಿ.ಎಂ. ಬದಲಾವಣೆಯ ಸುದ್ದಿಗಳಿಗೆ ಹೆಚ್ಚಿನ ಶಕ್ತಿಯನ್ನು ತಂದುಕೊಟ್ಟಿದೆ. ಇದರ ಜೊತೆಯಲ್ಲಿ 'ಪಕ್ಷ ವನ್ನು ಅಧಿಕಾರಕ್ಕೆ ತರಲು ಎಲ್ಲಾ ತ್ಯಾಗಕ್ಕೂ ನಾವು ಸಿದ್ಧರಿರಬೇಕು' ಎಂದು ಬೊಮ್ಮಾಯಿ ಅವರು ಹೇಳಿರುವುದು ಸಹಜ ಮಾತು ಎಂದು ಅನಿಸುವುದಿಲ್ಲ.

ರಾಜ್ಯದಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲು ಬಿಜೆಪಿ ಹೈಕಮಾಂಡ್ ಮತ್ತು ಆರೆಸ್ಸೆಸ್ ನಡೆಸಿರುವ ತಂತ್ರಗಾರಿಕೆಗಳಜಾರಿಯ ಪೂರ್ವ ಸಿದ್ಧತೆಯ ಮುನ್ಸೂಚನೆಯೂ ಇರಬಹುದು. ಆರ್.ಎಸ್.ಎಸ್. ಈಗಾಗಲೇ ಹಲವು ತಿಂಗಳುಗಳ ಹಿಂದಿನಿಂದಲೇ ಇಂತಹ ಒಂದು ಸೂಚನೆಯನ್ನು ನೀಡುತ್ತಿದೆ. ಹಂತಹಂತವಾಗಿ ಯಡಿಯೂರಪ್ಪನವರಿಂದ ಬೊಮ್ಮಾಯಿ ಅವರನ್ನು ಬಿಡಿಸಿ ಪೂರ್ಣಪ್ರಮಾಣದಲ್ಲಿ ಅಧಿಕಾರದ ನಿರ್ದೇಶನ ಸೂತ್ರಗಳನ್ನು ಕೈಗೆತ್ತಿಕೊಂಡಿದೆ. ಯಡಿಯೂರಪ್ಪನವರನ್ನು ಹಣಿದ ಮೇಲಾದರೂ ಅರ್ಧದಷ್ಟು ನಿಯಂತ್ರಣ ಮತ್ತು ನಿರ್ಧಾರದ ಶಕ್ತಿಗೆ ಯಡಿಯೂರಪ್ಪನವರ ಕೈಯಲ್ಲಿತ್ತು. ಅದನ್ನು ತಪ್ಪಿಸಲೆಂದೇ ಬೊಮ್ಮಾಯಿ ಅವರನ್ನು ಅಧಿಕಾರಕ್ಕೆ ತಂದದ್ದು ಎನ್ನುವುದು ಗೊತ್ತಿರುವ ಸಂಗತಿ.


ರಾಜ್ಯದಲ್ಲಿ ಕೋಮುದ್ವೇಷದ ಆಕ್ರಮಣಕಾರಿ ಚಟುವಟಿಕೆಗಳು ಹಿಂಸಾಚಾರ ಮತ್ತು ಪ್ರಚೋದನಾತ್ಮಕ ಕೃತ್ಯಗಳನ್ನು ಸಂಘಪರಿವಾರ ನಿರಾತಂಕವಾಗಿ ನಡೆಸಿದ್ದರೂ, ಸಾರ್ವಜನಿಕ ಸಂಪತ್ತನ್ನು ನಿರಾತಂಕದಿಂದ ಲೂಟಿ ಮಾಡುತ್ತಿದ್ದರೂ ಆರ್.ಎಸ್.ಎಸ್. ಗೆ ಸಮಾಧಾನ ಇದ್ದಂತಿಲ್ಲ.

ಆರ್.ಎಸ್.ಎಸ್. ಅಂದುಕೊಂಡಂತೆ ಅದರ ಅಜೆಂಡಾಗಳನ್ನು ಮುಂದೊತ್ತಲು ಬಸವರಾಜ ಬೊಮ್ಮಾಯಿ ಕೂಡ ಒಂದು ಸಣ್ಣ ಪ್ರಮಾಣದಲ್ಲಿ ಅಡ್ಡಿ ಎನಿಸುತ್ತಿರಬೇಕು. ಸಿ.ಎಂ.ಸ್ಥಾನದಲ್ಲಿ ತಮ್ಮ ಕೈ ಗೊಂಬೆಯನ್ನು ಸ್ಥಾಪಿಸಬೇಕು ಎನ್ನುವುದು ಸತತ ಇದ್ದೇ ಇದೆ.

ಪ್ರಬಲ ಜಾತಿಗೆ ಸೇರಿದ ಮುಖ್ಯಮಂತ್ರಿಯೊಬ್ಬರು ತಮ್ಮ ಸ್ಥಾನ ಬಲದಿಂದ ವ್ಯಕ್ತಿಗತ ಪ್ರಭಾವ ಬಲಗೊಳ್ಳದಂತೆ ಅಸ್ಥಿರತೆಯ ಭಾವನೆಯನ್ನು ಸೃಷ್ಟಿಸುವುದು ಇದರ ಒಂದು ಮುಖ್ಯ ವಾದಂತಹ ತಂತ್ರ ಇರಬಹುದು.

ಬಿಜೆಪಿ ಮತ್ತು ಆರೆಸ್ಸೆಸ್ ನಾಯಕತ್ವ ಹೇಳಿಕೊಳ್ಳುವಂತೆ ಬೊಮ್ಮಾಯಿಯವರ ಆಡಳಿತ ಹಗರಣಗಳಿಂದ ಕೂಡಿದೆ ಎನ್ನುವುದು ನಿಜವಾದರೂ ಅವರೊಬ್ಬರೇ ಕಾರಣ ಎನ್ನುವುದೂ ಕೂಡ ಅರ್ಧಸತ್ಯ. 'ಕೋತಿ ತಾನು ತಿಂದು ಮೇಕೆಗಳ ಬಾಯಿಗೆ ಬೆಣ್ಣೆ ಸವರಿದ' ದ್ಯೋತಕ. ನಿಜಕ್ಕೂ ಈ ಸರಕಾರದ ಎಲ್ಲಾ ಭ್ರಷ್ಟಾಚಾರ ಹಗರಣಗಳಲ್ಲಿ ಯಾರ ಪಾಲು ಎಷ್ಟುಲೆಷ್ಟು? ಆರೆಸ್ಸೆಸ್ಸಿನ ಪಾಲೆಸ್ಟು? ಬಿಜೆಪಿ ಹೈಕಮಾಂಡಿನ ಪಾಲೆಷ್ಟು? ಎನ್ನುವುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಮಾಡಬಾರದ್ದನ್ನೆಲ್ಲಾ ಮುಖ್ಯಮಂತ್ರಿ, ಮಂತ್ರಿಗಳಿಂದ ಮಾಡಿಸಿ ಅದರ ಲಾಭವನ್ನೆಲ್ಲ ಬಾಚಿಕೊಂಡ ಬಳಿಕ ಕೊನೆಗೆ ಕುಖ್ಯಾತಿಗೆ ಒಳಗಾದರೆ ಅದರ ಅಪಕೀರ್ತಿಯನ್ನು ಅವರ ತಲೆಗೆ ಕಟ್ಟುವುದು ಮತ್ತು ನೀತಿ ಬೋಧನೆಯ ಪಾಠ ಮಾಡುವುದು ಆರೆಸ್ಸೆಸ್-ಬಿಜೆಪಿ ಹೈಕಮಾಂಡ್ ಗಳ ಚಾಳಿ. ಅವರ ಪಕ್ಷದೊಳಗಿನಿಂದಲೇ ಬಹಿರಂಗ ಆರೋಪಗಳ ಧಾಳಿ ನಡೆಸುವುದು, ವಿರೋಧ ಪಕ್ಷಗಳಿಗೆ, ಮಾಧ್ಯಮಗಳಿಗೆ ಮಾಹಿತಿ-ಫೈಲ್ ಗಳ ಪೂರೈಕೆ ವ್ಯವಸ್ಥಿತವಾಗಿಯೇ ಮಾಡಲಾಗುತ್ತದೆ. ಶೂದ್ರ ಮುಖ್ಯಮಂತ್ರಿಗಳನ್ನು ಅಪಖ್ಯಾತಿಗೆ ಒಳಪಡಿಸಿ ಪದಚ್ಯುತಗೊಳಿಸುವ ಹುನ್ನಾರವೂ ಕೂಡ ನಡೆಯುತ್ತದೆ ಎನ್ನುವ ಆರೋಪಗಳು ಇವೆ. ಇದನ್ನು ಬಿಎಸ್ ಯಡಿಯೂರಪ್ಪ ಮುಖ್ಯಮಂತ್ರಿಯಾಗಿರುವಾಗ ಕಂಡಾಗಿದೆ. ಆಗ ಎರಡುವರೆ ವರ್ಷ ಸಂಪನ್ಮೂಲವನ್ನು ಚೆನ್ನಾಗಿ ಕ್ರೋಡೀಕರಿಸಿ ಮತ್ತು ಎರಡುವರೆ ವರ್ಷ ಚುನಾವಣೆಗೆ ಗೆಲ್ಲಲು ಬೇಕಾದ ರೀತಿಯಲ್ಲಿ ಕೆಲಸ ಮಾಡಿ ಎನ್ನುವ ನಿರ್ದೇಶನ ಯಡಿಯೂರಪ್ಪನವರ ಕಾಲದಲ್ಲಿ ಆಂತರಿಕ ವಲಯದಲ್ಲಿ ಸುತ್ತಾಡುತ್ತಿರುವುದನ್ನೂ ಕಂಡಾಗಿದೆ.

ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಜನತೆಯ ಮೇಲೆ ಹೊರಿಸುತ್ತಿರುವ ಹೊರೆ ಗಳಿಂದಾಗಿ ಹೆಚ್ಚುತ್ತಿರುವ ತೀವ್ರತರ ಅತೃಪ್ತಿ, ರಾಜ್ಯಗಳ ಸಂಪನ್ಮೂಲಗಳ ಸಂಗ್ರಹದ ಕುಸಿತ, ಕೇಂದ್ರ ನೀಡಬೇಕಾದ ಪಾಲಿನ ಕಡಿತ ಹಣಕಾಸಿನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಪ್ರತಿಯೊಂದಕ್ಕೂ ಹೊರ ಸಾಲಗಳಿಂದ ನಿರ್ವಹಿಸಬೇಕೆಂಬ ವಿಪರೀತ ಸಾಲದ ಹೊರೆಯನ್ನು ಹೇರಿ ರಾಜ್ಯದಲ್ಲಿನ ಅಮೂಲ್ಯ ಆಸ್ತಿಗಳನ್ನು ಸಾಲ ಕೊಟ್ಟವರ ಸಂಸ್ಥೆಗಳಿಗೆ ಅಡವು ನೀಡಬೇಕಾಗಿಯೂ ಬಂದಿದೆ. ಇದೆಲ್ಲಾ ರಾಜ್ಯಗಳ ಅಭಿವೃದ್ಧಿಗೆ ಬಿದ್ದಿರುವ ಭಾರಿ ಹೊಡೆತ. ಇದರ ನಡುವೆಯೇ ಸಾರ್ವಜನಿಕ ಸಂಪನ್ಮೂಲಗಳ ಲೂಟಿ ಮತ್ತು ವ್ಯಾಪಕ ಪುಟ 4 ಕ್ಕೆ



ಕರಾವಳಿ ಜಿಲ್ಲೆಗಳಲ್ಲಿ ಮೇ ದಿನದ ಸಂಭ್ರಮ

ವರದಿ: **ವಾ.ಉ.**



ಮೇ ದಿನ ವಿಶ್ವ ಕಾರ್ಮಿಕರ ದಿನವನ್ನು ದ.ಕ. ಜಿಲ್ಲೆಯಲ್ಲಿ ಒಂದೆರಡು ಪ್ರಮುಖ ಪಟ್ಟಣಗಳಲ್ಲಿ ಹೆಚ್ಚಾಗಿ ಆಚರಿಸಲಾಗುತ್ತಿತ್ತು. ಆದರೆ ಈ ಸಾಲಿನಲ್ಲಿ ಸಣ್ಣ ಪುಟ್ಟ ಪೇಟೆಯನ್ನೂ ಒಳಗೊಂಡು ವ್ಯಾಪಕವಾಗಿ ಆಚರಿಸಬೇಕೆಂದು ಸಿಐಟಿಯು ದ.ಕ.ಜಿಲ್ಲಾ ಸಮಿತಿ ತೀರ್ಮಾನ ಮಾಡಿತ್ತು. ಅದರಂತೆ ಮೇ 1 ರಂದು ಅಲ್ಲಲ್ಲಿ ಸ್ಥಳೀಯ ಸಿಐಟಿಯು ಘಟಕಗಳು ಒಂದೋ ಪೂರ್ವಾಹ್ನ ಇಲ್ಲವೇ ಸಾಯಂಕಾಲ ವಿಶ್ವ ಕಾರ್ಮಿಕ ದಿನವನ್ನು ಸಂಭ್ರಮದಿಂದ ಆಚರಿಸಿತು.

ಉಡುಪಿ ಜಿಲ್ಲೆಯಲ್ಲೂ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಮೇ ದಿನ ಆಚರಿಸಲು ಸಿಐಟಿಯು ಜಿಲ್ಲಾ ಸಮಿತಿ ತೀರ್ಮಾನಿಸಿದ ಮೇರೆಗೆ ಸಂಭ್ರಮದಿಂದ ಆಚರಣೆಗಳು ನಡೆದುವು.

ಮಂಗಳೂರು:

ನಗರದಲ್ಲಿ ಸಿಐಟಿಯು ಕಾರ್ಮಿಕ ಸಂಘಟನೆಗಳ ಜೊತೆಗೆ ನೌಕರ ಸಂಘಟನೆಗಳನ್ನೂ ಸಾಮೂಹಿಕ ಜನಪರ ಸಂಘಟನೆಗಳನ್ನು ಒಳಗೊಂಡು ಮೇ ದಿನ ಆಚರಣಾ ಸಮಿತಿಯನ್ನು ರಚಿಸಿ, ಈ ಸಮಿತಿಯು ಎರಡು ಬಾರಿ ಸಭೆ ಸೇರಿ ಸಿದ್ಧತೆ ನಡೆಸಿತು. ಮೇ 1ರ ಅಪರಾಹ್ನ ಮಂಗಳೂರು ನಗರದ ಆರ್‌ಟಿಓ ವೃತ್ತದಿಂದ ಸಭಾ ಕಾರ್ಯಕ್ರಮ ನಡೆದ ಕ್ಲಾಕ್ ಟವರ್ ವೃತ್ತದ ವರೆಗೆ ಚೆಂಡೆ ಮೇಳ, ಬ್ಯಾಂಡು ತಂಡಗಳಿಂದೊಡಗೂಡಿ ಆಕರ್ಷಕ ಮೆರವಣಿಗೆ ನಡೆಸಿತು. ಸಿಐಟಿಯು ಸಂಘಟನೆಗೆ ಸೇರಿದ ಕಾರ್ಮಿಕರಲ್ಲದೆ, ಬ್ಯಾಂಕ್ ವಿಮಾ ನೌಕರರ ಸಂಘಟನೆಗಳ ನೌಕರರೂ ಮೆರವಣಿಗೆ ಹಾಗೂ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಕಾರ್ಮಿಕ ಮುಖಂಡ ಸುಕುಮಾರ್ ತೊಕ್ಕೊಟ್ಟು, ಬ್ಯಾಂಕ್ ಅಧಿಕಾರಿಗಳ ಸಂಘದ ರಾಘವ ಕೆ, ಸುರೇಶ್ ಹೆಗ್ಡೆ, ವಿಮಾ ನೌಕರರ ಸಂಘದ ಅಲ್ಬನ್ ಮಸ್ಕರೇನಸ್, ಬ್ಯಾಂಕ್ ನೌಕರರ ಸಂಘದ ಪುರುಷೋತ್ತಮ, ಬೀಡಿ ಕಾರ್ಮಿಕರ ಸಂಘದ ಜಯಂತಿ ಬಿ.ಶೆಟ್ಟಿ, ನ್ಯಾಯವಾದಿಗಳ ಸಂಘದ ಯಶವಂತ ಮರೋಳಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮೇ ದಿನಾ ಆಚರಣಾ ಸಮಿತಿಯ ಕಾರ್ಯಾಧ್ಯಕ್ಷ ಡಾ.ಕೃಷ್ಣಪ್ಪ ಕೊಂಚಾಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರವಿಚಂದ್ರ ಕೊಂಚಾಡಿ ಸ್ವಾಗತಿಸಿದರು. ನವೀನ್ ಕೊಂಚಾಡಿ ವಂದಿಸಿದರು. ಯೋಗೀಶ್ ಜಪ್ಪಿನಮೊಗರು ಕಾರ್ಯಕ್ರಮ ನಿರೂಪಿಸಿದರು.

ಉಡುಪಿ:

ಉಡುಪಿಯಲ್ಲಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ನೇತೃತ್ವದಲ್ಲಿ ಸೌಹಾರ್ದ ಮೇ ದಿನವನ್ನು ಅಲ್ಲಿನ ಅಜ್ಜರಕಾಡಿನ ಹುತಾತ್ಮ ಸ್ಮಾರಕದ ಎದುರು ಬಹಿರಂಗ ಸಭೆಯ ಮೂಲಕ ಆಚರಿಸಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮತ್ತಿತರ ಮುಖಂಡರು ಮಾತನಾಡಿದರು. ಜಂಟಿ ಸಮಿತಿಯ ಸಂಚಾಲಕ ಕೆ.ಶಂಕರ್, ಸಿಐಟಿಯು ಮುಖಂಡರಾದ ಶಶಿಧರ ಗೊಲ್ಲ, ಕವಿರಾಜ್, ವಿಮಾ ನೌಕರರ ಸಂಘದ ಪ್ರಭಾಕರ ಕುಂದರ್, ಡೆರಿಕ್ ರೆಬೆಲ್ಲೋ, ಉಮೇಶ್, ಎಐಟಿಯುಸಿಯ ಶಶಿಕಲಾ, ಸಂಜೀವ, ಎಐಬಿಇಎಯ ರಮೇಶ್, ವಿದ್ಯಾ ನಾಯಕ್ ಉಪಸ್ಥಿತರಿದ್ದರು. ಇದಕ್ಕೂ ಮೊದಲು ಉಡುಪಿ ಸಿಂಡಿಕೇಟ್ ಸರ್ಕಲ್‌ನಿಂದ ಹುತಾತ್ಮರ ಸ್ಮಾರಕದ ವರೆಗೆ ಮೆರವಣಿಗೆ ನಡೆಯಿತು.

ಕುಂದಾಪುರ:

ಪ್ರತೀ ವರ್ಷವೂ ಅತ್ಯಂತ ವಿಜೃಂಭಣೆಯಿಂದ ಮೇ ದಿನ ಆಚರಣೆ ನಡೆಯುವ ಊರು ಕುಂದಾಪುರ. ಇಡೀ ಪಟ್ಟಣವನ್ನು ಕೆಂಪು ಬಣ್ಣದಿಂದ ಅಲಂಕರಿಸಿದ್ದಲ್ಲದೆ, ಪ್ರತಿ ವರ್ಷದಂತೆ ಪ್ರಮುಖ ರಸ್ತೆಯಲ್ಲಿ ಸಾಗಿ ಬಂದ ಮೆರವಣಿಗೆ ಶಾಸ್ತ್ರಿ ವೃತ್ತದಲ್ಲಿ ಒಟ್ಟಾಗಿ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಸಮಿತಿ ಸದಸ್ಯರಾದ ಎಚ್.ನರಸಿಂಹ, ಸುರೇಶ್ ಕಲ್ಲಾಗರ ಮಾತನಾಡಿದರು. ಬೀಡಿ ಕಾರ್ಮಿಕ ಸಂಘಟನೆಯ ಮುಖಂಡ ಮಹಾಬಲ ವಡೇರಹೋಬಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಟ್ಟಡ ಕಾರ್ಮಿಕ ಮುಖಂಡ ದಾಸು ಭಂಡಾರಿ, ಪುರಸಭಾ ಮಾಜಿ ಅಧ್ಯಕ್ಷ ವಿ.ನರಸಿಂಹ, ಬೀಡಿ ಯೂನಿಯನಿನ ಬಲ್ಕೀಸ್, ಅಂಗನವಾಡಿ ಸಂಘಟನೆಯ ಭಾಗ್ಯ ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಕಳ, ಬ್ರಹ್ಮಾವರ, ಬೈಂದೂರು:

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಸಿಐಟಿಯು ಕಾರ್ಮಿಕ ಸಂಘಟನೆ ಇತ್ತೀಚೆಗೆ ರಚನೆಯಾದುದು. ಇದೇ ಪ್ರಥಮ ಬಾರಿಗೆ ಕಾರ್ಕಳ ಬಸ್ ನಿಲ್ದಾಣದ ಬಳಿ ಸಿಐಟಿಯು ಕಾರ್ಮಿಕರು ಬಹಿರಂಗ ಸಭೆ ಮೂಲಕ ಮೇ ದಿನ ಆಚರಿಸಿದರು.

ಬ್ರಹ್ಮಾವರದಲ್ಲಿ ಸಿಐಟಿಯು ಕಾರ್ಮಿಕ ಸಂಘಟನೆ ಬಹಳಷ್ಟು ಕಾಲದಿಂದ ಇದ್ದು, ಮೇ ದಿನವನ್ನು ಪ್ರತೀ ವರ್ಷ ಆಚರಿಸಲಾಗುತ್ತಿದೆ. ಬಸ್ ನಿಲ್ದಾಣದ ಬಳಿ ಈ ಬಾರಿಯೂ ಮೇ ದಿನವನ್ನು ಆಚರಿಸಿತು.

ಬೈಂದೂರಿನಲ್ಲಿ ಸಿಐಟಿಯು ಕಚೇರಿಯಿಂದ ಮೆರವಣಿಗೆ ಹೊರಟು ಬೈಂದೂರು ಪೇಟೆಯಲ್ಲಿ ಬಹಿರಂಗ ಸಭೆ ನಡೆಸುವ ಮೂಲಕ ಮೇ ದಿನವನ್ನು ಆಚರಿಸಲಾಯಿತು.

ಕುಪ್ಪೆಪದವು:

ಗುರುಪುರ ವಲಯದ ಕುಪ್ಪೆಪದವಿನಲ್ಲಿ ಕಾರ್ಮಿಕರು ಆಕರ್ಷಕ ಮೆರವಣಿಗೆ ನಡೆಸಿ, ಬಳಿಕ ಬಹಿರಂಗ ಸಭೆಯಾಗಿ ಮೇ ದಿನ ಆಚರಿಸಿದರು. ಸಭೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ವಲಯ ರೈತ ಕಾರ್ಮಿಕ ಮುಖಂಡ ಸದಾಶಿವ ದಾಸ್ ಮಾತನಾಡಿದರು. ಬೀಡಿ ಕಾರ್ಮಿಕ ಸಂಘದ ವಸಂತಿ ಕುಪ್ಪೆಪದವು, ಡಿವೈಎಫ್ಐನ ಮನೋಜ್ ವಾಮಂಜೂರು ಉಪಸ್ಥಿತರಿದ್ದರು.

ವಾಮಂಜೂರು:

ಗುರುಪುರ ವಲಯದ ವಾಮಂಜೂರಿನಲ್ಲಿ ನಡೆದ ಮೇ ದಿನದ ಬಹಿರಂಗ ಸಭೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ವಲಯ ರೈತ ಕಾರ್ಮಿಕ ಮುಖಂಡ ಸದಾಶಿವ ದಾಸ್ ಮಾತನಾಡಿದರು. ಬಾಬು ಸಾಲ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಮನೋಜ್ ವಾಮಂಜೂರು, ಇಬ್ರಾಹಿಂ ದೇವಸ ಉಪಸ್ಥಿತರಿದ್ದರು.

ತೊಕ್ಕೊಟ್ಟು:

ಉಳ್ಳಾಲ ವಲಯ ಸಿಐಟಿಯು ಆಶ್ರಯದಲ್ಲಿ ತೊಕ್ಕೊಟ್ಟು ಬಸ್ ನಿಲ್ದಾಣದ ಬಳಿ ಬಹಿರಂಗ ಸಭೆ ಮೂಲಕ ಮೇ ದಿನ ಆಚರಿಸಲಾಯಿತು. ಅದಕ್ಕೂ ಮೊದಲು ತೊಕ್ಕೊಟ್ಟು ಮೈದಾನದ ಬಳಿಯಿಂದ ಬಸ್ ನಿಲ್ದಾಣದ ವರೆಗೆ ಆಕರ್ಷಕ ಮೆರವಣಿಗೆಯನ್ನು ನಡೆಸಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ, ಸಿಐಟಿಯು ವಲಯ ಮುಖಂಡರಾದ ಜಯಂತ ನಾಯಕ್, ಪದ್ಮಾವತಿ ಶೆಟ್ಟಿ, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಕೆ.ಕೃಷ್ಣಪ್ಪ ಸಾಲಿಯಾನ್ ಮಾತನಾಡಿದರು. ಕಾರ್ಮಿಕ ಮುಖಂಡರಾದ ಸುಂದರ ಕುಂಪಲ, ಜನಾರ್ದನ, ವಿಲಾಸಿನಿ ಸಭಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೆಳ್ತಂಗಡಿ:

ತಾಲೂಕು ಕಚೇರಿ ಎದುರು ನಡೆದ ಮೇ ದಿನದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ಮುಖಂಡರಾದ ಶಿವ ಕುಮಾರ್, ವಸಂತ ನಡ, ರೈತ ಮುಖಂಡರಾದ ಹರಿದಾಸ್ ಮಾತನಾಡಿದರು. ಅದಕ್ಕೂ ಮೊದಲು ಸಿಐಟಿಯು ಕಚೇರಿಯಿಂದ ಸಭೆ ನಡೆದ ಸ್ಥಳದವರೆಗೆ ಮೆರವಣಿಗೆ ನಡೆಸಲಾಯಿತು.

ಮೂಡಬಿದ್ರಿ:

ಮೂಡಬಿದ್ರಿ ಸಮಾಜ ಮಂದಿರದಲ್ಲಿ ನಡೆದ ಮೇ ದಿನದ ಸಭೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮೂಡಬಿದ್ರಿ ವಲಯ ಮುಖಂಡರಾದ ರಮಣಿ ಮಾತನಾಡಿದರು. ಕಾರ್ಮಿಕ ಮುಖಂಡರಾದ ರಾಧ, ಗಿರಿಜಾ, ರೈತ ಮುಖಂಡರಾದ ಸುಂದರ ಶೆಟ್ಟಿ ಉಪಸ್ಥಿತರಿದ್ದರು.

ಮಂಗಳೂರಿನ ಲೇಡಿಗೋಷನ್ ಜಂಕ್ಷನ್, ಗುರುಪುರ ವಲಯದ ಮಳಲಿ, ಬಿಸಿರೋಡ್, ಸುಳ್ಯದಲ್ಲೂ ಮೇ ದಿನ ಆಚರಿಸಲಾದ ವರದಿಗಳು ಬಂದಿವೆ.

ಮುಖ್ಯಮಂತ್ರಿ ಬದಲಾವಣೆಯ ಮಾತು ಈಗೇಕೆ?........ ಪುಟ 3 ರಿಂದ

ಭ್ರಷ್ಟಾಚಾರ. ಇದನ್ನು ಮುಚ್ಚಿಕೊಳ್ಳಲು ನಾಯಕತ್ವ ಬದಲಾವಣೆಯಂತಹ ಕಾಗಕ್ಕ–ಗುಬ್ಬಕ್ಕನ ಕಥೆಗಳನ್ನು ಸಂಘ ಪರಿವಾರ ಮತ್ತು ಬಿಜೆಪಿ ಹೈಕಮಾಂಡ್ ಮುನ್ನೆಲೆಗೆ ತರುತ್ತಲೇ ಇರುತ್ತವೆ.

ಇಡೀ ಅವಧಿ ಮಂತ್ರಿಗಳನ್ನಾಗಿಸಲು, ಮುಖ್ಯಮಂತ್ರಿಯನ್ನು ಬದಲಿಸಲು ಇರುವವರನ್ನು ತೆಗೆಯಲು ಮತ್ತು ಬೇಡವಾದವರನ್ನು ಉರುಳಿಸಲು ಸದಾ ಸಂಚುಗಳನ್ನು ರೂಪಿಸುತ್ತಿರುವುದು ಬಿಜೆಪಿ ಕಾರ್ಯಾಚರಣೆಯನ್ನು ನಡೆಸುತ್ತಿದೆ ದುರಾಡಳಿತದ ಫಲಶ್ರುತಿ. ಮುಂಬರುವ ಕರ್ನಾಟಕ ವಿಧಾನಸಭೆಯ ಚುನಾವಣೆಯ ಸಿದ್ಧತೆಗಳು ಅದರ ಕಾರ್ಯತಂತ್ರ ಹಾಗೂ ಸೂತ್ರಗಳನ್ನು ನೇರವಾಗಿ ಗೃಹಸಚಿವ ಅಮಿತ್ ಶಾ ವಹಿಸಿಕೊಂಡಿದ್ದಾರೆ ಮತ್ತು ಅವರದೇ ಆದ ಒಂದು ತಂಡ ಎಂದು ಬಿಜೆಪಿ ಹೇಳಿದೆ. ಈಗಿರುವ ಹಿರಿಯ ನಾಯಕರನ್ನು ಕೆಳಗಿಳಿಸಿ ಹೊಸಬರನ್ನು ಸ್ಥಾನಾಂತರಗೊಳಿಸುವ ಆಪರೇಷನ್ ಜಾರಿಯಲ್ಲಿದೆಯಂತೆ. ಅಂದರೆ ಇನ್ನೂ ಕೆಲವರನ್ನು ಕೆಳಗಿಳಿಸುವುದು ಅಧಿಕಾರಕ್ಕೆ ಅಂಟಿಕೊಂಡೇ ಇರುತ್ತೇವೆ ಎನ್ನುವವರನ್ನು ಪದಚ್ಯುತಗೊಳಿಸುವ ಕಾರ್ಯತಂತ್ರವೂ ಒಂದಿರಬಹುದು. ಒಟ್ಟಾರೆ ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯ ಮತ್ತು ಜನದ್ರೋಹಿ ನೀತಿಗಳನ್ನು ಮುಚ್ಚಿಟ್ಟು ಜನರನ್ನು ಹಾದಿತಪ್ಪಿಸುವ ವರಸೆಗಳು, ಅಧಿಕಾರ ಲಾಲಸೆಯ ಗುದ್ದಾಟಗಳು ಮತ್ತಷ್ಟೂ ಹೆಚ್ಚಬಹುದು.





ಬಿಸಿಯೂಟ ನೌಕರರಿಂದ ತೊಕ್ಕೊಟ್ಟಿನಲ್ಲಿ ಪ್ರತಿಭಟನೆ:

ಬಿಸಿಯೂಟ ನೌಕರರು 60 ವರ್ಷ ಪೂರೈಸಿದ್ದಲ್ಲಿ ಅವರನ್ನು ವಜಾಗೊಳಿಸುವ ಕರ್ನಾಟಕ ಸರಕಾರದ ನೀತಿಯ ಪರಿಣಾಮವಾಗಿ 19 ವರ್ಷಗಳಿಂದ ಯೋಜನೆಯಲ್ಲಿ ದುಡಿಯುತ್ತಿರುವ ರಾಜ್ಯದ 12000 ಬಿಸಿಯೂಟ ನೌಕರರು, ಪಿಂಚಣಿ ಕೂಡಾ ಇಲ್ಲದೆ ಮಾರ್ಚ್ 31 ರಂದು ದಿಢೀರನೇ ನಿವೃತ್ತರಾಗಿದ್ದಾರೆ. ಇದರ ವಿರುದ್ಧ ಹಾಗೂ ಬಿಸಿಯೂಟ ನೌಕರರ ವಿವಿದ ಬೇಡಿಕೆಗಳನ್ನು ಆಗ್ರಹಿಸಿ ಸಿಐಟಿಯು ಸಂಯೋಜಿತ ಅಕ್ಷರದಾಸೋಹ ನೌಕರರ ಸಂಘದಿಂದ ಮೇ 4 ರಿಂದ 10ರ ವರೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶಾಸಕರ ಕಚೇರಿಯ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಅದರಂತೆ ದ.ಕ.ಜಿಲ್ಲೆಯ ವಿವಿದ ವಲಯಗಳ ಬಿಸಿಯೂಟ ಕಾರ್ಮಿಕರು ಬೇರೆ ಬೇರೆ ದಿನಗಳಲ್ಲಿ ಬಿಸಿಯೂಟ ಕಾರ್ಮಿಕರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸ್ಥಳೀಯ ಶಾಸಕರ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ಆರಂಭಿಸಿದ್ದರೆ.

ಮೇ 5 ರಂದು ತೊಕ್ಕೊಟ್ಟಿನಲ್ಲಿ ಬಸ್ ನಿಲ್ದಾಣದ ಬಳಿ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ರಾಜ್ಯ ಅಕ್ಷರದಾಸೋಹ ನೌಕರರ ಸಂಘದ ಅಧ್ಯಕ್ಷರಾದ ವಸಂತ ಆಚಾರಿ ಮಾತನಾಡಿದರು. ಅಕ್ಷರದಾಸೋಹ ನೌಕರರ ಜಿಲ್ಲಾ ಸಂಘದ ಗೌರವಾಧ್ಯಕ್ಷೆ ಪದ್ಮಾವತಿ ಶೆಟ್ಟಿ, ಉಳ್ಳಾಲ ವಲಯ ಸಿಐಟಿಯು ಮುಖಂಡ ಜಯಂತ ನಾಯ್ಕ್, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ವಿಲಾಸಿನಿ ಮಾತನಾಡಿದರು.

ಪ್ರತಿಭಟನೆಯ ಬಳಿಕ ಪ್ರತಿಭಟನಾಕಾರರು ಮೆರವಣಿಗೆಯಲ್ಲಿ ಉಳ್ಳಾಲ ತಹಶೀಲ್ದಾರ್ ಕಚೇರಿವರೆಗೆ ಸಾಗಿ ಬಳಿಕ ತಹಶೀಲ್ದಾರರ ಮೂಲಕ ಸ್ಥಳೀಯ ಶಾಸಕರಿಗೆ ಮನವಿಯನ್ನು ಸಲ್ಲಿಸಿದರು.

ಮೇ 4 ರಂದು ಅಕ್ಷರದಾಸೋಹ ನೌಕರರು ಮಂಗಳೂರು ಉತ್ತರ ಹಾಗೂ ಮಂಗಳೂರು ದಕ್ಷಿಣ ಶಾಸಕರುಗಳ ಕಚೇರಿಗಳ ಎದುರು ಪ್ರತಿಭಟನೆ ನಡೆಸಿ ಅವರಿಗೆ ತಮ್ಮ ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರತಿಭಟನೆಯನ್ನುದ್ದೇಶಿಸಿ ಅಕ್ಷರದಾಸೋಹ ನೌಕರರ ಸಂಘದ ದ.ಕ.ಜಿಲ್ಲಾ ಗೌರವಾಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಾರ್ಯಾಧ್ಯಕ್ಷೆ ಭವ್ಯಾ, ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡಿದರು.

ಅಂತಿಮವಾಗಿ ಮೇ 10 ರಂದು ಮಂಗಳೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಯಲಿರುವುದಾಗಿ ಮುಖಂಡರಾದ ವಸಂತ ಆಚಾರಿ ತಿಳಿಸಿದರು.

ಕಾರ್ಮಿಕ ಚಳುವಳಿಯ ಮಹತ್ವವನ್ನು ದುರ್ಬಲಗೊಳಿಸುವವರ ವಿರುದ್ಧ ಹೋರಾಟ ಬಲಗೊಳ್ಳಲಿ

ವಿಶ್ವ ಕಾರ್ಮಿಕ ದಿನಾಚರಣೆಯನ್ನು ಇಂದು ರಾಜ್ಯವ್ಯಾಪಿ ಆಚರಿಸಲಾಯಿತು. ವಿವಿಧ ಕಾರ್ಮಿಕ ಸಂಘಟನೆಗಳು ಜೆಸಿಟಿಯು ನೇತೃತ್ವದಲ್ಲಿ ಮೆರವಣಿಗೆ ನಡೆಸಿದವು.

ಬೆಂಗಳೂರಿನಲ್ಲಿ ನಡೆದ ಕಾರ್ಮಿಕ ದಿನಾಚಾರಣೆಗೆ ಸುಪ್ರೀಂಕೋರ್ಟ್ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿಯಾದ ವಿ.ಗೋಪಾಲ ಗೌಡರವರು ಚಾಲನೆಯನ್ನು ನೀಡಿದರು. ಕಾರ್ಮಿಕ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಶಾಂತಿಯುತ ಮೆರವಣಿಗೆ ನಡೆಸಲು ಅನುಮತಿ ಕೋರಿ ಕಾರ್ಮಿಕ ಸಂಘಟನೆಗಳು ಕರ್ನಾಟಕ ಹೈಕೋರ್ಟ್‌ನಲ್ಲಿ ಮನವಿ ಮಾಡಿದ್ದವು. ರಾಜ್ಯ ಸರಕಾರ ಮೆರವಣಿಗೆ ನಡೆಸದಂತೆ ನಿರ್ದೇಶನ ನೀಡಿದೆ ಎಂದು ಮೆರವಣಿಗೆಗೆ ಅನುಮತಿ ನಿರಾಕರಣೆ ಮಾಡಿದ್ದರು. ಆದರೂ ಕಾರ್ಮಿಕರು ಐಕ್ಯತೆಯ ಮೂಲಕ ಮೆರವಣಿಗೆ ನಡೆಸಿ ' ಕಾರ್ಮಿಕ ನಿರ್ದರಿಸಿದರೆ ಏನೂ ಬೇಕಾದರೂ ಮಾಡಬಲ್ಲ' ಎಂಬುದನ್ನು ನಿರೂಪಿಸಿ ತೋರಿಸಿದ್ದೀರಿ ಎಂದರು.

ಕಾರ್ಮಿಕ ದಿನಾಚರಣೆ ಸ್ಮರಿಸುವ ಮೆರವಣಿಗೆಯನ್ನು ನಿಲ್ಲಿಸುವುದು ಇಡೀ ಚಳವಳಿಯ ಮಹತ್ವವನ್ನು ಕಡೆಗಣಿಸುತ್ತದೆ ಮತ್ತು ಕಾರ್ಮಿಕರ ಹೋರಾಟಗಳನ್ನು ದುರ್ಬಲಗೊಳಿಸುತ್ತದೆ. ಸ್ವಾತಂತ್ರ್ಯದ 75 ವರ್ಷಗಳ ಹೊರತಾಗಿಯೂ, ಸ್ವತಂತ್ರ ಭಾರತದಲ್ಲಿ ಕಾರ್ಮಿಕರು ಎರಡನೇ ದರ್ಜೆಯ ಪ್ರಜೆಗಳಾಗಿಯೇ ಉಳಿದಿದ್ದಾರೆ ಎಂಬ ಕಟುವಾದ ವಾಸ್ತವವನ್ನು ಇದು ಮತ್ತೊಮ್ಮೆ ನೆನಪಿಸಿದೆ ಎಂದು ಸರಕಾರ ಮತ್ತು ಹೈಕೋರ್ಟ್ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು.

ಹಿರಿಯ ಚಿಂತಕರೂ ದುಡಿಯುವ ಜನರ ಪರವಾಗಿ ಸದಾ ದನಿ ಎತ್ತುವ ಡಾ.ಜಿ.ರಾಮಕೃಷ್ಣ ಅವರು ತಮ್ಮ ಎಂಭತ್ತನೇ ವಯಸ್ಸಿನಲ್ಲೂ ಗಟ್ಟಿ ಧ್ವನಿಯಲ್ಲಿ ಕಾರ್ಮಿಕ ಚಳುವಳಿ ಒಟ್ಟುಗೂಡಿ ಮೇ ದಿನಾಚರಣೆ ಆಚರಿಸುತ್ತಿರುವುದರ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಈ ಐಕ್ಯತೆಯನ್ನು ಎಲ್ಲಾ ಜನವಿರೋಧಿ ನೀತಿಗಳ ವಿರುದ್ಧದ ಹೋರಾಟಗಳಲ್ಲಿ ಪ್ರದರ್ಶನ ಮಾಡಿ ಬಂಡವಾಳಶಾಹಿ ವ್ಯವಸ್ಥೆಯನ್ನು ಸಮಾಜವಾದಿ ವ್ಯವಸ್ಥೆಯನ್ನಾಗಿ ಬದಲಾಯಿಸುವುದೊಂದೇ ದಾರಿ ಎಂದು ಹೇಳಿದರು.

ಕಾನೂನು ತಜ್ಞರು ಹಾಗೂ ಕಾರ್ಮಿಕ ಮುಖಂಡರೂ ಆಗಿರುವ ಪ್ರೊ. ಬಾಬು ಮ್ಯಾಥ್ಯೂ ಅವರು ಮೇ ದಿನಾಚರಣೆಯ ಮಹತ್ವವನ್ನು ವಿವರಿಸುತ್ತಾ ಕನಿಷ್ಠ ಕೂಲಿಯ ಅಗತ್ಯತೆಯ ಬಗ್ಗೆ ತಿಳಿಸಿದರು.

ನಂತರದಲ್ಲಿ ಸಭೆಯನ್ನು ಉದ್ದೇಶಿಸಿ ಜೆಸಿಟಿಯುನ ಎಲ್ಲಾ ಘಟಕಗಳ ಮುಖಂಡರು ಮಾತನಾಡಿದರು.

ಬೀದರ, ಕಲಬುರ್ಗಿ, ಕೊಪ್ಪಳ, ಬಳ್ಳಾರಿ, ವಿಜಯನಗರ, ಯಾದಗಿರಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಹಾಸನ, ರಾಮನಗರ, ಚಾಮರಾಜ ನಗರಗಳಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು. ಕೈಗಾರಿಕಾ ವಲಯದ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಕಟ್ಟಡ ಕಾರ್ಮಿಕರು, ಹಮಾಲಿ, ಪ್ಲಾಂಟೇಶನ್ ಕಾರ್ಮಿಕರು ಭಾಗಿಯಾಗಿದ್ದರು.























ಹಬ್ಬಗಳು, ಜಾತ್ರೆಗಳು ಮತ್ತು ಕಮ್ಯುನಿಸ್ಟರು

ಧರ್ಮದ ಬಗ್ಗೆ ಮಾರ್ಕ್ಸ್‌ವಾದದ ತಿಳುವಳಿಕೆ ಎಂದರೆ ತಮ್ಮ ಬದುಕಿನ ಸಂಕಟಗಳ ಕಾರಣಗಳೇನು, ಎಲ್ಲಿಂದ ಹೇಗೆ ಈ ಸಂಕಟಗಳು ಎರಗುತ್ತವೆ ಎಂದು ಅರಿವಾಗದ ಮನುಷ್ಯ ಸಮುದಾಯ ಕೊನೆಗೆ ದೇವರ, ಧರ್ಮದ ಮೊರೆ ಹೋದರು. ವರ್ಗ ಸಮಾಜ ಉದಿಸಿದಂದಿನಿಂದ ಇಲ್ಲಿಯವರೆಗೆ ದುಡಿಯುವವರ ದಮನ, ಶೋಷಣೆಗಳು ಮುಂದುವರೆಯುತ್ತಿರುವವರೆಗೆ ಧರ್ಮ, ದೇವರ ಬಗೆಗಿನ ನಂಬಿಕೆಗಳು ಮುಂದುವರೆಯುತ್ತವೆ. ಜನರಿಗೆ ತಮ್ಮ ಸಂಕಟಗಳ ಕಾರಣಗಳು ಅರಿವಾಗುವುದರ ಜೊತೆಗೆ ಕಾರಣಗಳ ವಿರುದ್ಧ, ತಮ ದಮನ, ಶೋಷಣೆಗಳನ್ನು ಎದುರಿಸಿ ನಿಂತಾಗ, ತಮ್ಮ ಮೇಲೆ ತಮಗೇ ನಂಬಿಕೆ, ಸ್ವ ವಿಶ್ವಾಸ ಬಲಿತಾಗ ದೇವರ, ಧರ್ಮದ ಬಗೆಗಿನ ನಂಬಿಕೆಗಳು ಮಾಯವಾಗುತ್ತವೆ.

— ಜಿ.ಎನ್. ನಾಗರಾಜ —

ಪ್ರಗತಿಪರರು ಹಬ್ಬ, ಜಾತ್ರೆಗಳೆಂದರೆ ಮೂಗು ಮುರಿಯುವುದು, ದೂರ ಉಳಿಯುವುದು, ಅವುಗಳನ್ನು ಹಾಸ್ಯ ಮಾಡುವುದು, ಅವುಗಳಲ್ಲಿ ಭಾಗವಹಿಸುವ ಸಾಮಾನ್ಯ ಜನರನ್ನು ಕೀಳಾಗಿ ನೋಡುವುದು ದಶಕಗಳಿಂದ ಕಾಣುತ್ತಾ ಬಂದಿರುವ ವರ್ತನೆಗಳು. ಇದಕ್ಕೆ ಅಪವಾದಗಳಿಲ್ಲ ಎಂದಲ್ಲ. ಆದರೆ ಜನರ ಮನಸ್ಸಿನಲ್ಲಿ ಇಂತಹ ಬಿಂಬ ಮೂಡಿರುವುದಂತೂ ನಿಜ. ಪ್ರಗತಿಪರರ ಜೊತೆ ಸೇರಿ ಅನೇಕ ಕಮ್ಯುನಿಸ್ಟರೂ ಇಂತಹ ವರ್ತನೆಗಳನ್ನು ಹಲವು ಬಾರಿ ತೋರಿದ್ದಾರೆ. ಇದೇ ರೀತಿಯ ಅಭಿಪ್ರಾಯ ಅವರ ಬಗ್ಗೆಯೂ ಮೂಡಿದೆ.

ಇದು ಹಬ್ಬ, ಜಾತ್ರೆಗಳನ್ನು, ಅದರಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವ ಜನರನ್ನು ದಾರಿ ತಪ್ಪುವಂತೆ ಮಾಡುವುದರಲ್ಲಿ ಕೋಮುವಾದಿಗಳು ಯಶಸ್ವಿಯಾಗಲು ಅನುವು ಮಾಡಿಕೊಟ್ಟಿದೆ.

ಹಬ್ಬ, ಜಾತ್ರೆ ಎಂದರೆ ಅವು ದೇವರು, ಧರ್ಮ, ಅವುಗಳ ನಿರಂತರ ಜೊತೆಗಾರರಾದ ಮೂಢ ನಂಬಿಕೆ,ಕಂದಾಚಾರಗಳು ಎಂಬ ಭಾವನೆ ಬಹಳ ಜನ ಸಂಗಾತಿಗಳಲ್ಲಿ.

ಆದರೆ ಹಬ್ಬಗಳಿಗೂ ದೇವರುಗಳಿಗೂ ಯಾವುದೇ ಸಂಬಂಧವಿಲ್ಲದ ಅನೇಕ ಹಬ್ಬಗಳಿವೆ. ಜನರ ಬದುಕಿನ ಸಂತಸಗಳಲ್ಲಿ ಅವುಗಳ ಮೂಲ ಇದೆ. ಸಂಕ್ರಾಂತಿ, ಉಗಾದಿ, ದೀಪಾವಳಿ ಅಂತಹ ಕೆಲವು. ರೈತರ ಸುಗ್ಗಿ, ಅವರ ಬಿಡುವು, ಬೇಟೆಯ ಸುಗ್ಗಿ, ಹಾಲಿನ ಸುಗ್ಗಿ ಇಂತಹ ಹಬ್ಬಗಳ ಆಚರಣೆಗೆ ಕಾರಣವಾಗಿವೆ. ಇನ್ನೂ ಹಲವು ಹಬ್ಬಗಳು ಮೂಲದಲ್ಲಿ ಕೇವಲ ಜನರ ಬದುಕಿನಿಂದಲೇ ಹುಟ್ಟಿದ್ದರೂ ನಂತರದ ಕಾಲಘಟ್ಟಗಳಲ್ಲಿ ದೇವರನ್ನು ಪ್ರವೇಶಗೊಳಿಸಲಾಗಿದೆ. ಗೌರಿ ಗಣೇಶ ಅಂತಹ ಒಂದು ಹಬ್ಬ. ಅದೊಂದು ನೀರಾವರಿ ಕೃಷಿಯ ಆಚರಣೆ. ಅದರಲ್ಲಿ ಗಣದ ಮುಖ್ಯಸ್ಥರಾಗಿ ಭಾಗವಹಿಸುತ್ತಿದ್ದ ಗೌರಿ, ಗಣಪತಿಗಳು ಮುಂದೆ ದೇವರುಗಳೆಂದು ಪರಿಗಣಿತವಾದರು. ಓಣಂ ಮತ್ತು ದೀಪಾವಳಿಗಳಲ್ಲಿ ಎಂಬ ಕೃಷಿಯ ಸಂಭ್ರಮದಲ್ಲಿ ಹಿರೇರ ಹಬ್ಬವೆಂದು ಗತಿಸಿದವರನ್ನು ನೆನಪಿಸಿಕೊಳ್ಳುವ ಆಚರಣೆಗಳೂ ಮಿಳಿತವಾಗಿವೆ. ಮತ್ತೆ ಕೆಲವು ಆಹಾರ, ಔಷಧಿ ಮತ್ತಿತರ ಅಗತ್ಯಗಳನ್ನು ಒದಗಿಸಿ ಪ್ರಾಣ ಉಳಿಸಿದ ಸಸ್ಯ, ಪ್ರಾಣಿಗಳನ್ನು ನೆನಪಿಸಿಕೊಳ್ಳುವ ಆಚರಣೆಗಳಾಗಿ ಆರಂಭವಾಗಿ ದೇವರುಗಳ, ದೇವತೆಗಳ ರೂಪವನ್ನು ಪಡೆದಿವೆ. ಎಲ್ಲಮ್ಮ, ಮಾರಮ್ಮ ಜಾತ್ರೆ ಪಂಜುರ್ಲಿ ಕೋಲಗಳು ಇಂತಹವು.

ಈ ಹಬ್ಬಗಳಲ್ಲಿ ಸಾಮಾನ್ಯವಾಗಿ ಒಳ್ಳೆಯ ಊಟವೇ ಪ್ರಧಾನ. ಜೊತೆಗೆ ಉಲ್ಲಾಸ, ಉತ್ಸಾಹ ತರುವ ಸಾಮೂಹಿಕ ಆಟಗಳು, ಚಟುವಟಿಕೆಗಳು.

ಜನರ ಹಲವು ಸಮಸ್ಯೆಗಳ ಪರಿಹಾರದಲ್ಲಿ ಜನರ ಜೊತೆಗಿರುವ ಸಾಮಾಜಿಕ ಚಳುವಳಿಗಾರರು ಇಂತಹ ಹಬ್ಬಗಳಲ್ಲಿ ದೂರವಿರುವ ಬದಲಾಗಿ ಜನರ ಸಂತಸದಲ್ಲಿ ಭಾಗವಹಿಸುವುದು ಅವಶ್ಯ. ಹಲವು ರೀತಿಯಲ್ಲಿ ಭಾಗವಹಿಸಬಹುದು ಮತ್ತು ಜನರ ಸಂತಸವನ್ನು ಹೆಚ್ಚಿಸಬಹುದು. ಜನರಲ್ಲಿ ಅರಿವು ಮೂಡಿಸಲೂ ಇವುಗಳನ್ನು ಬಳಸಿಕೊಳ್ಳಬಹುದು. ಹಾಗೆಂದ ಕೂಡಲೇ ಹಬ್ಬಗಳಲ್ಲಿ ಪ್ರವೇಶ ಮಾಡಿರುವ ದೇವರ, ಧರ್ಮದ ಆಚರಣೆಗಳಲ್ಲಿ ಭಾಗವಹಿಸಬೇಕೆಂದಲ್ಲ.

ಬಿಜಾಪುರದಲ್ಲಿ ಒಂದು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಯನ ಶಿಬಿರ. ಬೃಹತ್ ವಿಧಾನ ಸೌಧ ಚಲೋ ಹೋರಾಟದ ಪೂರ್ವಭಾವಿಯಾಗಿ ಏರ್ಪಾಟಾಗಿತ್ತು. ನಾವೆಲ್ಲರೂ ಅಧ್ಯಯನ ಶಿಬಿರ ಏರ್ಪಾಟಾಗಿದ್ದ ಒಂದು ಹಳ್ಳಿಗೆ ನಡೆಯುತ್ತಾ ಹೋಗುತ್ತಿದ್ದೆವು. ಮುಂದೆ ಕೆಂಪಂಗಿ ತೊಟ್ಟ ಮತ್ತು ಕೆಂಪು ಬಾವುಟ ಹಿಡಿದ ಕೆಲ ಸ್ವಯಂ ಸೇವಕರು, ನಂತರ ಬಾವುಟಗಳನ್ನು ಹಿಡಿದ ಅಲ್ಲಿನ ಸಾಮಾನ್ಯ ರೂಢಿಯಂತೆ ಗಾಂಧಿ ಟೋಪಿ ಧರಿಸಿದ್ದ ರೈತರು, ಅವರೊಟ್ಟಿಗೆ ಭೀಮಸೀ ಕಲಾದಗಿ, ಅಣ್ಣಾರಾಯ್ ಮೊದಲಾದ ಮುಖಂಡರೊಡನೆ ನಾನು. ಒಂದು ಮೆರವಣಿಗೆಯಂತೆ ನಡೆಯುತ್ತಿದ್ದೆವು. ಆಗಾಗ ಬೆಂಗಳೂರು ಚಲೋ ಬಗ್ಗೆ ಘೋಷಣೆಗಳನ್ನು ಹಾಕುತ್ತಿದ್ದರು.

ನಾವು ಸ್ವಲ್ಪ ದೂರ ಹೋಗುವಷ್ಟರಲ್ಲಿ ನಮಗೆ ಎದುರಾಗಿ ಮತ್ತೊಂದು ಮೆರವಣಿಗೆ ಬಂತು. ಅವರೆಲ್ಲ ತಲೆಗೆ ಹಳದಿ ಪೇಟಾ ಧರಿಸಿದ್ದರು. ಮುಂದೆ ಒಬ್ಬರು ಒಂದು ಬೆಳ್ಳಿ ಲೇಪನದ ಮುಕುಟ ಇದ್ದ ಕೋಲು ಹಿಡಿದ ಒಬ್ಬ ತನ್ನ ಬಟ್ಟೆಗಳ ಮೇಲೆ ನೇರಳೆ ಬಣ್ಣದ ನಿಲುವಂಗಿ ಧರಿಸಿದ್ದ.

ಅವರೆಲ್ಲ ವಿಠ್ಠಲ ವಿಠ್ಠಲ ಪಾಡುರಂಗ, ಜಯ ಹರಿ ವಿಠ್ಠಲ ಪಾಡುರಂಗ ಎಂದು ಭಜನೆ ಮಾಡುತ್ತಾ ಎದುರು ಬರುತ್ತಿದ್ದರು.

ನಮ್ಮ ಮೆರವಣಿಗೆಗೂ ಅವರ ಮೆರವಣಿಗೆಗೂ ಸಮಾನ ಲಕ್ಷಣಗಳೂ ಮತ್ತು ವೈದೃಶ್ಯಗಳೆರಡೂ ಎದ್ದು ಕಾಣುವಂತಿತ್ತು.

ಮಧ್ಯೆ ಒಂದು ಕುಡಿಯುವ ನೀರಿನ ಬೋರ್‌ವೆಲ್ ಬಳಿ ಒಂದು ಮರದ ನೆರಳಲ್ಲಿ ಅವರೂ ಉಪಹಾರ ಸೇವಿಸಲು ಕುಳಿತರು. ನಮ್ಮ ಮೆರವಣಿಗೆಯ ಜನರೂ ಮತ್ತೊಂದು ಮರದ ನೆರಳಲ್ಲಿ ಉಪಹಾರ ಸೇವಿಸಲು ಕುಳಿತರು.

ನಾನು ಕುತೂಹಲದಿಂದ ವಿಠ್ಠಲನ ಮೆರವಣಿಗೆ ಬಗ್ಗೆ ವಿಚಾರಿಸಿದೆ. ಇದು ಆ ಪ್ರದೇಶದಲ್ಲಿ ಪ್ರತಿ ವರ್ಷವೂ ನಡೆದು ಬಂದ ರೂಢಿ. ಪಂಡರಾಪುರದ ಜಾತ್ರೆಗೆ ನಡೆದೇ ಹೋಗುವ ಹರಕೆ ಹೊತ್ತು ಹೋಗುವವರು ಅವರು ಎಂದು ನಮ್ಮ ಸಂಗಾತಿಗಳು ತಿಳಿಸಿದರು.

ಆಗ ನಾನು ಇಬ್ಬರು ಸಂಗಾತಿಗಳೊಡನೆ ಅವರ ಬಳಿ ಹೋಗಿ ಮಾತಾಡುತ್ತಾ ಕುಳಿತೆ. ಹೀಗೆ ವಿಚಾರಿಸಿದಾಗ ಅವರೆಲ್ಲ ತಮ್ಮ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ವಿಠ್ಠಲನಿಗೆ ಹರಕೆ ಹೊತ್ತವರು. ತಮ್ಮ ಮಗನನ್ನು ಕಷ್ಟ ಪಟ್ಟು ಓದಿಸಿದ್ದೇವೆ, ಉದ್ಯೋಗ ಸಿಕ್ಕಿಲ್ಲ, ಯಾವ ಬೆಳೆ ಹಾಕಿದರೂ ಲುಕ್ಸಾನಾಗಿ ಪಾಪರಾಗುವಂತಾಗಿದೆ, ಹೆಂಡತಿಗೆ ಮಕ್ಕಳಾಗಿಲ್ಲ, ಮಗಳ ಮದುವೆಗೆ ಸೂಕ್ತ ವರ ಸಿಕ್ಕಿಲ್ಲ, ಮಗನಿಗೆ ವಾಸಿಯಾಗದ ಕಾಯಿಲೆ ಇತ್ಯಾದಿ ಇತ್ಯಾದಿ ಸಮಸ್ಯೆಗಳಿಗಾಗಿ ಹರಕೆ ಹೊತ್ತದ್ದನ್ನು, ಉಪಹಾರದ ಬುತ್ತಿಯ ಜೊತೆಗೆ ತಮ್ಮ ಬದುಕಿನ ಸಂಕಟಗಳ ಬುತ್ತಿಯನ್ನು ಬಿಚ್ಚುತ್ತಾ ಹೊರಟರು.

ನನಗೂ, ನಮ್ಮ ಸಂಗಾತಿಗಳಿಗೂ 'ಅರೆ, ಇವೆಲ್ಲಾ ಸ್ವಲ್ಪ ನಮ್ಮ ವಿಧಾನ ಸೌಧ ಚಲೋ ಬೇಡಿಕೆಗಳಂತೆಯೇ ಇವೆಯಲ್ಲ, ನಾವೂ ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಸಿಗುತ್ತಿಲ್ಲ, ಹಳ್ಳಿಗಳಲ್ಲಿ ಆಸ್ಪತ್ರೆಗಳಿಲ್ಲ, ಇದ್ದರೂ ಡಾಕ್ಟರುಗಳಿಲ್ಲ, ಹೆಚ್ಚು ಉದ್ಯೋಗ ನಿರ್ಮಾಣವಾಗುತ್ತಿಲ್ಲ ಎಂಬ ಬೇಡಿಕೆಗಳು ನಮ್ಮ ಹೋರಾಟದ ಒತ್ತಾಯಗಳು.

ಇದರಿಂದ ಕಲಿತ ಪಾಠವೆಂದರೆ ನಮ್ಮ ವಿಧಾನ ಸೌಧ ಚಲೋದ ಹಿಂದಿನ ಸಮಸ್ಯೆಗಳು ಹಾಗೂ ಅವರ ಪಂಡರಾಪುರ ಯಾತ್ರೆಯ ಅಡಿಪಾಯದ ಹಿಂದಿನ ಸಮಸ್ಯೆಗಳು ಎರಡೂ ಮೂಲತಃ ಒಂದೇ. ನಾವು ಅವುಗಳನ್ನು ಬೇಡಿಕೆ ಎಂದು ಕರೆದರೆ ಅವರು ಹರಕೆ ಎಂದು ಕರೆಯುತ್ತಿದ್ದಾರೆ. ಆದರೆ ಪರಿಹಾರದ ವಿಧಾನ ಮಾತ್ರ ವಿರುದ್ಧ ದಿಕ್ಕಿನಲ್ಲಿ. ನಾವು ಪ್ರಜಾಪ್ರಭುತ್ವದ ಅಧಿಕಾರ ಕೇಂದ್ರದ ಅದಕ್ಷತೆ, ಭ್ರಷ್ಟಾಚಾರ, ಜನ ವಿರೋಧಿ ನೀತಿಗಳಿಗೆ ಧಿಕ್ಕಾರ ಹೇಳುತ್ತಾ, ಅವರು ಇದು ಪ್ರಜಾಪ್ರಭುತ್ವ, ಸಮಸ್ಯೆಗಳ ಮೂಲ ಇರುವುದೇ ಅಧಿಕಾರ ಕೇಂದ್ರದಲ್ಲಿ ಎಂಬ ಅರಿವೇ ಇಲ್ಲದಂತೆ ಸಾವಿರಾರು ವರ್ಷಗಳ ಸಂಪ್ರದಾಯ ಬದ್ಧರಾಗಿ ವಿಠ್ಠಲನಿಗೆ ಜಯಕಾರ ಹಾಕುತ್ತಿದ್ದಾರೆ.

ಈ ಕ್ರಿಯೆ ಕೇವಲ ಪಂಡರಾಪುರ ಜಾತ್ರೆಗೆ ಮಾತ್ರ ಅನ್ವಯಿಸುವಂತಹುದಲ್ಲ, ಇಂತಹ ಸಾವಿರಾರು ವರ್ಷಗಳಿಂದ ನಡೆಯುತ್ತಿರುವ ಸಾವಿರಾರು ಜಾತ್ರೆಗಳ ಭಕ್ತಾದಿಗಳ ಬಗ್ಗೆ ಕೂಡಾ ಇದೇ ಮಾತು ಹೇಳಬಹುದು. ಇದ್ದಕ್ಕಿದ್ದಂತೆ ಹೊಸದಾಗಿ ಹಬ್ಬಿ ಬಿಡುವ ಅಯ್ಯಪ್ಪ, ಓಂ ಶಕ್ತಿ, ರಾಘವೇಂದ್ರ ಮೊದಲಾದ ಹೊಸ ದೇವರುಗಳಿಗೆ ಹೊಸ ಭಕ್ತರು ಸೆಳೆಯಲ್ಪಡುವುದೂ ತಮ್ಮ ಕುಟುಂಬ ಸೇವೆ ಸಲ್ಲಿಸುತ್ತಿದ್ದ ಹಳೆಯ ದೇವರುಗಳಿಗೆ ಹೊತ್ತ ಹರಕೆ ಫಲಿಸುತ್ತಿಲ್ಲ, ಈ ದೇವರುಗಳಾದರು ಸಮಸ್ಯೆಗಳ ಪರಿಹಾರ ಮಾಡಬಹುದು ಎಂದು.

ಈ ಪ್ರಸಂಗ ನಮಗೆ ಕಲಿಸಿದ ಪಾಠ ಅಂತಿಂಹುದಲ್ಲ, ಮಾರ್ಕ್ಸ್‌ವಾದದ ಮೂಲಭೂತ ಚಿಂತನೆಗಳಿಗೆ, ಲೆನಿನ್ನರ ವಿಚಾರಗಳಿಗೆ ಸಂಬಂಧಿಸಿದ್ದು. ಮಾರ್ಕ್ಸ್ ಹೇಳುತ್ತಾರೆ :

Religion is the general theory of the world,its encyclopaediac compendium, its logic in popular form, its enthusiasm, its moral sanction...

ಇನ್ನೂ ಮುಂದುವರೆದು: religious distress is at the same time the expression of real distress and the protest against real distress. Religion is sigh of the oppressed creature,heart of a heartless world, just as it is the spirit of the spiritless situation. It is the opium of people.

ಆದರೆ ನಮಗೆಲ್ಲಾ ಹೆಚ್ಚಾಗಿ ಗೊತ್ತಿರುವುದು ಕೇವಲ ಕೊನೆಯ ವಾಕ್ಯ. ಧರ್ಮ ಜನರ ಅಫೀಮು ಎಂಬುದು.

ಕೆಲವರು ಕೊನೆಯ ಎರಡು ವಾಕ್ಯಗಳು ಜೊತೆಯಾಗಿವೆ ಎಂಬುದನ್ನು ಗಮನಿಸಿದ್ದಾರೆ. ಆದರೆ ಧರ್ಮದ ಬಗೆಗಿನ ಅವರ ನಿಲುವು ಮೇಲಿನ ವಾಕ್ಯಗಳಲ್ಲಿ ಹೆಚ್ಚು ಸಮಗ್ರವಾಗಿ ಬಿಂಬಿತವಾಗುತ್ತದೆ.

ಈ ಮೇಲಿನ ವಿಚಾರದ ಸಂಕ್ಷಿಪ್ತ ಅರ್ಥ ಹೀಗಿದೆ: 'ಧರ್ಮವೆಂಬುದು ಜನರ ನಡುವೆ ಜನಜನಿತವಾದ ವಿಚಾರ, ಅವರ ಚಿಂತನೆಗಳ ವಿಶ್ವಕೋಶ, ವಿಶ್ವದ ಬಗೆಗೆ ಅವರು ರೂಪಿಸಿಕೊಂಡ ಸಾಮಾನ್ಯ ತತ್ವ, ಜಗತ್ತಿನ ಉತ್ಸಾಹ, ಅದರ ನೈತಿಕ ಕಟ್ಟಲೆಗಳೂ ಆಗಿದೆ.

ನಿಜ ಬದುಕಿನ ಸಂಕಷ್ಟಗಳು ಧಾರ್ಮಿಕ ಸಂಕಟಗಳ ಅಭಿವ್ಯಕ್ತಿಯಾಗಿದೆ. ನಿಜ ಸಂಕಟಗಳ ವಿರುದ್ಧದ ಪ್ರತಿಭಟನೆಯೂ ಆಗಿದೆ. ಧರ್ಮ ದಮನಿತ ಜೀವಿಗಳ ನಿಟ್ಟುಸಿರು, ಹೃದಯವಿಲ್ಲದ ಜಗತ್ತಿನ ಹೃದಯ, ಉತ್ಸಾಹಹೀನವಾದ ಜಗತ್ತಿನ ಉತ್ಸಾಹ. ಅದು ಜನರ ಅಫೀಮು.'

ಧರ್ಮದ ಬಗ್ಗೆ ಮಾರ್ಕ್ಸ್‌ವಾದದ ತಿಳುವಳಿಕೆ ಎಂದರೆ ತಮ್ಮ ಬದುಕಿನ ಸಂಕಟಗಳ ಕಾರಣಗಳೇನು, ಎಲ್ಲಿಂದ ಹೇಗೆ ಈ ಸಂಕಟಗಳು ಎರಗುತ್ತವೆ ಎಂದು ಅರಿವಾಗದ ಮನುಷ್ಯ ಸಮುದಾಯ ಕೊನೆಗೆ ದೇವರ, ಧರ್ಮದ ಮೊರೆ ಹೋದರು. ವರ್ಗ ಸಮಾಜ ಉದಿಸಿದಂದಿನಿಂದ ಇಲ್ಲಿಯವರೆಗೆ ದುಡಿಯುವವರ ದಮನ, ಶೋಷಣೆಗಳು ಮುಂದುವರೆಯುತ್ತಿರುವವರೆಗೆ ಧರ್ಮ, ದೇವರ ಬಗೆಗಿನ ನಂಬಿಕೆಗಳು ಮುಂದುವರೆಯುತ್ತವೆ. ಕೇವಲ ಉಪನ್ಯಾಸಗಳು, ಧರ್ಮ, ದೇವರ ಖಂಡನೆಗಳಿಂದ ಜನರು ಇವುಗಳಲ್ಲಿಟ್ಟಿರುವ ನಂಬಿಕೆ ಮಾಯವಾಗುವುದಿಲ್ಲ. ಜನರಿಗೆ ತಮ್ಮ ಸಂಕಟಗಳ ಕಾರಣಗಳು ಅರಿವಾಗುವುದರ ಜೊತೆಗೆ ಕಾರಣಗಳ ವಿರುದ್ಧ, ತಮ ದಮನ, ಶೋಷಣೆಗಳನ್ನು ಎದುರಿಸಿ ನಿಂತಾಗ, ತಮ್ಮ ಮೇಲೆ ತಮಗೇ ನಂಬಿಕೆ, ಸ್ವ ವಿಶ್ವಾಸ ಬಲಿತಾಗ ದೇವರ, ಧರ್ಮದ ಬಗೆಗಿನ ನಂಬಿಕೆಗಳು ಮಾಯವಾಗುತ್ತವೆ.

ಜನರು ತಮ್ಮ ಸಂಕಟಗಳಿಗೆ ಕಾರಣ ರಾಜ ಪ್ರಭುತ್ವ ಎಂಬುದನ್ನು ಗುರುತಿಸಿ ದಂಗೆ ಏಳುವುದರ ಜೊತೆ ಜೊತೆಗೇ ದೇವರ,ಧರ್ಮದ ಬಗೆಗಿನ ನಂಬಿಕೆಗಳು ಕಳಚಿ ಬೀಳಲಾರಂಭಿಸಿದವು. ಯುರೋಪಿನ ಕೆಲವು ದೇಶಗಳಲ್ಲಿ ಬಹಳಷ್ಟು ಜನ ಸಾಮಾನ್ಯರು ಇವುಗಳಿಂದ ದೂರಾದರು. ರಾಜಪ್ರಭುತ್ವದ ವಿರುದ್ಧ ಸೆಣಸುತ್ತಿದ್ದ ಬಂಡವಾಳಶಾಹಿ ವರ್ಗಕ್ಕೂ ಧರ್ಮ, ದೇವರುಗಳು ಬೇಡವಾಗಿದ್ದವು.

ಆದರೆ ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲೂ ಶೋಷಣೆ ಬೇರೆ ರೂಪದಲ್ಲಿ ಮುಂದುವರೆಯಿತು. ರೈತರ ಭೂಮಿ ಅವರಿಂದ ಕಿತ್ತುಕೊಳ್ಳಲ್ಪಟ್ಟು ಕೂಲಿಕಾರರಾದರು. ಅನೇಕ ಇದ್ದಕ್ಕಿದ್ದಂತೆ ಬಡಿಯುವ ಬಿಕ್ಕಟ್ಟು ಕಾರ್ಮಿಕರನ್ನು ನಿರುದ್ಯೋಗಿಗಳಾಗಿ ➚



ತೀವ್ರ ದಾಳಿಗೆ ಒಳಗಾಗಿರುವ ಮಾಧ್ಯಮ

ಪತ್ರಿಕಾ ಸ್ವಾತಂತ್ರ್ಯ ರಕ್ಷಣೆ ಪ್ರಜಾಪ್ರಭುತ್ವವಾದಿಗಳ ಹೊಣೆ

ಆದಾಯ ತೆರಿಗೆ ಇಲಾಖೆ, ಅನುಷ್ಠಾನ ನಿರ್ದೇಶನಾಲಯ (ಇ.ಡಿ.) ಮತ್ತಿತರ ಸಂಸ್ಥೆಗಳನ್ನು ಇಂಥ ಮಾಧ್ಯಮ ಸಂಸ್ಥೆಗಳಿಗೆ ಕಿರುಕುಳ ನೀಡಲು ಬಳಸಲಾಗುತ್ತಿದೆ. ಸರ್ಕಾರದ ನಿಯಂತ್ರಣ ಹೇರುವ ಪ್ರಯತ್ನಗಳು ಹೆಚ್ಚಿದ್ದು ಎಲ್ಲ ರೀತಿಯ ಮಾಧ್ಯಮಗಳ ಮೇಲೆ ಸೆನ್ಸಾರ್‌ಶಿಪ್ ಹೇರುವ ಯತ್ನದತ್ತ ವಿಸ್ತರಣೆಗೊಂಡಿದೆ. ಮಾಹಿತಿ ತಂತ್ರಜ್ಞಾನ ಕಾನೂನು ಅನ್ವಯ 2021ರಲ್ಲಿ ಹೊಸ ನಿಯಮಗಳನ್ನು ಮಾಡಲಾಗಿದೆ. ಡಿಜಿಟಲ್ ನ್ಯೂಸ್ ಮೀಡಿಯಾ ವೇದಿಕೆಗಳ ಸುದ್ದಿಗಳ ವಿಚಾರ (ಕಂಟೆಂಟ್) ಏನಿರಬೇಕೆಂಬುದನ್ನು ವಾರ್ತೆ ಮತ್ತು ಪ್ರಸಾರ ಸಚಿವಾಲಯವೇ ಡಿಕ್ಟೇಟ್ ಮಾಡಲು ಈ ನಿಯಮಗಳು ಅವಕಾಶ ನೀಡುತ್ತವೆ. ಆಕ್ಷೇಪಾರ್ಹ ಎಂದು ಕಂಡುಬಂದ ಕಂಟೆಂಟ್‌ಗಳನ್ನು ಡಿಲೀಟ್ ಮಾಡುವ ಅಧಿಕಾರವನ್ನು ಅದು ಸರ್ಕಾರಕ್ಕೆ ನೀಡಿದೆ.

— ಪ್ರಕಾಶ್ ಕಾರಟ್ —

ವಿಶ್ವ ಸಂಸ್ಥೆಯ ಘೋಷಣೆಯನ್ವಯ ಮೇ 3 ರಂದು 'ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ' ಆಚರಿಸಲಾಗಿದೆ. ಕಾಕತಾಳೀಯ ಎನ್ನುವಂತೆ, 'ಗಡಿಯಿಲ್ಲದ ವರದಿಗಾರರು' (ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್) ಸಂಘಟನೆ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ ಪ್ರಕಟಿಸಿದೆ. ಈ ಇಂಡೆಕ್ಸ್‌ನಲ್ಲಿ (ಸೂಚ್ಯಂಕ) 2021ರಲ್ಲಿ ಭಾರತದ ಸ್ಥಾನ 180 ದೇಶಗಳ ಪೈಕಿ 142 ಆಗಿತ್ತು. 2016ರಲ್ಲಿ 133 ಇದ್ದದ್ದು 2021ರಲ್ಲಿ 142ಕ್ಕೆ ಕುಸಿದಿದೆ. ಮೋದಿ ಸರ್ಕಾರದ ಅಡಿಯಲ್ಲಿ ಮಾಧ್ಯಮ ಸ್ವಾತಂತ್ರ್ಯ ನಿಧಾನವಾಗಿ ಕುಸಿಯುತ್ತಾ ಹದಗೆಡುತ್ತಿರುವುದನ್ನು ಈ ಇಂಡೆಕ್ಸ್‌ನ ರ್‍ಯಾಂಕಿಂಗ್ ದಾಖಲಿಸಿದೆ.

'ಪತ್ರಕರ್ತರ ವಿರುದ್ಧದ ಹಿಂಸಾಚಾರ, ಮಾಧ್ಯಮದ ರಾಜಕೀಯ ಪಕ್ಷಪಾತಿತನ ಹಾಗೂ ಮಾಧ್ಯಮ ಮಾಲಿಕತ್ವದ ಕೇಂದ್ರೀಕರಣ' –ಇವುಗಳಿಂದಾಗಿ ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ ಬಿಕ್ಕಟ್ಟಿನಲ್ಲಿದೆ ಎಂದು ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಅಭಿಪ್ರಾಯ ಪಟ್ಟಿದೆ.

ಪತ್ರಿಕಾ ಸ್ವಾತಂತ್ರ್ಯ ಮತ್ತು ಸ್ವತಂತ್ರ ಮಾಧ್ಯಮದ ಕಾರ್ಯ ನಿರ್ವಹಣೆ ಮೋದಿ ಆಡಳಿತದಡಿಯಲ್ಲಿ ತೀವ್ರ ದಾಳಿಗೆ ಒಳಗಾಗಿದೆ. ಪ್ರಭುತ್ವ, ಅಂದರೆ ಸರ್ಕಾರ ಮಾಧ್ಯಮವನ್ನು ಹೆದರಿಸುವುದು ಒಂದು ಪರಿಪಾಠವೇ ಆಗಿಬಿಟ್ಟಿದೆ. ಪತ್ರಕರ್ತರು ಮತ್ತು ಸಂಪಾದಕರ ವಿರುದ್ಧ ಸುಳ್ಳು ಕೇಸ್‌ಗಳನ್ನು ಹೂಡಲಾಗುತ್ತಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳು ಮತ್ತು ದೆಹಲಿಯಲ್ಲಿ ಪತ್ರಕರ್ತರು ಮತ್ತು ಮಾಧ್ಯಮದ ವಿರುದ್ಧ ಕೇಸ್ ದಾಖಲಿಸಿ ಅವರು ಸಂಬಂಧಪಟ್ಟ ರಾಜ್ಯಗಳ ಕೋರ್ಟ್‌ಗಳಲ್ಲಿ ಹಾಜರಾಗುವಂತೆ ಮಾಡುವುದು ಸರ್ವೇಸಾಮಾನ್ಯವಾಗಿದೆ. ಅಧಿಕಾರದಲ್ಲಿರುವವರಿಗೆ ಅಪಥ್ಯವಾದ ವರದಿಗಳನ್ನು ಬರೆಯುವ ವರದಿಗಾರರ ವಿರುದ್ಧ ದೇಶದ್ರೋಹದ ಕೇಸ್‌ಗಳನ್ನು ದಾಖಲಿಸಲಾಗುತ್ತಿದೆ. ಕರಾಳವಾದ ಕಾನೂನುಬಾಹಿರ ಚಟುವಟಿಕೆ ತಡೆ ಕಾನೂನು (ಯುಎಪಿಎ) ಕೂಡ ಪತ್ರಕರ್ತರ ವಿರುದ್ಧ ಬಳಕೆಯಾಗುತ್ತಿರುವುದು ಕಳವಳದ ವಿಚಾರವಾಗಿದೆ. ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಫಹಾದ್ ಷಾ ಮತ್ತು ಉತ್ತರ ಪ್ರದೇಶದಲ್ಲಿ ಸಿದ್ದಿಕ್ ಕಪ್ಪನ್ ವಿರುದ್ಧದ ಪ್ರಕರಣಗಳು ಇದಕ್ಕೆ ಉದಾಹರಣೆಗಳು. ಈ ಇಬ್ಬರೂ ಪತ್ರಕರ್ತರು ಇನ್ನೂ ಸ್ಥಾನಬದ್ಧತೆಯಡಿ ಜೈಲಿನಲ್ಲಿದ್ದಾರೆ. ವಿಶೇಷವಾಗಿ, ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಕೋಮುವಾದಿ ಉಗ್ರಗಾಮಿ ಗ್ಯಾಂಗ್‌ಗಳು ಮಾಧ್ಯಮ ಸಿಬ್ಬಂದಿ ಮೇಲೆ ದೈಹಿಕ ಹಲ್ಲೆ ನಡೆಸಿದ ಪ್ರಕರಣಗಳೂ ವರದಿಯಾಗಿವೆ.

ಮಾಧ್ಯಮವನ್ನು ಬೆದರಿಸುವ ಸರ್ಕಾರದ ಪ್ರಯತ್ನಗಳು, ಸರ್ಕಾರದ ಅಣತಿಯನ್ನು ಪಾಲಿಸದ ಮಾಧ್ಯಮ ಸಂಸ್ಥೆಗಳ ಮೇಲೆ ಆರ್ಥಿಕ ಅಪರಾಧಗಳ ಪ್ರಕರಣಗಳನ್ನು ದಾಖಲಿಸುವ ಸ್ವರೂಪ ಪಡೆದುಕೊಳ್ಳುತ್ತಿದೆ.

ಆದಾಯ ತೆರಿಗೆ ಇಲಾಖೆ, ಅನುಷ್ಠಾನ ನಿರ್ದೇಶನಾಲಯ (ಇ.ಡಿ.) ಮತ್ತಿತರ ಸಂಸ್ಥೆಗಳನ್ನು ಇಂಥ ಮಾಧ್ಯಮ ಸಂಸ್ಥೆಗಳಿಗೆ ಕಿರುಕುಳ ನೀಡಲು ಬಳಸಲಾಗುತ್ತಿದೆ. ಸರ್ಕಾರದ ನಿಯಂತ್ರಣ ಹೇರುವ ಪ್ರಯತ್ನಗಳು ಹೆಚ್ಚಿದ್ದು ಎಲ್ಲ ರೀತಿಯ ಮಾಧ್ಯಮಗಳ ಮೇಲೆ ಸೆನ್ಸಾರ್‌ಶಿಪ್ ಹೇರುವ ಯತ್ನದತ್ತ ವಿಸ್ತರಣೆಗೊಂಡಿದೆ. ಡಿಜಿಟಲ್ ಸುದ್ದಿ ವೇದಿಕೆಗಳು ಹೆಚ್ಚಿರುವುದರಿಂದ ಮಾಹಿತಿ ತಂತ್ರಜ್ಞಾನ ಕಾನೂನು ಅನ್ವಯ 2021ರಲ್ಲಿ ಹೊಸ ನಿಯಮಗಳನ್ನು ಮಾಡಲಾಗಿದೆ. ಡಿಜಿಟಲ್ ನ್ಯೂಸ್ ಮೀಡಿಯಾ ವೇದಿಕೆಗಳ ಸುದ್ದಿಗಳ ವಿಚಾರ (ಕಂಟೆಂಟ್) ಏನಿರಬೇಕೆಂಬುದನ್ನು ವಾರ್ತೆ ಮತ್ತು ಪ್ರಸಾರ ಸಚಿವಾಲಯವೇ ಡಿಕ್ಟೇಟ್ ಮಾಡಲು ಈ ನಿಯಮಗಳು ಅವಕಾಶ ನೀಡುತ್ತವೆ. ಆಕ್ಷೇಪಾರ್ಹ ಎಂದು ಕಂಡುಬಂದ ಕಂಟೆಂಟ್‌ಗಳನ್ನು ಡಿಲೀಟ್ ಮಾಡುವ ಅಧಿಕಾರವನ್ನು ಅದು ಸರ್ಕಾರಕ್ಕೆ ನೀಡಿದೆ. ಇದೆಲ್ಲದರ ಜೊತೆಗೆ, ಮಾಧ್ಯಮದ ಕತ್ತು ಹಿಸುಕಲು ಸುದ್ದಿ ವಾಹಿನಿಗಳನ್ನು ನಿರ್ದಿಷ್ಟ ಅವಧಿಗೆ ಅಥವಾ ಕಾಯಂ ಆಗಿ ನಿಷೇಧಿಸುವ ಕ್ರಮಗಳಿಗೂ ಸರ್ಕಾರ ಮುಂದಾಗಿದೆ.

ರಾಜಿ ಮನೋಭಾವ

ಮಾಧ್ಯಮದ ಮಾಲಿಕತ್ವದ ಕಾರಣಗಳಿಂದಾಗಿ ಮಾಧ್ಯಮದ ಸ್ವಾತಂತ್ರ್ಯ ಹಾಗೂ ವಿಶ್ವಾಸಾರ್ಹತೆ ಕೂಡ ರಾಜಿಗೆ ಒಳಗಾಗುತ್ತಿವೆ. ಇಂದಿನ ಬಹುತೇಕ ಮಾಧ್ಯಮಗಳು ದೊಡ್ಡ ಕಾರ್ಪೊರೇಟ್ ಕಂಪೆನಿಗಳು ಅಥವಾ ಉದ್ಯಮಿಗಳ ಮಾಲಿಕತ್ವದಲ್ಲಿವೆ. ಕೆಲವು ಅಪವಾದಗಳನ್ನು ಹೊರತುಪಡಿಸಿ, ವಿಶೇಷವಾಗಿ ಇಲೆಕ್ಟ್ರಾನಿಕ್ ಮಾಧ್ಯಮದವರನ್ನು ಮೋದಿ ಸರ್ಕಾರ ತನ್ನ ಚೀರ್‌ಲೀಡರ್‌ಗಳಂತೆ ವರ್ತಿಸಲು ಆಯ್ಕೆ ಮಾಡಿಕೊಂಡಿದೆ. ಆ ಪೈಕಿ ಕೆಲವು ವಾಹಿನಿಗಳು ಹಿಂದುತ್ವ ಕೋಮುವಾದಿ ಅಜೆಂಡಾವನ್ನು ತೀವ್ರ ರೀತಿಯಲ್ಲಿ ಪ್ರಚಾರ ಮಾಡಲು ಹೊರಟಿರುವುದು ಇನ್ನೂ ತುಂಬಾ ಕೆಡುಕಿನ ಸಂಗತಿಯಾಗಿದೆ. ಇದು ಸಮೂಹ ಮಾಧ್ಯಮದ ಮೇಲೆ, ಅದರಲ್ಲೂ ವಿಶೇಷವಾಗಿ ಹಿಂದಿ ಮಾಧ್ಯಮದ ಮೇಲೆ ಹಾನಿಕಾರಕ ಪರಿಣಾಮ ಬೀರಿದೆ.

ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ವಹಿಸಬೇಕಾದ ಪಾತ್ರದ ವಿಡಂಬನೆಯನ್ನು ನಾವಿಂದು ನೋಡುತ್ತಿದ್ದೇವೆ. ಆಡಳಿತಗಾರರ ಬಹುಪರಾಕು ಹೇಳುವ ಜೊತೆ ಮಾಧ್ಯಮದ ಗಣನೀಯ ವಿಭಾಗದವರು ಕೋಮುವಾದಿ ಪ್ರಚಾರದ ವಾಹಕರಾಗಿದ್ದಾರೆ. ದೆಹಲಿಯ ಜಹಾಂಗಿರ್‌ಪುರಿಯಲ್ಲಿ ಬುಲ್ಡೋಜರ್‌ಗಳಿಂದ ನಾಶ ಮಾಡುವ ಕೇಂದ್ರ ಸರ್ಕಾರದ ಕಾರ್ಯದ ಬಗ್ಗೆ ಹಿಂದಿ ಸುದ್ದಿ ವಾಹಿನಿಗಳು ನಡೆದುಕೊಂಡ ರೀತಿಯೇ ಇದಕ್ಕೆ ಉದಾಹರಣೆಯಾಗಿದೆ.

ಪ್ರಾಮಾಣಿಕರಿಗೆ ಸಂಕಷ್ಟ

ನ್ಯಾಯಸಮ್ಮತ ಹಾಗೂ ವಸ್ತುನಿಷ್ಠ ವರದಿ ಮಾಡುವ ಹಾಗೂ ಸಂಪಾದಕೀಯ ವಿಭಾಗದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪತ್ರಕರ್ತರು ಹಲವು ಅಡ್ಡಿಆತಂಕಗಳನ್ನು ಎದುರಿಸಬೇಕಾಗಿದೆ. ಇಡೀ ಪ್ರಭುತ್ವದ ಶಕ್ತಿಯೇ ಇಂಥ ಪತ್ರಕರ್ತರ ವಿರುದ್ಧ ನಿಲ್ಲುತ್ತದೆ.

ಮಾಧ್ಯಮ ಹಕ್ಕುಗಳ ರಕ್ಷಣೆಗೆ ಇರುವ ನ್ಯಾಯಾಂಗದ ಮಧ್ಯಪ್ರವೇಶದ ಅವಕಾಶ ಕೂಡ ಸೀಮಿತವಾಗಿದೆ. ಕೆಲವು ಪ್ರಕರಣಗಳಲ್ಲಿ ಬಂಧನ ಹಾಗೂ ದೇಶದ್ರೋಹ ಆರೋಪಗಳ ಮೇಲೆ ಕಾನೂನು ಕ್ರಮ ಎದುರಿಸುತ್ತಿರುವ ಪತ್ರಕರ್ತರಿಗೆ ಕೋರ್ಟ್‌ಗಳಿಂದ ಪರಿಹಾರ ಸಿಕ್ಕಿದೆಯಾದರೂ ಪತ್ರಕರ್ತರ ವಿರುದ್ಧ ಯುಎಪಿಎ ಬಳಕೆ ಅಥವಾ ಮಾಧ್ಯಮ ಕಂಟೆಂಟ್‌ನಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಯುವ ವಿಚಾರದಲ್ಲಿ ಒಟ್ಟಾರೆಯಾಗಿ ಉನ್ನತ ನ್ಯಾಯಾಂಗವು ವಿಫಲವಾಗಿದೆ. ಅದು ಸೂಕ್ತವಾಗಿ ಮಧ್ಯಪ್ರವೇಶ ಮಾಡಿಲ್ಲ.

ಮಾಧ್ಯಮದ ಮೇಲಿನ ಆಕ್ರಮಣವು ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ವಿಸ್ತ್ರತ ಹಲ್ಲೆಯ ಭಾಗವಾಗಿದೆ. ಮಾಧ್ಯಮ ಸ್ವಾತಂತ್ರ್ಯ ಮತ್ತು ಪತ್ರಕರ್ತರ ಹಕ್ಕುಗಳ ರಕ್ಷಣೆಯು ಪ್ರಜಾಪ್ರಭುತ್ವ ಹಾಗೂ ಸಾಂವಿಧಾನಿಕ ಹಕ್ಕುಗಳ ರಕ್ಷಣೆಯ ಹೋರಾಟದ ಭಾಗವಾಗಬೇಕು. ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಪ್ರತಿಯೊಂದು ಹಲ್ಲೆಯನ್ನು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ವಿರೋಧಿಸಬೇಕು.

ಅನು: ವಿಶ್ವ

ಬೀದಿಗೆ ತಳ್ಳಿದರೆ, ಬಂಡವಾಳಿಗರಲ್ಲಿ ಕೆಲವರೂ ದಿನ ಬೆಳಗಾಗುವುದರೊಳಗೆ ಪಾಪಾರಾಗಿ ಬಿಡುವ ಸಂಭವ ದೇವರು, ಧರ್ಮದ ಬಗೆಗಿನ ನಂಬಿಕೆಗಳನ್ನು ಉಳಿಸಿದವು.

ಇಂತಹ ಬಿಕ್ಕಟ್ಟುಗಳ ಸಮಯದಲ್ಲಿ ಸಾಮಾನ್ಯ ದುಡಿಯುವವರ ಸಿಟ್ಟು ತಮ್ಮೆಡೆಗೆ ತಿರುಗದಂತೆ ದೇವರು, ಧರ್ಮಗಳ ವಿರುದ್ಧ ವೈಚಾರಿಕತೆಯನ್ನು ಪಸರಿಸುತ್ತಿದ್ದ ಬಂಡವಾಳಶಾಹಿ ಆಳುವ ವರ್ಗವೂ ತಮ್ಮ ರಕ್ಷಣೆಗಾಗಿ ಧರ್ಮ, ದೇವರುಗಳನ್ನು ಎಳೆತಂದರು.

ಹೀಗೆ ಜನರ ಸಂಕಟಗಳ ಕಾರಣಗಳು, ಮೂಲ ತಿಳಿಯದ ಪರಿಸ್ಥಿತಿಯೇ ದೇವರು, ಧರ್ಮವನ್ನು ತಮ್ಮ ಸಂಕಟಗಳ ಪರಿಹಾರಕ್ಕಾಗಿ ಮೊರೆ ಹೋಗುವಂತೆ ಮಾಡುತ್ತದೆ. ಈ ಸಂಕಟಗಳ ಮೂಲ ಕಾರಣ ತಿಳಿಯುವುದರ ಜೊತೆಗೆ ಅದರ ವಿರುದ್ಧ ಸೆಣಸಲು ಸಂಘಟಿತರಾದಷ್ಟೂ ಈ ನಂಬಿಕೆಗಳು ಕಳಚಿ ಬೀಳುತ್ತವೆ.

ಆದ್ದರಿಂದ ಜಾತ್ರೆ, ಯಾತ್ರೆಗಳಲ್ಲಿ ತೊಡಗುವ ಅನೇಕ ಸಂಕಷ್ಟಗಳಿಂದ ಬಳಲುತ್ತಿರುವ ಶೋಷಿತ ಜನರ ಜೊತೆ ಬೆರೆಯಬೇಕು. ಅವರ ಸಂಕಟಗಳ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಕಾರಣಗಳನ್ನು ವಿವರಿಸಬೇಕು. ಅವುಗಳ ಪರಿಹಾರಕ್ಕಾಗಿ ಹೋರಾಟಗಳನ್ನು ಸಂಘಟಿಸಬೇಕು. ಹಾಗೆಂದ ಕೂಡಲೇ ಸಾಮಾನ್ಯವಾಗಿ ಪ್ರಗತಿಪರರು, ವಿಚಾರ ವಾದಿಗಳು ಎನ್ನಿಸಿಕೊಂಡವರು ಮಾಡುವಂತೆ ಅವರ ಧಾರ್ಮಿಕ ನಂಬಿಕೆಗಳ ವಿರುದ್ಧ ಮಾತಾಡತೊಡಬೇಕು, ಹಂಗಿಸಬೇಕು ಎಂದಾಗುವುದಿಲ್ಲ. ಮೊದಲು ಅವರ ಸಂಕಟಗಳ ಕಾರಣವನ್ನು ವಿವರಿಸುವುದು, ಜೊತೆಗೆ ಹೋರಾಟಗಳನ್ನು ಸಂಘಟಿಸುವುದು, ಹೋರಾಟ ನಿರತ ಶೋಷಿತರ ನಡುವೆ ನಿಜ ಕಾರಣಗಳ ಜೊತೆಗೆ ಅವರ ಮೇಲೆ ಹೇರಿದ ಧಾರ್ಮಿಕ ಭ್ರಮಾ ಸಮುಚ್ಚಯದ ಬಗ್ಗೆ ಅರಿವು ಮೂಡಿಸತೊಡಗಬೇಕು. ಜಾತ್ರೆ,ಯಾತ್ರೆಗಳ ಜನರ ನಡುವೆ ಬೆರೆಯಬೇಕು ಎಂದ ಕೂಡಲೇ ಅವರಂತೆಯೇ ಧಾರ್ಮಿಕ ಆಚರಣೆಗಳನ್ನು ಅನುಸರಿಸತೊಡಗಿದರೆ ದೇವರು, ಧರ್ಮಗಳ ಬಗ್ಗೆ ಜನರ ನಂಬಿಕೆ ಗಾಢವಾಗಲು ನಾವೇ ಸಹಾಯ ಮಾಡಿದಂತಾಗುತ್ತದೆ. ಆದ್ದರಿಂದ ಧಾರ್ಮಿಕ ಆಚರಣೆಗಳಿಂದ ಪ್ರಜ್ಞಾಪೂರ್ವಕವಾಗಿ ದೂರ ಇರಬೇಕು.

ಅದೇ ಸಮಯದಲ್ಲಿ ಧಾರ್ಮಿಕ ಆಚರಣೆಗಳು, ದೇವರಲ್ಲಿ ನಂಬಿಕೆಯನ್ನು ಒಳಗೊಳ್ಳದ ಹಲವು ಅಂಶಗಳು, ಜನರ ಬದುಕಿನ, ಉಲ್ಲಾಸದ ಹಲವು ಅಂಶಗಳು ಜಾತ್ರೆಗಳಲ್ಲಿರುತ್ತವೆ. ಅವುಗಳಲ್ಲಿ ಪಾಲ್ಗೊಳ್ಳುವುದು ಅಂತಹವುಗಳನ್ನು ಮುಂದೆ ನಿಂತು ಸಂಘಟಿಸುವುದು ಅಪೇಕ್ಷಣೀಯ.

ಬಂಗಾಳದಲ್ಲಿ ದಸರಾ ಸಮಯದ ದುರ್ಗಾ ಪೂಜೆ ಬಹು ಪ್ರಸಿದ್ಧಿ. ಜನರು ಬಹಳ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಹಾಗೆಯೇ ಕೇರಳದಲ್ಲಿ ಓಣಂ ಹಬ್ಬದ ಸಮಯದಲ್ಲಿ.

ಈ ಸಮಯದಲ್ಲಿ ಪಕ್ಷದ ಸದಸ್ಯರು, ಘಟಕಗಳು ಜನರಿಗೆ ಉಲ್ಲಾಸ ತರುವ ಚಟುವಟಿಕೆಗಳು, ಅವರು ಹಬ್ಬ, ಜಾತ್ರೆಗಳ ಆಚರಣೆಗೆ ಸಹಾಯವಾಗುವ ಚಟುವಟಿಕೆಗಳು ಮುಂತಾದವುಗಳಲ್ಲಿ ಕ್ರಿಯಾ ಶೀಲವಾಗಿ ಪಾಲ್ಗೊಳ್ಳುತ್ತಾರೆ. ಅದೇ ಸಮಯದಲ್ಲಿ ಪ್ರಗತಿಪರ ವಿಚಾರಗಳನ್ನು ಪಸರಿಸುವ ಮನರಂಜನಾ ಕಾರ್ಯಕ್ರಮಗಳು, ಸಾಹಿತ್ಯ ಮಾರಾಟ ಮುಂತಾದವನ್ನು ಸಂಘಟಿಸುತ್ತಾರೆ.

ಧರ್ಮ ಗುರುಗಳು ಮತ್ತು ಸಂವಿಧಾನ ತಜ್ಞರ ಒಮ್ಮತದ ಸಂದೇಶ

ದ್ವೇಷ ಬಿಟ್ಟು ದೇಶ ಕಟ್ಟಲು ಕರೆ

ಸೌಹಾರ್ದತೆಯ ಪ್ರಬಲ ಸಂದೇಶ ಸಾರಿದ ಐತಿಹಾಸಿಕ ಸಮಾವೇಶ



ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ



ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು



ಕರ್ನಾಟಕದಲ್ಲಿನ ಕದಡಿದ ವಾತಾವರಣವನ್ನು ತಿಳಿಗೊಳಿಸಿ ಶಾಂತಿ ಸೌಹಾರ್ದತೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಗಟ್ಟಿಯಾದ ಸಂದೇಶವನ್ನು ಸೌಹಾರ್ದ ಸಂಸ್ಕೃತಿ ಸಮಾವೇಶ ಹೊರಡಿಸಿತು. ಕೋಮುವಾದಿ, ಮೂಲಭೂತವಾದಿ ಶಕ್ತಿಗಳು ಅಟ್ಟಹಾಸದಿಂದ ಹುಂಕರಿಸಿ ಶಾಂತಿ ಸೌಹಾರ್ಧತೆ ಕದಡಿ ದ್ವೇಷ ಹಿಂಸಾ ಪ್ರವೃತ್ತಿಯನ್ನು ಹುಟ್ಟು ಹಾಕಿದ್ದರೂ ಅವರು ಸಣ್ಣ ಸಂಖ್ಯಾತರೇ ಹೊರತು ಬಹುಸಂಖ್ಯಾತರಲ್ಲ. ಶಾಂತಿ ಸಾಮರಸ್ಯ ಬಯಸುವವರೇ ಬಹುಸಂಖ್ಯಾತರು ಎನ್ನುವುದನ್ನು ಧ್ವನಿಸಿತು. ಸುಮಾರು ಹದಿನೇಳು ವಿವಿಧ ದರ್ಮ ಗುರುಗಳು ಮೂವರು ಸಂವಿಧಾನ ತಜ್ಞರು ಧರ್ಮ ಸೂಕ್ಷ್ಮತೆ ಮತ್ತು ಸಂವಿಧಾನ ಬದ್ಧತೆಯ ವಿವಿಧ ಆಯಾಮಗಳನ್ನು, ವಿವರಿಸಿ ಸಾಮರಸ್ಯದ ಪಾರಂಪರಿಕ ನೆಲೆಗಳನ್ನು ತೋರಿ ಉನ್ಮಾದದ ಮಂಪರು ತೊಡೆಯಲು ವಿವೇಕದ ಬೆಳಕು ಹೊತ್ತಿಸಿದರು. ದ್ವೇಷ, ದಳ್ಳುರಿ ಆರಿಸಿ ವೈವಿಧ್ಯತೆಯ ಸಂಸ್ಕೃತಿಯ ಎಳೆಗಳಿಂದ ಭವಿಷ್ಯವನ್ನು ಸುಂದರಗೊಳಿಸಲು ಭೂಮಿಕೆ ಹದಗೊಳಿಸಿದ ರಾಜ್ಯ ಮಟ್ಟದ ಈ ಸಮಾವೇಶ ಐತಿಹಾಸಿಕ ಸಂದರ್ಭಕ್ಕೆ ಸಾಕ್ಷಿಯೂ ಆಯಿತು.

ಮೇ 5, 2022 ರಂದು ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜರುಗಿದ ಸಮಾವೇಶವನ್ನು ವಿವಿಧ ಸಂಘಟನೆಗಳು, ಚಿಂತಕರು, ಸಾಮಾಜಿಕ ಕಾರ್ಯಕರ್ತರು ಒಳಗೊಂಡು ವಿಶಾಲ ವೇದಿಕೆಯಾಗಿ ಸಂಘಟಿಸಲಾಗಿತ್ತು. ಸೌಹಾರ್ದ ಕರ್ನಾಟಕ, ವಿವಿಧ ದಲಿತ ಸಂಘಟನೆಗಳು, ಬಂಡಾಯ ಸಾಹಿತ್ಯ ಸಂಘಟನೆ, ರೈತ, ಕಾರ್ಮಿಕ ಸಂಘಟನೆಗಳು, ಅಲ್ಪಸಂಖ್ಯಾತರ ಸಂಘಗಳು, ಮಹಿಳಾ ಸಂಘಗಳು, ಸಾಂಸ್ಕೃತಿಕ ಸಂಘಗಳು ಮುಂತಾಗಿ ಒಳಗೊಂಡಿದ್ದವು.

ರಾಜ್ಯದ 20ಕ್ಕೂ ಹೆಚ್ಚು ವಿವಿಧ ಪ್ರಗತಿಪರ ಸಂಘಟನೆಗಳು ಹಾಗೂ ಸಂಘಟನೆಗಳ ವೇದಿಕೆಗಳು ವ್ಯವಸ್ಥೆಗೊಳಿಸಿದ್ದವು ಗುರುವಾರ ನಡೆದ ಸಮಾವೇಶವನ್ನು ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಧರ್ಮ ಗುರುಗಳು ಮತ್ತು ಸಂವಿಧಾನ ತಜ್ಞರ ಸಂದೇಶ ಸಾರುವ 'ಸೌಹಾರ್ದ ಸಂಸ್ಕೃತಿ ಸಮಾವೇಶ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಲ್ಲ ಧರ್ಮದ ಮಠಾಧೀಶರು, ಮೌಲ್ವಿಗಳು ಹಾಗೂ ಸಂತರು ಆಸೀನರಾಗಿದ್ದರು. ಹಾಗೆಯೇ ಸಂವಿಧಾನದ ಮಹತ್ವವನ್ನು ತಿಳಿಸಲು ಪ್ರಮುಖವಾಗಿ ಸುಪ್ರಿಂ ಕೋರ್ಟ್ ನ ವಿಶ್ರಾಂತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಭಾರತದ ಸರ್ವೋಚ್ಚ ನ್ಯಾಯಲಯ ವಿಶ್ರಾಂತ ನ್ಯಾ. ವಿ.ಗೋಪಾಲಗೌಡ, ಕರ್ನಾಟಕ ಹೈಕೋರ್ಟ್ ವಿಶ್ರಾಂತ ನ್ಯಾ. ಹೆಚ್.ಎನ್.ನಾಗಮೋಹನ್ ದಾಸ್ ಉಪಸ್ಥಿತರಿದ್ದರು.

ದ್ವೇಷ ಬಿಟ್ಟು ದೇಶ ಕಟ್ಟಬೇಕು: ಪ್ರೊ. ಬರಗೂರು ರಾಮಚಂದ್ರಪ್ಪ

ವಿವೇಕ ಅವಿವೇಕವನ್ನ ಆಳ್ತಾ ಇದೆ. ಮನುಷ್ಯ ಮನುಷ್ಯನ ನಡುವ ಕಂದರವನ್ನು ಧರ್ಮವು ಹುಟ್ಟಾಕಿ ಎಂದು ಹೇಳುವುದಿಲ್ಲ. ಆದರೆ ಇಂದು ನಾಡಿನಲ್ಲಿ ಕೆಲವರು ಸ್ವಾರ್ಥ ಹಿತಾಸಕ್ತಿಗಾಗಿ ಧರ್ಮವನ್ನು ಬಳಸಿಕೊಳ್ಳುತ್ತಿದ್ದಾರೆ.

ದ್ವೇಷ ಬಿಟ್ಟು ದೇಶ ಕಟ್ಟಬೇಕು. ವಿವೇಕದಿಂದ ವರ್ತಿಸಿ ಅವಿವೇಕತನವನ್ನು, ವಿಚಾರವಂತರಾಗಿ ವಿಕಾರತೆಯನ್ನು ತೊರೆಯಬೇಕೆಂದು ಎಂದು ಸಾಹಿತಿ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಆಶಯ ನುಡಿಗಳನ್ನಾಡುತ್ತಾ ಹೇಳಿದರು.

ಬರಗೂರು ಅವರು ಮುಂದುವರೆದು ಮಾತನಾಡುತ್ತಾ 'ದೇಶ ಇಂದು ವಿಶೇಷ ಸಂಕಷ್ಟವನ್ನು ಎದುರಿಸುತ್ತಿದ್ದು, ಮಾನವ ಸಂಬಂಧಗಳ ನಡುವೆ ಕಂದಕ ನಿರ್ಮಾಣವಾಗುತ್ತಿದೆ. ವಿವೇಕ–ಅವಿವೇಕ, ಸತ್ಯ–ಅಸತ್ಯ, ವಿಚಾರ–ವಿಕಾರದ ನಡುವೆ ಅಂತರ ಕಡಿಮೆಯಾಗುತ್ತಿದೆ. ಆದರೆ ಧರ್ಮದ ಹೆಸರಿನಲ್ಲಿ ಕಂದಕ ನಿರ್ಮಾಣವಾಗುತ್ತಿದೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಬುದ್ಧ, ಬಸವ, ಕನಕದಾಸ, ಗಾಂಧೀಜಿ, ಮೌಲಾನ ಆಜಾದ್, ಅಂಬೇಡ್ಕರ್, ಶಿಶುನಾಳ ಶರೀಫ, ಸೂಫಿ ಸಂತರು, ಜಲಾಲುದ್ದೀನ್, ಕುವೆಂಪು, ಬೇಂದ್ರೆ ಹೀಗೆ ಹಲವಾರು ದಾರ್ಶನಿಕರು, ಕವಿಗಳು ನಮಗೆ ಸೌಹಾರ್ದತೆ, ಸಮಾನತೆ, ಭ್ರಾತೃತ್ವ, ಧಾರ್ಮಿಕ ಸಮಾನತೆ, ಎಲ್ಲರೂ ಒಂದೇ ಎಂಬ ವಿಚಾರಗಳನ್ನು ಬಿತ್ತಿ ಹೋಗಿದ್ದಾರೆ' ಎಂದರು. ದೇಶದಲ್ಲಿ ದ್ವೇಷ ಬಿತ್ತುವವರು ಒಂದು ಧರ್ಮದಲ್ಲಿ ಇದ್ದಾರೆ ಎಂದರೆ ಅದು ಅರ್ಧ ಸತ್ಯವಾಗುತ್ತದೆ. ಎಲ್ಲಾ ಧರ್ಮಗಳಲ್ಲೂ ದ್ವೇಷ ಬಿತ್ತುವವರು ಇದ್ದಾರೆ. ದ್ವೇಷ ಬಿತ್ತುವವರು ಸಣ್ಣ ಸಂಖ್ಯಾತರು, ಸೌಹಾರ್ದತೆ, ಸಮಾನತೆ ಬಯಸುವವರು ಬಹುಸಂಖ್ಯಾತರು. ಕರ್ನಾಟಕಕ್ಕೂ ಸೌಹಾರ್ದತೆಯ ಬಹುದೊಡ್ಡ ಪರಂಪರೆ ಇದೆ. ಅದನ್ನು ನಮ್ಮ ಜನರು ಉಳಿಸಿಕೊಳ್ಳುತ್ತಾರೆ' ಎಂದು ಭರವಸೆ ವ್ಯಕ್ತಪಡಿಸಿದರು.

'ಇವತ್ತಿನ ಸಂದರ್ಭಕ್ಕೆ ವೈರುಧ್ಯಗಳನ್ನು ಮೀರಿ ಒಂದುಗೂಡಿಸುವ, ಸೌಹಾರ್ದತೆಯನ್ನು ಕಟ್ಟುವ ಜವಾಬ್ದಾರಿ ನಮ್ಮ ಮೇಲಿದೆ. ಅದನ್ನು ನಮ್ಮೆಲ್ಲರ ಕರ್ತವ್ಯವೆಂದು ಭಾವಿಸೋಣ. ಕರ್ನಾಟಕದಲ್ಲಿ ಸೌಹಾರ್ದತೆಯನ್ನು ಗಟ್ಟಿಗೊಳಿಸೋಣ' ಎಂದು ಅವರು ಕರೆ ನೀಡಿದರು.

ಎಲ್ಲ ಧರ್ಮಗಳಲ್ಲೂ ಸಣ್ಣ ಜನ ಇರುತ್ತಾರೆ? – ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

'ಎಲ್ಲ ಧರ್ಮಗಳಲ್ಲೂ ಸಣ್ಣ ಜನ ಇರುತ್ತಾರೆ. ಇಂತಹವರನ್ನು ಪ್ರತಿಭಟಿಸುವ ಮನೋಸ್ಥೈರ್ಯ ನಮಗೆ ಬೇಕಿದೆ. ಅಶಾಂತಿಯನ್ನು ನಮ್ಮ ಮನಸ್ಸಿನೊಳಗೆ ಯಾರು ನುಗ್ಗಿಸಿದರು, ಹೇಗೆ ನುಗ್ಗಿಸಿದರು, ಎಂಬುದನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ತಲೆಯಲ್ಲಿ ಕೇವಲ ಗೊಬ್ಬರ, ಕಸ ತುಂಬಿಕೊಂಡು ಅಜ್ಞಾನಿಗಳಾಗಬಾರದು' ಎಂದು ಸಿರಿಗೆರೆ ತರಳಬಾಳು ಬೃಹನ್ಮಠದ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಎಚ್ಚರಿಸಿದರು.

ಮುಂದುವರಿದು ಮಾತನಾಡಿದ ಅವರು, 'ಧರ್ಮ ರಾಜಕೀಯದ ಹೆಸರಿನಲ್ಲಿ ಹಗಲು ದರೋಡೆ ನಡೆಯುತ್ತಿದೆ. ಧರ್ಮ–ರಾಜಕೀಯದ ದುರಂಧರರು ಹೊತ್ತು ಬಂದಂತೆ ಕೊಡೆ ಹಿಡಿಯುತ್ತಿದ್ದಾರೆ' ಎಂದು ವಿಷಾಧ ವ್ಯಕ್ತಪಡಿಸಿದರು. 'ಸಂವಿಧಾನ ನಮ್ಮ ಧರ್ಮವಾಗಬೇಕು. ಸರಿದಾರಿಯಲ್ಲಿ ಸಾಗಿ ಎಲ್ಲರೂ ಬಯಸುವ ದೇಶ ಕಟ್ಟಬೇಕು. ವ್ಯಕ್ತಿಗತ ಶುದ್ಧಿಯಿಂದ ಲೋಕಶುದ್ಧಿಯ ಕಡೆಗೆ ಸಾಗಬೇಕು. ಇದನ್ನು ಎಲ್ಲ ಧರ್ಮದವರೂ ಅರಿಯಬೇಕು' ಎಂದು ಕಿವಿಮಾತು ಹೇಳಿದರು.


ಸಮಾಜದಲ್ಲಿ ಮಾನವೀಯತೆ ತುಂಬ ಬೇಕು

ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ 'ಸಮಾಜದಲ್ಲಿ ಮಾನವ ಹಕ್ಕುಗಳನ್ನು ಮೊದಲು ತುಂಬಬೇಕು. ಸಂವಿಧಾನ, ಕಾನೂನನ್ನು ನ್ಯಾಯಾಲಯದಲ್ಲಿ ತುಂಬಬೇಕು' ಎಂದು ಹೇಳಿದರು.

ಸೌಹಾರ್ದತೆಯನ್ನು ಕದಡುವರಿಗೆ ತಲೆದೂಗಬಾರದು: ಮೌಲಾನಾ ಶಾಫಿ ಸಅದಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಶಾಫಿ ಸಅದಿ ಮಾತನಾಡಿ, 'ಎಲ್ಲಾ ಧರ್ಮಗಳನ್ನು ಪ್ರೀತಿಸುವುದನ್ನು, ಗೌರವಿಸುವುದನ್ನು ಕಲಿಯಬೇಕು ಯಾರು ಧರ್ಮವನ್ನು ಹೀಯಾಳಿಸಿಸುವ ಕಾರ್ಯ ಮಾಡಬಾರದು' ಎಂದು ಹೇಳುತ್ತಾ ಇಂದು ದೇಶದಲ್ಲಿ ಧರ್ಮಾಂಧತೆ ತಾರಕಕ್ಕೆ ಏರುತ್ತಿದ್ದು ದೇಶದ ಜನರ ನಡುವಿನ ಸಾಮರಸ್ಯವನ್ನು ಕಡಡುವಂತೆ ಮಾಡುತ್ತಿದೆ. ಇದಕ್ಕೆ ನಾವೆಲ್ಲ ತಲೆದೂಗಬಾರದು. ಜಗತ್ತಿನಲ್ಲಿ ವಿವಿಧ





ಜಸ್ಟೀಸ್ ಎಚ್.ಎನ್. ನಾಗಮೋಹನ್ ದಾಸ್



ಜಸ್ಟೀಸ್ ವಿ. ಗೋಪಾಲಗೌಡ



ರೀತಿಯಲ್ಲಿ ಹೂಗಳು, ಹಣ್ಣುಗಳು, ಚಿಟ್ಟೆಗಳು ಇವೆಯೋ ಅದೇ ರೀತಿ ಈ ನಮ್ಮ ಭಾರತದಲ್ಲಿ ಒಳ್ಳೆಯ ಧರ್ಮ, ಜಾತಿ, ಸಂಸ್ಕೃತಿಯ ಜನರಿದ್ದಾರೆ. ಹಾಗಾಗಿ ಕೆಲವು ಕಿಡಿಗೇಡಿಗಳು ಧರ್ಮ ಜಾತಿ ಹೆಸರಲ್ಲಿ ನಮ್ಮ ಮನಸನ್ನು, ಏಕತೆಯನ್ನು ಕದಡುವಂತೆ ಮಾಡುತ್ತಿದ್ದಾರೆ. ಅದಕ್ಕೆ ನಾವು ಜಗ್ಗಬಾರದು, ರಾಜ್ಯದಲ್ಲಿ ಧರ್ಮದ ಹೆಸರಲ್ಲಿ ಬೆಂಕಿ ಹೊತ್ತಿ ಉರಿಯುತ್ತಿರುವ ಈ ಸಮಯದಲ್ಲಿ ಇಂತಹ ಸೌಹಾರ್ದತೆ ಮೂಡಿಸುವಂತಹ ಕಾರ್ಯಕ್ರಮ ಕೈಗೊಂಡಿದ್ದು ರಾಜ್ಯದ ಜನರಿಗೆ ಮಾದರಿಯಾಗಲಿದೆ' ಎಂದು ತಿಳಿಸಿದರು.

ಸಾಣೇಹಳ್ಳಿಯ ಸಿರಿಗೆರೆ ತರಳಬಾಳು ಬೃಹನ್ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಚಿತ್ರದುರ್ಗ ಛಲವಾದಿ ಜಗದ್ಗುರು ಪೀಠದ ಬಸವನಾಗಿದೇವ ಶರಣರು, ಹೊಸದುರ್ಗ ಕಾಗಿನೆಲೆ ಕನಕ ಗುರುಪೀಠ ಶಾಖೆಯ ಈಶ್ವರಾನಂದಪುರಿ ಸ್ವಾಮೀಜಿ ಹಾಗೂ ಅಲ್ ಹಿದಾಯ ಮಸ್ಜಿದ್ ನ ಮೌಲಾನಾ ಶಾಹುಲ್ ಹಮೀದ್ ಮೌಲ್ವಿ ಇದ್ದರು.

ಕೂಡಲಿ ಶೃಂಗೇರಿ ಮಠದ ವಿದ್ಯಾವಲ್ಲಭ ವಿದ್ಯಾರಣ್ಯ ಭಾರತೀ ಸ್ವಾಮೀಜಿ, ಬೆಂಗಳೂರಿನ ಆರ್ಚ್ ಬಿಷಪ್ ರೆ.ಫಾ.ಡಾ.ಪೀಟರ್ ಮಜಾದೊ, ರಾಜನ ಹಳ್ಳಿ ಮಹರ್ಷಿ ವಾಲ್ಮೀಕಿ ಗುರು ಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಕಾಗಿನೆಲೆ ಗುರುಪೀಠದ ಹೊಸ ದುರ್ಗ ಶಾಖೆಯ ಈಶ್ವರಾನಂದಪುರಿ ಸ್ವಾಮೀಜಿ, ಹಿರಿಯೂರಿನ ಆದಿಜಾಂಬವ ಪೀಠದ ಷಡಕ್ಷರಿ ಮುನಿ ಸ್ವಾಮೀಜಿ, ಹೊಸದುರ್ಗ ಕುಂಚಟಿಗ ಪೀಠದ ಶಾಂತವೀರ ಸ್ವಾಮೀಜಿ, ಅಲ್ ಹಿದಾಯಿ ಮಸೀದಿಯ ಮೌಲಾನ ಶಾಹುಲ್ ಹಮೀದ್ ಮೌಲ್ವಿ, ಅವರುಗಳು ಬುದ್ಧ, ಬಸವ, ಗಾಲಿಬ್, ಶಿವರುದ್ರಪ್ಪರಂತಹ ಹೆಸರಾಂತ ಮಹಾನೀಯರ ವಾಕ್ಯಗಳನ್ನು ಉಲ್ಲೇಖಿಸಿ ಮಾತನಾಡಿದರು. ಸಮಾವೇಶಕ್ಕೆ ಸಾಹಿತಿಗಳು, ಪತ್ರಕರ್ತರು, ಬರಹಗಾರರು, ಸಂಘಟಕರು ಸೇರಿದಂತೆ ಸುಮಾರು 900 ಕ್ಕೂ ಅಧಿಕ ಸಂಖ್ಯೆಯಲ್ಲಿ ರಾಜ್ಯದ ವಿವಿದೆಡೆಗಳಿಂದ ಆಗಮಿಸಿದ್ದರು. 'ಜನಶಕ್ತಿ ಮೀಡಿಯಾ' ಕಾರ್ಯಕ್ರಮದ ಪ್ರಸಾರಕ್ಕೆ ಸಹಯೋಗ ನೀಡಿತ್ತು.

ಕ್ರೈಸ್ತಧರ್ಮದ ಗುರುಗಳಾದ ಅ.ವಂ. ರೆವರೆಂಡ್ ಪೀಟರ್ ಮಚಾಡೊ ಮಾತನಾಡಿ, 'ಭಾರತ ದೇಶ ಹಲವು ಧರ್ಮಗಳ ದೇಶವಾಗಿದೆ. ಧರ್ಮವು ಮೌಲ್ಯಗಳನ್ನು ಎತ್ತಿಹಿಡಿಯಬೇಕು. ಬೆಂಗಳೂರಿನ ಕರಗವು ಮುಸ್ಲಿಂ ಮಸೀದಿಗೆ ಹೋಗುವುದು ಸಾಮರಸ್ಯ ಸಂಸ್ಕೃತಿ, ಧಾರ್ಮಿಕ ಸಹಿಷ್ಣುತೆಯನ್ನು ತೋರಿಸುತ್ತದೆ. ಸಾಮರಸ್ಯ ಸಾರುವ ಧರ್ಮವೇ ಶ್ರೇಷ್ಠ ಧರ್ಮ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ವಿ. ಗೋಪಾಲಗೌಡ, ಎಚ್.ಎನ್. ನಾಗಮೋಹನದಾಸ್, ಹಿರಿಯ ಪತ್ರಕರ್ತ ಬಿಎಂ ಹನೀಫ್, ಸೌಹಾರ್ದ ಕರ್ನಾಟಕದ ಎಸ್.ವೈ. ಗುರುಶಾಂತ್, ಜ್ಯೋತಿ ಅನಂತ ಸುಬ್ಬಾರಾವ್, ಕರ್ನಾಟಕ ಜನಶಕ್ತಿಯ ಮಲ್ಲಿಗೆ, ದಲಿತ ಮುಖಂಡರಾದ ಆರ್.ಮೋಹನ್ ರಾಜ್, ಮಾವಳ್ಳಿ ಶಂಕರ್, ಬಿ. ರಾಜಶೇಖರಮೂರ್ತಿ, ಮಹಿಳಾ ಸಾಂಸ್ಕೃತಿಕ ಸಂಘಟನೆಯ ಮಂದಾರ, ಸೇರಿದಂತೆ ಅನೇಕ ಸಂಘಟನೆಗಳ ಮುಖಂಡರು, ಚಿಂತಕರು ಉಪಸ್ಥಿತರಿದ್ದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ದ ಸಂಚಾಲಕ ಮಾವಳ್ಳಿ ಶಂಕರ್ ವಿವಿಧ ಸಂಘಟನೆಗಳ ಸಂಯುಕ್ತ ಸಮಿತಿಯ ಪರವಾಗಿ ಸ್ವಾಗತಿಸಿದರು. ಅನಿವಾರ್ಯ ಕಾರಣಗಳಿಂದ ಪಾಲ್ಗೊಳ್ಳಲಾಗದ ಸ್ವಾಮೀಜಿಗಳ ಸಂದೇಶವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಸಂಚಾಲಕ ಆರ್. ಮೋಹನರಾಜ್ ಓದಿದರು. ವಿವಿಧ ಸಂಘಟನೆಗಳ ಪ್ರತಿನಿಧಿಗಳು ಅತಿಥಿಗಳಿಗೆ ಪುಸ್ತಕ ನೀಡುವ ಮೂಲಕ ಗೌರವಪೂರ್ವಕವಾಗಿ ಸ್ವಾಗತಿಸಿದರು.

ಪತ್ರಕರ್ತರಾದ ಬಿ.ಎಂ. ಹನೀಫ್, ಎಸ್.ವೈ. ಗುರುಶಾಂತ್ ರವರು ಕಾರ್ಯಕ್ರಮವನ್ನು ನಿರ್ವಹಣೆ ಮಾಡಿದರು. ಪ್ರೊ. ಬರಗೂರ್ ಅವರ ಆಶಯ ನುಡಿಗಳ 'ದ್ವೇಷ ಬಿಟ್ಟು, ದೇಶ ಕಟ್ಟು' ಕಿರು ಹೊತ್ತಿಗೆ ಬಿಡುಗಡೆಯೂ ಆಯಿತು.

ಸಮಾವೇಶದ ಅದ್ಯಕ್ಷತೆಯನ್ನು ನ್ಯಾ. ವಿ. ಗೋಪಾಲಗೌಡ ರವರು ವಹಿಸಿ ಮಾತನಾಡಿದರು. ವಕೀಲರ ಸಂಘದ ಮಾಜಿ ಅದ್ಯಕ್ಷರಾದ ಎ.ಆರ್. ರಂಗನಾಥ್ ವಂದನಾರ್ಪಣೆ ಮಾಡಿದರು. ಆರಂಭದಲ್ಲಿ ಇಪ್ಟಾ ತಂಡ, ಚಿಂತನ್ ಜನ್ನಿ ಮುಂತಾದವರಿಂದ ಸೌಹಾರ್ದ ಗೀತೆಗಳ ಗಾಯನ ನಡೆಯಿತು.

ಸಮಾವೇಶದಲ್ಲಿ ಹಿರಿಯ ಚಿಂತಕರಾದ ಡಾ. ಕೆ. ಮರುಳುಸಿದ್ದಪ್ಪ, ಹಿರಿಯ ಗಾಂಧಿವಾದಿ ಇ.ಪಿ. ಮೆನನ್, ಪ್ರೊ. ಟಿ.ಆರ್. ಚಂದ್ರಶೇಖರ್, ಬಸವಕಲ್ಯಾಣದ ಸೂಫಿ ಸಂತರ ಪ್ರತಿನಿಧಿ, ವಿಜ್ಞಾನಿ ಡಾ. ಚಟರ್ಜಿ ಇದ್ದರು. ಕವಯಿತ್ರಿ ಕೆ.ಶರೀಫಾ, ಪ್ರೊ.ಸುಕನ್ಯಾ, ಬಂಡಾಯ ಸಾಹಿತಿಗಳಾದ ಡಾ.ರಾಜಪ್ಪ ದಳವಾಯಿ, ಆರ್.ಜಿ.ಹಳ್ಳಿ.ನಾಗರಾಜ್, ಸಿಪಿಐ(ಎಂ) ಕಾರ್ಯದರ್ಶಿ .ಯು.ಬಸವರಾಜ್, ಹಿರಿಯ ಮುಖಂಡರಾದ ಜಿ.ಎನ್. ನಾಗರಾಜ್, ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಮುತ್ತೆಹಿದಾ ಮಹಾಜ್ ನ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಇಕ್ಬಾಲ್ ಅಹಮದ್, ರಾಷ್ಟ್ರೀಯ ಸಂಶೋದನೆ ಮತ್ತು ಅಭಿವೃದ್ಧಿ ಕೇಂದ್ರದ ನಿರ್ದೇಶಕರೂ, ನಿವೃತ್ತ ಉಪ ಪೋಲೀಸ್ ಕಮಿಷನರ್ ಆದ ನಿಸಾರ್ ಅಹಮದ್ ರವರು, ರೈತ ಕಾರ್ಮಿಕರ ಸಂಯುಕ್ತ ಕರ್ನಾಟಕದ ಸಂಚಾಲಕ ಜಿ.ಸಿ. ಬಯ್ಯಾರೆಡ್ಡಿ, ಜೆ.ಎಂ. ವೀರಸಂಗಯ್ಯ, ಜೆ.ಸಿ.ಟಿ.ಯುವಿನ ನಾಯಕರಾದ ಎಸ್. ವರಲಕ್ಷ್ಮಿ, ಭಟ್, ಎಂ.ಎನ್. ಶ್ರೀರಾಮ್, ಮಹಿಳಾ ಸಂಘಟನೆಯ ಮುಖಂಡರಾದ ಗೌರಮ್ಮ, ದಲಿತ ಸಂ.ಸ.ಯ ಬಸವರಾಜ ಕವಿತಾಳ ಮುಂತಾದವರು ಉಪಸ್ಥಿತರಿದ್ದರು.

ರಾಜ್ಯದಾದ್ಯಂತ ಶಾಂತಿ, ಸೌಹಾರ್ದತೆ ಬಲಪಡಿಸುವ ಸಂದೇಶದೊಂದಿಗೆ ಸೌಹಾರ್ದ ಸಂಸ್ಕೃತಿ ಸಮಾವೇಶ ಸಮಾರೋಪಗೊಂಡಿತು. ದೆಸೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ಸಾಮರಸ್ಯ ಬೆಸೆಯುವ ಸಂದೇಶ ಸಾರುವ ಈ ಕಾರ್ಯಕ್ರಮಗಳಲ್ಲಿ ತಾವುಗಳು ಭಾಗಿಯಾಗುವುದಾಗಿ ನ್ಯಾಯಮೂರ್ತಿಗಳು, ಧರ್ಮಗುರುಗಳು ತಿಳಿಸಿದರು.

ನೀನು-ನಾನು ಎಂಬ ಭಾವನೆಗಳು ಬದಲಾಗಬೇಕು

ಚಿತ್ರದುರ್ಗದ ಛಲವಾದಿ ಪೀಠಾಧ್ಯಕ್ಷ ಬಸವ ನಾಗಿದೇವ ಸ್ವಾಮೀಜಿ ಅವರು, 'ವಿಧಾನಸೌಧದಲ್ಲಿರುವ ಬಲ್ಬ್‌ಗಳು (ಜನಪ್ರತಿನಿಧಿಗಳು) ಸರಿಯಿಲ್ಲ. ಕೆಲವು ಪಕ ಪಕ ಅಂತಿದ್ದರೆ, ಇನ್ನೂ ಕೆಲವು ಉರಿಯುತ್ತಲೇ ಇಲ್ಲ. ಹಾಗಾಗಿ ವಿದ್ಯುಚ್ಛಕ್ತಿ ಹಾಯಿಸುವ ಮತದಾರ ಇವುಗಳನ್ನು ಬದಲಾಯಿಸಬೇಕಿದೆ' ಎಂದು ಕುಟುಕಿದರು.

'ನಮ್ಮ ಜನಪ್ರತಿನಿಧಿಗಳ ಆಯ್ಕೆಯಲ್ಲಿನ ದೋಷವೇ ಇವತ್ತಿನ ಇಷ್ಟೆಲ್ಲಾ ಅಶಾಂತಿಗಳಿಗೆ ಪ್ರಮುಖ ಕಾರಣವಾಗಿದೆ' ಎಂದ ಅವರು, 'ಇಂದು ಕೆಲವು ಮಠಾಧೀಶರು ಮತಬ್ಯಾಂಕ್‌ಗಳ ಶಾಖೆಗಳಂತಾಗಿದ್ದಾರೆ. ರಾಜಕಾರಣಿಗಳು ವಿಧಾನಸೌಧದ ಪಶ್ಚಿಮ ದ್ವಾರದಲ್ಲೇ ವ್ಯವಹರಿಸುವ ಮೂಲಕ ವಾಸ್ತವದಲ್ಲೂ ಹಿಂಬಾಗಿಲ ವ್ಯವಹಾರಗಳಲ್ಲಿ ಮುಳುಗಿದ್ದಾರೆ. ಈ ವ್ಯವಸ್ಥೆ ಸರಿಯಾಗಲು ಮತದಾರರು ಆಮಿಷಗಳಿಂದ ದೂರಾಗಿ ಉತ್ತಮರನ್ನು ಆಯ್ಕೆ ಮಾಡುವುದೇ ಸರಿಯಾದ ಮಾರ್ಗ' ಎಂದರು.

'ಅಂತರಂಗ ಹಾಗೂ ಬಹಿರಂಗದಲ್ಲಿ ಒಂದೆ ಮಾತು ಒಂದೆ ನಡವಳಿಕೆ ಇರಬೇಕು. ಕಾರ್ಯಕ್ರಮದ ಹೊರಗೆ ಒಳಗೆ ಒಂದೇ ಮಾತಿರಬೇಕು. ಮೊದಲು ನೀನು-ನಾನು ಎಂಬ ಭಾವನೆಗಳು ಬದಲಾಗಬೇಕೆಂದು' ಹೇಳಿದರು. ಮರುಭೂಮಿಯಲ್ಲಿ ನೀರುಣಿಸುವ ಹಾಗೆ ಜಾತಿ, ಧರ್ಮ, ದೇವರುಗಳ ತಾರತಮ್ಯಕ್ಕೆ ಬುದ್ಧನ ಮೌನವೇ ಮಾತಾಯಿತು ಎಂದರು.




ಬಸವನಾಗಿದೇವ ಶರಣರು


ರೆ. ಫಾ. ಡಾ. ಪೀಟರ್ ಮಜಾದೊ


ಮೌಲಾನಾ ಶಾಫಿ ಸಅದಿ


ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ


ಶಾಂತವೀರ ಮಹಾಸ್ವಾಮಿ



ಕಿನ್ಯಾ ಗ್ರಾ.ಪಂ.ಕಚೇರಿ ಮುಂದೆ ಡಿಎಚ್ಎಸ್ ಪ್ರತಿಭಟನೆ:

ದಲಿತ ಕುಟುಂಬಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ನಿರ್ಲಕ್ಷ್ಯ ವಹಿಸುತ್ತಿರುವುದರ ವಿರುದ್ಧ ಮಂಗಳೂರು ತಾಲೂಕಿನ ಕಿನ್ಯಾ ಗ್ರಾಮ ಪಂಚಾಯತ್ ಕಚೇರಿ ಎದುರು ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಮೇ 4 ರಂದು ಪ್ರತಿಭಟನೆ ನಡೆಯಿತು.

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕ ಡಾ.ಕೃಷ್ಣಪ್ಪ ಕೊಂಚಾಡಿ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು. ವಾಸಿಸಲು ಮನೆ, ಶೌಚಾಲಯ, ಸಮರ್ಪಕ ಕುಡಿಯುವ ನೀರು, ದಾರಿದೀಪ, ಸಂಪರ್ಕ ರಸ್ತೆ, ಚರಂಡಿ ವ್ಯವಸ್ಥೆ ಸೇರಿದಂತೆ ಹಲವಾರು ಮೂಲಭೂತ ಸೌಕರ್ಯಗಳನ್ನು ದಲಿತರಿಗೆ ನೀಡದೆ ಗ್ರಾ.ಪಂ.ಸತಾಯಿಸುತ್ತಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದವರು ಆರೋಪಿಸಿದರು. ಸರಕಾರದ ಡಿ.ಸಿ.ಮನ್ನಾ ಜಾಗ ಮಂಜೂರ ಆಗಿದ್ದರೂ, ಅದಕ್ಕೆ ಸಂಬಂಧಿಸಿದ ಸಮರ್ಪಕ ಭೂದಾಖಲೆಗಳು ಇನ್ನೂ ದಲಿತರ ಕೈಸೇರಿಲ್ಲ ಎಂದು ಟೀಕಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿಎಚ್ಎಸ್ ಸಲಹೆಗಾರ ಯೋಗೀಶ್ ಜಪ್ಪಿನಮೊಗರು, ಡಿವೈಎಫ್ಐನ ಮನೋಜ್ ವಾಮಂಜೂರು, ಡಿಎಚ್ಎಸ್‌ನ ಮಂಗಳೂರು ನಗರ ಅಧ್ಯಕ್ಷರಾದ ರಾಧಾಕೃಷ್ಣ, ಕಾರ್ಯದರ್ಶಿ ಕೃಷ್ಣ ತಣ್ಣೀರುಬಾವಿ, ಉಳ್ಳಾಲ ವಲಯ ಡಿಎಚ್ಎಸ್ ಮುಖಂಡ ನಾರಾಯಣ ತಲಪಾಡಿ, ಕಿನ್ಯಾ ಗ್ರಾಮ ಸಮಿತಿಯ ಅಧ್ಯಕ್ಷ ಚಂದ್ರಶೇಖರ, ಕಾರ್ಯದರ್ಶಿ ರೋಹಿದಾಸ್, ಕೊರಗಪ್ಪ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಧಾನಸಭೆಯಲ್ಲಿ ಧ್ವನಿ ಎತ್ತಲು ಒತ್ತಾಯಿಸಿ– ಶಾಸಕರಿಗೆ ಮನವಿ

ಅರವತ್ತು ವಯಸ್ಸಿನ ನೆಪವೊಡ್ಡಿ 19 ವರ್ಷ ಸೇವೆಸಲ್ಲಿಸಿದ ಬಿಸಿಯೂಟದ ಅಡುಗೆದಾರರನ್ನು ಅಮಾನವಿಯವಾಗಿ ಕೆಲಸದಿಂದ ಬಿಡುಗಡೆ ಮಾಡುತ್ತಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) ರಾಮದುರ್ಗ ತಾಲೂಕಾ ಸಮಿತಿ ನೇತೃತ್ವದಲ್ಲಿ ಶಾಸಕರ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಅವರ ಅನುಪ ಸ್ಥಿತಿಯಲ್ಲಿ ಅವರ ಆಪ್ತ ಸಹಾಯಕರಾದ ಸುರೇಶ ತುಪ್ಪದರವರಿಗೆ ಮನವಿ ಸಲ್ಲಿಸಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಜಿ.ಎಮ್. ಜೈನೆಖಾನ್ ರವರು ಮಾತನಾಡಿ 2001–02ರಲ್ಲಿ ಪ್ರಾರಂಭವಾದ ಬಿಸಿ ಅಡುಗೆ ಯೋಜನೆಗೆ ಕೆಲಸಕ್ಕೆ ನೇಮಕಾತಿ ಮಾಡಿಕೊಳ್ಳುವಾಗ ವಿಧ್ಯಾಭ್ಯಾಸ ಮತ್ತು ವಯಸ್ಸಿನ ಅರ್ಹತೆ ಮಾತ್ರ ಕೇಳಲಾಗಿತ್ತು. ನಿವೃತ್ತಿಯ ವಯಸ್ಸು ಸರ್ಕಾರದ ಮಾರ್ಗಸೂಚಿಯಲ್ಲಿ ಇಲ್ಲವೇ ಇಲ್ಲ. 2016 ರಿಂದ ಬಿಸಿಯೂಟದ ನೌಕರರಿಗೆ ನಿವೃತ್ತಿ ಸೌಲಭ್ಯ ಕೊಡಬೇಕೆಂದು ಸರ್ಕಾರದ ಗಮನ ಸೆಳೆದು ಮನವಿ ನೀಡುತ್ತಾ ಬರಲಾಗಿದೆ. ಈ ಕುರಿತು ಸರ್ಕಾರ ಗಂಭೀರವಾಗಿ ಪರಿಗಣಿಸದೆ ಧೀಡಿರಾಗಿ ಅರವತ್ತು ವರ್ಷ ವಯಸ್ಸಿನ ಬಡ ಮಹಿಳೆಯರನ್ನು ಕೆಲಸದಿಂದ ತೆಗೆಯುವ ಸರ್ಕಾರದ ಕ್ರಮ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಅರವತ್ತು ವರ್ಷ ದಾಟಿದ ಒಟ್ಟು 12 ಸಾವಿರ ಬಡ ನೌಕರರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಸರ್ಕಾರ ಇವರಿಗೆ ಪರಿಹಾರ ನೀಡಿ ಕೆಲಸದಿಂದ ಮುಕ್ತಗೊಳಿಸಬೇಕು ಇಲ್ಲವಾದಲ್ಲಿ ಈಗ ಮಾಡಿರುವ ಆದೇಶವನ್ನು ವಾಪಸ ಪಡೆಯಬೇಕೆಂದು ಸಿಐಟಿಯು ತಾಲೂಕಾ ಅಧ್ಯಕ್ಷ ನಾಗಪ್ಪ ಸಂಗೊಳ್ಳಿ ಮಾತನಾಡಿದರು.

ಪ್ರತಿಭಟನೆಯಲ್ಲಿ ತಾಲೂಕಾ ಮುಖಂಡರಾದ ರುಕ್ಮವ್ವ ಬಿಜ್ಜನ್ನವರ, ರಾಚವ್ವ ರಾಮದುರ್ಗ, ಮೀನಾಕ್ಷಿ ಸಂಶಿ, ಮತ್ತು ಮಮತಾಜ ನಾಲಬಂದ ಮತ್ತಿತರಿದ್ದರು.



ಆಂಗನವಾಡಿ ಕಾರ್ಯಕರ್ತೆ ಮೇಲೆ ದೌರ್ಜನ್ಯ, ಕೊಲೆಯತ್ನ – ಆರೋಪಿಗಳ ಬಂಧನಕ್ಕೆ ಆಗ್ರಹ

ಆಂಗನವಾಡಿ ಕಾರ್ಯಕರ್ತೆಯ ಮೇಲೆ ದೌರ್ಜನ್ಯ ನಡೆಸಿ, ಲೈಂಗಿಕ ಕಿರುಕುಳ ನೀಡಿ, ಕೊಲೆ ಯತ್ನಕ್ಕೆ ಪ್ರಯತ್ನಿಸಿದ ಘಟನೆ ರಾಜಪ್ಪನ ದೊಡ್ಡಿಯಲ್ಲಿ ನಡೆದಿದೆ. ಆರೋಪಿಗಳನ್ನು ಬಂಧಿಸಿ. ಕಠಿಣ ಶಿಕ್ಷೆ ನೀಡುವಂತೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ತುಮಕೂರು ಜಿಲ್ಲಾ ಸಮಿತಿ ಆಗ್ರಹಿಸಿದೆ.

ಕುಣಿಗಲ್ ತಾಲ್ಲುಕು ಹುಲಿಯೂರುದುರ್ಗ ಹೋಬಳಿ ವ್ಯಾಪ್ತಿಯ ರಾಜಪ್ಪನ ದೊಡ್ಡಿ ಯಲ್ಲಿ ಮೇ 05 ರಂದು ಅಂಗನವಾಡಿ ಕಾರ್ಯಕರ್ತೆ ಮನೆಗೆ ಹಿಂದಿರುಗುವ ವೇಳೆ ಅವರ ಮೇಲೆ ಅತ್ಯಚಾರಕ್ಕೆ ಯತ್ನಿಸಿದ್ದು, ಅವರ ಬಳಿ ಇದ್ದ ಮೋಬೈಲ್ ಪೋನ್, ಕತ್ತಿನಲ್ಲಿ ಇದ್ದ ಚಿನ್ನದ ಸರ ಕಿತ್ತು, ಕೊಲೆಗೆ ಯತ್ನಸಲಾಗಿದೆ. ಈ ಕುರಿತು ಸಂತ್ರಸ್ತೆ ದೂರು ದಾಖಲಿಸಿದ್ದು, ಇಲ್ಲಿಯವರೆಗೆ ಆರೋಪಿಗಳನ್ನು ಬಂಧಿಸಿಲ್ಲ.

ಈ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಅಂಗನವಾಡಿ ನೌಕರರ ಸಂಘಟನೆಯ ಜಿಲ್ಲಾಧ್ಯಕ್ಷೆ ಜಿ.ಕಮಲಾ, ಜಿಲ್ಲಾ ಪ್ರಧಾನ ಕಾರ್ಯಧರ್ಶಿಗಳಾದ ಗುಲ್ಜಾರ್ ಭಾನು ರವರು ಭೇಟಿ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ. ನಂತರ ಮಾಧ್ಯಮಗಳ ಜೊತೆ ಜಂಟಿಯಾಗಿ ಮಾತನಾಡಿದ ಇವರು, ನಿರಂತರವಾಗಿ ಜಿಲ್ಲೆಯಲ್ಲಿ ಅಂಗನವಾಡಿ ನೌಕರರ ಮೇಲೆ ಇತ್ತಿಚೆಗೆ ದೌರ್ಜನ್ಯಯದ ಪ್ರಕರಣಗಳು ಹೆಚ್ಚುತ್ತಿವೆ. ಆ ಪ್ರಕರಣಗಳ ಕುರಿತು ಆರೋಪಿಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿತ್ತು. ಆದರೂ ಪೊಲೀಸ್ ಇಲಾಖೆ ಯಾವುದೆ ಕ್ರಮ ಜರುಗಿಸಿಲ್ಲ. ಈ ಕಾರಣದಿಂದಾಗಿಯೆ ಮತ್ತೊಂದು ದುರಂತ ನಡೆದಿದೆ. ಕೂಡಲೆ ಅಪರಾಧಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯ ಜೊತೆಗೆ ಪೋಲಿಸರು ಅಸಮಂಜಸ ಪ್ರಶ್ನೆಗಳನ್ನು ಕೇಳುವ ಮೂಲಕ ಪ್ರಕರಣದ ದಿಕ್ಕನ್ನು ತಪ್ಪಿಸುತ್ತಿದ್ದಾರೆ. ಪೊಲೀಸರ ಈ ವರ್ತನೆ ಸರಿಯಾದುದಲ್ಲ. ಈ ಪ್ರಕರಣದಲ್ಲಿ ನೊಂದಿರುವ ಮಹಿಳೆಗೆ ಸೂಕ್ತ ರಕ್ಷಣೆಯನ್ನು ನಿಡಬೇಕು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ (ಸಿಐಟಿಯು) ಆಗ್ರಹಿಸಿದೆ.

ಮಾಧ್ಯಮ ರಕ್ಷಣಾ ಕಾಯ್ದೆ ಮತ್ತು ಶಾಶ್ವತ ವೇತನ ನಿಗದಿ ವ್ಯವಸ್ಥೆಯನ್ನು ತರಬೇಕು ವಿಶಾಲ ತಳಹದಿಯ 'ಮಾಧ್ಯಮ ಮಂಡಳಿ'ಯನ್ನು ರಚಿಸಬೇಕು.......... ಪುಟ 2 ರಿಂದ

ಕಾನೂನು ಇನ್ನೂ ಜಾರಿಯಲ್ಲಿದೆ ಅನೇಕ ಪತ್ರಕರ್ತರ ಮೇಲೆ ಕೇವಲ ಟ್ವೀಟ್ ಅಥವಾ ಫೇಸ್ ಬುಕ್‌ನಲ್ಲಿ ಬರೆದ ಟಿಪ್ಪಣಿಗಳಿಗಾಗಿ ದೇಶದ್ರೋಹದ ಆರೋಪವನ್ನು ಹೊರಿಸಲಾಗಿದೆ. ಕೋವಿಡ್ ಲಾಕ್‌ಡೌನ್ ಸಮಯದಲ್ಲೂ ಮಾಧ್ಯಮದವರು ಸಾರ್ವಜನಿಕ ಆಸ್ಪತ್ರೆಗಳ ಲೋಪದೋಷಗಳು ಅಥವಾ ಆಸ್ಪತ್ರೆಯಲ್ಲಿನ ಭ್ರಷ್ಟಾಚಾರದ ಕುರಿತು ವರದಿ ಮಾಡಿದ್ದಕ್ಕಾಗಿ ಕೆಲವರನ್ನು ಬಂಧಿಸಲಾಯಿತು. ಇತ್ತೀಚೆಗಷ್ಟೇ ಪೊಲೀಸ್ ಠಾಣೆಯಲ್ಲಿ ಪತ್ರಕರ್ತರನ್ನು ಒಳ ಉಡುಪಿನಲ್ಲಿ ಮೆರವಣಿಗೆ ಮಾಡಲಾಯಿತು. ಕೆಲವರನ್ನು ಪರೀಕ್ಷೆಯ ಹಗರಣವನ್ನು ಬಹಿರಂಗಪಡಿಸಿದ್ದಕ್ಕಾಗಿ ಜೈಲಿಗೆ ಹಾಕಲಾಯಿತು; ಸತತ ಪ್ರತಿಭಟನೆಗಳ ನಂತರವೇ ಜಾಮೀನಿನ ಮೇಲೆ ಅವರಿಗೆ ಬಿಡುಗಡೆ ಸಿಕ್ಕಿದ್ದು.

ಟ್ರೋಲಿಂಗ್, ದ್ವೇಷ ಭಾಷಣಗಳು, ಹುಸಿ ಸುದ್ದಿಗಳು

ಸಾಮಾಜಿಕ ಮಾಧ್ಯಮಗಳಲ್ಲಿ ಸಂಘಟಿತ, ದುಷ್ಟ ನಿಂದನೆಗಳು ಮತ್ತು ಬೆದರಿಕೆಗಳನ್ನು ತಡೆಯುವ ಕ್ರಮಗಳನ್ನು ಕೈಗೊಳ್ಳುತ್ತಿಲ್ಲವಾದ್ದರಿಂದ ಟ್ರೋಲಿಂಗ್ ವೃತ್ತಿಸಂಬಂಧೀ ಕುತ್ತಾಗಿ ಪರಿಣಮಿಸಿದೆ. ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಪತ್ರಕರ್ತರು ಅತ್ಯಂತ 'ಹೊಲಸು ದ್ವೇಷ ಭಾಷಣಗಳಿಗೆ, ಮಹಿಳಾ ಪತ್ರಕರ್ತರು ಲೈಂಗಿಕ ನಿಂದನೆ ಮತ್ತು ಅತ್ಯಾಚಾರದ ಬೆದರಿಕೆಗಳಿಗೆ ಪದೇ ಪದೇ ಗುರಿಯಾಗುತ್ತಿದ್ದಾರೆ. ಸುಲ್ಲಿ ಡೀಲ್ ಪ್ರಕರಣದಲ್ಲಿ ಪ್ರಮುಖ ಪತ್ರಕರ್ತೆಯರು ಸೇರಿದಂತೆ ರಾಜಕೀಯವಾಗಿ ಸಕ್ರಿಯವಾಗಿರುವ ಮಹಿಳೆಯರ ಮೇಲೆ ಮತ್ತಷ್ಟು ಗುರಿಯಿಡಲಾಯಿತು.. ಅಂತಹ ಎಲ್ಲಾ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಕ್ಷಿಪ್ರ, ನಿರೋಧಕ ಶಿಕ್ಷೆಯಾಗಿಲ್ಲ.

ಸರ್ಕಾರದ ನೀತಿಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಯುಎನ್ಐ ನಂತಹ ಸುದ್ದಿಸಂಸ್ಥೆಗಳು ಅಪವೌಲ್ಯೀಕರಣಗೊಳ್ಳುವಂತಾಗಿದೆ. ಪರಿಣಾಮವಾಗಿ ಉದ್ಯೋಗ ನಷ್ಟ ಮತ್ತು ಕೆಲವು ಸಂದರ್ಭಗಳಲ್ಲಿ ನೌಕರರ ಹತಾಶ ಆತ್ಮಹತ್ಯೆಗಳು ನಡೆದಿವೆ. ಕೋವಿಡ್ 19 ರ ಮೊದಲ ಅಲೆಯ ಲಾಕ್‌ಡೌನ್‌ನಲ್ಲಿ ಸುಮಾರು 3,000 ಪತ್ರಕರ್ತರು ಉದ್ಯೋಗವನ್ನು ಕಳೆದುಕೊಂಡರು. ಕೆಲವು ಹಿಂಬಡ್ತಿಗೆ ಸಂಬಂಧಿಸಿದ ಕಾನೂನು ಸವಾಲುಗಳು ನ್ಯಾಯಾಲಯಗಳಲ್ಲಿ ಹಲವು ವರ್ಷಗಳಿಂದ ಬಾಕಿ ಉಳಿದಿವೆ.

ಅಧ್ಯಕ್ಷರೇ ಇಲ್ಲದ ಪತ್ರಿಕಾ ಮಂಡಳಿ

ಪತ್ರಕರ್ತರ ಸಂಕಟಗಳನ್ನು ನಿವಾರಿಸುವ ಬದಲು, ಸರ್ಕಾರ ರಕ್ಷಣೆಯನ್ನು ಒದಗಿಸಿದ ಕಾರ್ಯನಿರತ ಪತ್ರಕರ್ತರನ್ನು ಕುರಿತ ಕೆಲವು ಕಾಯಿದೆಗಳನ್ನು, ನಿಯತಕಾಲಿಕವಾಗಿ ವೇತನ ಮಂಡಳಿಯನ್ನು ಕಡ್ಡಾಯಗೊಳಿಸಿದ ಕಾಯ್ದೆಗಳನ್ನು ನೆಲಸಮಗೊಳಿಸಿದೆ. ಪತ್ರಕರ್ತರು ಈ ಎಲ್ಲ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗಲೂ ಪತ್ರಿಕಾ ಮಂಡಳಿಯ ಅಧ್ಯಕ್ಷರ ಹುದ್ದೆ ಕಳೆದ ಸುಮಾರು ಒಂದು ವರ್ಷದಿಂದ ಖಾಲಿಯಾಗೇ ಉಳಿದಿದೆ. ಅಲ್ಲದೆ ಇಂದಿನ ಮಾಧ್ಯಮ ವಿಸ್ತಾರಕ್ಕೆ ಅನುಗುಣವಾಗಿ ಪತ್ರಿಕಾ ಮಂಡಳಿಯ ವ್ಯಾಪ್ತಿಯನ್ನು ವಿಸ್ತರಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವ ಗೋಜಿಗೂ ಸರಕಾರ ಹೋಗಿಲ್ಲ ಎಂದು ಈ ಸಂಘಟನೆಗಳು ಖೇದ ವ್ಯಕ್ತಪಡಿಸಿವೆ.

ಡಿಜಿಟಲ್ ಮಾಧ್ಯಮಗಳ ಮೂಲಕ ಪರ್ಯಾಯ ಉದ್ಯೋಗಾವಕಾಶಗಳನ್ನು ಕೆಲವು ಸ್ವತಂತ್ರ ಮಾಧ್ಯಮ ವ್ಯಕ್ತಿಗಳು ನಿರ್ಮಿಸಿದ್ದಾರೆ. ಇಂತಹ ಡಿಜಿಟಲ್ ಮಾಧ್ಯಮಗಳು ಹೆಚ್ಚೆಚ್ಚು ಜನಪ್ರಿಯವಾಗುತ್ತಿದ್ದಂತೆ ಈಗ ಅವರೂ ಸರಕಾರದ ನಿಯಂತ್ರಣಗಳು, ಸೆನ್ಸಾರ್ ಇತ್ಯಾದಿ ಕಷ್ಟಗಳನ್ನು ಎದುರಿಸುತ್ತಿದ್ದಾರೆ, ಡಿಜಿಟಲ್ ಮಾಧ್ಯಮಗಳನ್ನು ಮುಗಿಸಿ ಬಿಡುವ ಎಲ್ಲ ಅಪಾಯಗಳು ಕಾಣಿಸುತ್ತಿವೆ ಎಂದಿರುವ ರಾಷ್ಟ್ರೀಯ ಪತ್ರಕರ್ತರ ಮೈತ್ರಿಕೂಟ ಮತ್ತು ದೆಹಲಿ ಪತ್ರಕರ್ತರ ಸಂಘ ಪತ್ರಕರ್ತರನ್ನು ಮೇಲೆ ಹೇಳಿದ ವಿವಿಧ ಅಪಾಯಗಳು, ಬೆದರಿಕೆಗಳು ಮತ್ತು ಸಂಕಟಗಳಿಂದ ರಕ್ಷಿಸಲು ಮಾಧ್ಯಮ ರಕ್ಷಣಾ ಕಾಯ್ದೆಯನ್ನು ತರಬೇಕು, ಒಂದು ಶಾಶ್ವತ ವೇತನ ನಿಗದಿ ವ್ಯವಸ್ಥೆಯನ್ನು ತರಬೇಕು ಎಂದು ಜಂಟಿಯಾಗಿ ಆಗ್ರಹಿಸಿವೆ.

ಎಲ್‌ಐಸಿಯ ಶೇರು ಮಾರಾಟದ ಆರಂಭ ಒಂದು ದೈತ್ಯಾಕಾರದ ಹಗರಣದ ಆರಂಭ



ಎಲ್‌ಐಸಿ ಯಂತಹ ದೇಶದ ಪ್ರಮುಖ ಹಣಕಾಸು ಸಂಸ್ಥೆಯ ಖಾಸಗೀಕರಣದ ಹೆಡ್ಡತನವನ್ನು ಬದಿಗೆ ಸರಿಸಿ ನೋಡಿದರೂ, ಈಗ ಆರಂಭವಾಗಿರುವ ಎಲ್‌ಐಸಿಯ ಶೇರು ಮಾರಾಟ ಎರಡು ವಿಧಗಳಲ್ಲಿ– ಐಪಿಒ ನಿಂದ ಗಳಿಸಬಹುದಾಗಿದ್ದ "ಆದಾಯ"ಗಳು ಸರಕಾರಕ್ಕೆ ದಕ್ಕದಂತಾಗುತ್ತಿರುವುದು, ಮತ್ತು ಅದಕ್ಕಿಂತ ಮುಖ್ಯವಾಗಿ, ದಶಕಗಳಿಂದ ಎಲ್‌ಐಸಿಯನ್ನು ಪೋಷಿಸಿಕೊಂಡು ಬಂದಿರುವ ಪಾಲಿಸಿದಾರರ ಹಕ್ಕುಗಳನ್ನು ಕಸಿದುಕೊಂಡು, ಎಲ್‌ಐಸಿ ಯನ್ನು ಕಟ್ಟುವಲ್ಲಿ ಮತ್ತು ಪೋಷಿಸುವಲ್ಲಿ ಯಾವುದೇ ಪಾತ್ರವನ್ನು ವಹಿಸದ ಖಾಸಗಿ ಸಂಸ್ಥೆಗಳಿಗೆ ವರ್ಗಾಯಿಸುತ್ತಿರುವುದು– ಒಂದು ಬೃಹತ್ ಹಗರಣವಾಗಿ ಕಾಣುತ್ತದೆ ಎನ್ನುತ್ತಾರೆ ಆರ್ಥಿಕ ವಿಷಯಗಳ ವಿಶ್ಲೇಷಕರಾಗಿರುವ ವಿ.ಶ್ರೀಧರ್. ನ್ಯೂಸ್‌ಕ್ಲಿಕ್’ನಲ್ಲಿ ಪ್ರಕಟವಾಗಿರುವ ಈ ಲೇಖನದ ಸಂಗ್ರಹಾನುವಾದವನ್ನು ‘ಜನಶಕ್ತಿ’ ಓದುಗರಿಗಾಗಿ ಶೃಂಶನಾ ಕೊಟ್ಟಿದ್ದಾರೆ.

ಮೂಲ: ವಿ. ಶ್ರೀಧರ್
ಸಂಗ್ರಹಾನುವಾದ: ಶೃಂಶನಾ

ನರೇಂದ್ರ ಮೋದಿ ಸರ್ಕಾರವು ಅತ್ಯಂತ ತ್ವರಿತ ವೇಗದಲ್ಲಿ ಎಲ್‌ಐಸಿಯ ಆರಂಭಿಕ ಸಾರ್ವಜನಿಕ ನೀಡಿಕೆ (ಐಪಿಒ) ಆರಂಭಿಸಿಯೇ ಬಿಟ್ಟಿದೆ. ಜಾಗತಿಕ ಶೇರು ಹೂಡಿಕೆದಾರರು ಐಪಿಒ ಗೆ ಅತ್ಯಂತ ಕಡಿತಗೊಂಡ ಬೆಲೆ ನಿಗದಿ ಪಡಿಸುವಂತೆ ಹೇಳಿದ್ದಕ್ಕೆ ಒಪ್ಪಿಕೊಳ್ಳುವ ಮೂಲಕ ಮೋದಿ ಸರ್ಕಾರವು ಇವರ ತಾಳಕ್ಕೆ ಮೇಳ ಹಾಕಿದೆ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ದಿಗ್ಭ್ರಮೆಗೊಳಿಸುವ ರೀತಿಯಲ್ಲಿ ಕಡೆಗಣಿಸಿದೆ. ಕೇವಲ ಎಲ್‌ಐಸಿ ಮಾತ್ರವಲ್ಲ, ಭಾರತದಲ್ಲಿ ಜೀವ ವಿಮೆಯ ಹೊಸ ಸಂಸ್ಕೃತಿ ಬೆಳೆಸಿದ ಕೋಟ್ಯಂತರ ಪಾಲಿಸಿದಾರರ ಹೇಯಕರ ಕಡೆಗಣನೆ ಮತ್ತು ಬೆರಳೆಣಿಕೆಯ ಜಾಗತಿಕ ಶೇರು ಹೂಡಿಕೆದಾರರ ಹಿತಾಸಕ್ತಿಗೆ ಪೂರಕವಾಗಿ ವರ್ತಿಸಿರುವುದು, ಎಲ್‌ಐಸಿ ಐಪಿಒ ಪ್ರಕ್ರಿಯೆ ಒಂದು ಬೃಹದಾಕಾರದ, ಪ್ರಾಯಶ: ಭಾರತದಲ್ಲಿನ ಒಟ್ಟು ಖಾಸಗೀಕರಣದ ಚರಿತ್ರೆಯಲ್ಲಿಯೇ ದೊಡ್ಡದಾದ, ಹಗರಣದ ಎಲ್ಲ ಅಂಶಗಳಿವೆ ಎಂಬ ಅನುಮಾನವನ್ನು ಗಟ್ಟಿಗೊಳಿಸಿದೆ.

ಕೇಂದ್ರ ವಿತ್ತ ಸಚಿವಾಲಯದ ಒತ್ತಡದ ಮೇರೆಗೆ ಏಪ್ರಿಲ್ 23, 2022 ರಂದು ಸಭೆ ಸೇರಿದ ಎಲ್‌ಐಸಿ ಆಡಳಿತ ಮಂಡಳಿ ಉದ್ದೇಶಿತ ಬಂಡವಾಳ ಹಿಂತೆಗೆತದ ಪ್ರಮಾಣವನ್ನು ಶೇ. 5 ರಿಂದ ಶೇ. 3.5 ಕ್ಕೆ ಇಳಿಸಲು ನಿರ್ಧರಿಸಿತು. ಏಪ್ರಿಲ್ 26 ರಂದು ಔಪಚಾರಿಕವಾಗಿ ಸಭೆ ಸೇರಿದ ಮಂಡಳಿ, ಈ ಐಪಿಒ ದ ಬಿಡುಗಡೆ ದಿನಾಂಕ ಹಾಗೂ ಪಾಲಿಸಿದಾರರು ಮತ್ತು ನೌಕರರಿಗೆ ನೀಡಬಹುದಾದ ಕಡಿತ ಮತ್ತಿತರ ವಿವರಗಳನ್ನು ನಿರ್ಧರಿಸಿತು. ಏಪ್ರಿಲ್ 27 ರಂದು ಭಾರತದ ಸೆಕ್ಯುರಿಟಿಗಳ ವಿನಿಮಯ ಮಂಡಳಿ(ಸೆಬಿ) ಗೆ ಎಲ್‌ಐಸಿಯು ತನ್ನ ಔಪಚಾರಿಕ ‘ಪರಿಚಯ ಪತ್ರ(ಪ್ರಾಸ್ಪೆಕ್ಟಸ್)ವನ್ನು ನೀಡಿತು. ನಂತರದಲ್ಲಿ ಪತ್ರಿಕಾ ಗೋಷ್ಠಿ ನಡೆಸುವ ಮೂಲಕ ವಿವರಗಳನ್ನು ನೀಡಿತು.

ಹಲವು ಅನಿರೀಕ್ಷಿತ ಸಂದರ್ಭಗಳು, ಮುಖ್ಯವಾಗಿ ಉಕ್ರೇನ್ ನಲ್ಲಿನ ಯುದ್ಧದಿಂದಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಉಂಟಾದ ತಲ್ಲಣದಿಂದಾಗಿ ಹಿಂಜರಿದ ಸರ್ಕಾರಕ್ಕೆ ಮೇ 12 ರ ದಿನಾಂಕದೊಳಗೆ ಐಪಿಒ ಪ್ರಕ್ರಿಯೆಯನ್ನು ಆರಂಭಿಸಲೇಬೇಕು ಎನ್ನುವ ಸಮಯ ಪರಿಮಿತಿಗೆ ಒಳಪಡಲು ವೇಗವಾಗಿ ಸಾಗಬೇಕಿತ್ತು. ಫೆಬ್ರವರಿಯಲ್ಲಿ ಫೆಬ್ರವರಿಯಲ್ಲಿ ‘ಸೆಬಿ’ಗೆ ‘ಕರಡು ಪ್ರಸ್ತಾಪ ಪರಿಚಯ ಪತ್ರ’ (ಡ್ರಾಫ್ಟ್ ರೆಡ್ ಹೆರ್ರಿಂಗ್ ಪ್ರಾಸ್ಪೆಕ್ಟಸ್–ಡಿಆರ್‌ಹೆಚ್‌ಪಿ) ಅನ್ನು ಸಲ್ಲಿಸುವ ಮೂಲಕ ಎಲ್‌ಐಸಿ ಯಲ್ಲಿನ ತನ್ನ ಒಡೆತನವನ್ನು ಸ್ವಲ್ಪ ಪ್ರಮಾಣದಲ್ಲಿ ಹಿಂಪಡೆಯುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ ಸರ್ಕಾರವು ಮೇ 12 ರ ವರೆಗೂ ಈ ವಿವಾದಾತ್ಮಕ ಐಪಿಒ ಹೊರಡಿಸಲು ಮುಂದಾಗಲು ಸಮಯವಿತ್ತು. ಒಂದು ವೇಳೆ ಈ ದಿನಾಂಕ ದಾಟಿದ್ದರೆ, ಸರ್ಕಾರವು ಪರಿಷ್ಕೃತ ಸಾಧನೆಗಳೊಂದಿಗೆ ಹೊಸದಾಗಿ ಪುನಃ ಸಲ್ಲಿಸಬೇಕಿತ್ತು. ಈ ಸನ್ನಿವೇಶದಲ್ಲಿ ಎಲ್‌ಐಸಿ ಯಲ್ಲಿ ಬಂಡವಾಳ ಹಿಂತೆಗೆತ ಮಾಡಲು ಮುಂದಾದ ಈ ಹುಚ್ಚು ವೇಗವು ಸಮರ್ಥನೀಯವೇ ಎನ್ನುವ ಪ್ರಮುಖ ಪ್ರಶ್ನೆ ಈಗ ಮೂಡಿದೆ.

ಹೆಸರಿಲ್ಲದ ಕೇಂದ್ರ ಸಚವಾಲಯದ ಕೆಲವು ಅನಾಮಧೇಯ ಅಧಿಕಾರಿಗಳನ್ನು ಉಲ್ಲೇಖಿಸಿ ಬಂದಿರುವ ಮಾಧ್ಯಮ ವರದಿಗಳು ಸರ್ಕಾರವು ಐಪಿಒ ಗ್ರಾತ್ರವನ್ನು ಸುಮಾರು ರೂ. 70,000–ರೂ.75,000 ಕೋಟಿಯಿಂದ ಸುಮಾರು ರೂ. 21,000 ಕೋಟಿಗೆ ಇಳಿಸಬಹುದು ಎಂದು ಕೆಲ ದಿನಗಳಿಂದ ಸೂಚಿಸುತ್ತಿದ್ದವು. ಇದನ್ನು ಎರಡು ರೀತಿಯಲ್ಲಿ ಕಡಿತ ಮಾಡಬಹುದು. ಕಡಿಮೆ ಸಂಖ್ಯೆಯ ಶೇರುಗಳನ್ನು ಬಿಡುಗಡೆ ಮೂಲಕ, ಇಲ್ಲವೇ ಪ್ರತಿಯೊಂದು ಶೇರಿನ ಬೆಲೆಯನ್ನೂ ಇಳಿಸುವ ಮೂಲಕ. ಸರ್ಕಾರವು ಬಿಡುಗಡೆಗೊಳಿಸುವ ಶೇರುಗಳ ಸಂಖ್ಯೆಯಲ್ಲಿ ಶೇ. 30 ಕಡಿಮೆ ಮಾಡುವ ಮೂಲಕ ಸಂಖ್ಯಾ ಪರಿಣಾಮ ಮೂಡುತ್ತದೆ. ಮೊದಲ ಕರಡು ಪ್ರಸ್ತಾಪ (ಡಿಆರ್‌ಹೆಚ್‌ಪಿ) ದ ಪ್ರಕಾರ ಸರ್ಕಾರವು 31.625 ಕೋಟಿ ಶೇರುಗಳನ್ನು, ಅಂದರೆ ಎಲ್‌ಐಸಿಯ ಈಕ್ವಿಟಿ ಮೂಲವಾದ 632.50 ಕೋಟಿ ಶೇರುಗಳ ಶೇ.5 ಪ್ರಮಾಣವನ್ನು ಬಿಡುಗಡೆ ಮಾಡಲು ಯೋಜಿಸಿತ್ತು. ಈಗ ಬಿಡುಗಡೆ ಮಾಡಿರುವ ಶೇರುಗಳ ಸಂಖ್ಯೆಯನ್ನು 22.1375 ಕೋಟಿಗೆ ಇಳಿಸಲಾಗಿದ್ದು, ಇದು ಎಲ್‌ಐಸಿಯ ಈಕ್ವಿಟಿ ಮೂಲದ ಶೇ. 3.5 ಪ್ರಮಾಣವಾಗಿದೆ.

ಭಾರತದ ಅತ್ಯಂತ ಯಶಸ್ವಿ ವಿಮಾ ಸಂಸ್ಥೆಯಾದ ಎಲ್‌ಐಸಿಯನ್ನು ಖಾಸಗೀಕರಣಗೊಳಿಸುವ ತರ್ಕವನ್ನೇ ಪ್ರಶ್ನಿಸದಿರುವವರಿಗೆ ಈ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಅಸಹಜತೆ ಕಾಣುವುದಿಲ್ಲ.

ಕುತಂತ್ರ ಬಯಲು

ಈ “ಬೆಲೆ ಪರಿಣಾಮ”ದಲ್ಲಿಯೇ ಹಣಕಾಸು ಮಂತ್ರಿಗಳ ಕುತಂತ್ರವು ಪ್ರಖರವಾಗಿ ಬಯಲಿಗೆ ಬಂದಿದೆ. ‘ಮಿಲಿಮನ್ ಅಡ್ವೈಸರ್ಸ್’ ಅಂದಾಜು ಮಾಡಿ, ಡಿಆರ್‌ಹೆಚ್‌ಪಿ ತಿಳಿಸಿರುವಂತೆ ಎಲ್‌ಐಸಿಯ ‘ಅಂತರ್ಗತ ಮೌಲ್ಯ’ **(Inherent value)**ದ ಇತ್ತೀಚಿನ ಅಂದಾಜು ರೂ. 5.40 ಲಕ್ಷ ಕೋಟಿ. ಅಂದರೆ ಪ್ರತಿ ಒಂದು ಶೇರಿನ ಮೂಲ ಬೆಲೆ ರೂ. 853 ರಷ್ಟಿರುತ್ತದೆ.

ಕೇವಲ ಎರಡು ತಿಂಗಳ ಹಿಂದೆ, ಎಲ್‌ಐಸಿಯ ಶೇರುಗಳ ನೈಜ ಮೌಲ್ಯವನ್ನು 2.5 ರಿಂದ 3 ರ ವರೆಗಿನ ಗುಣಾಕಾರಾಂಶವನ್ನು ಅಳವಡಿಸಿಕೊಂಡು ಅಳೆಯಬಹುದು ಎಂಬ ನಿರೀಕ್ಷೆ ಇತ್ತು. ಇದರ ಪ್ರಕಾರ ಪ್ರತಿ ಒಂದು ಶೇರಿನ ಬೆಲೆ ರೂ. 2133 ರಿಂದ ರೂ. 2559 ರ ನಡುವೆ ಇರಬೇಕಿತ್ತು. ಶೇ. 5 ರ ಪ್ರಮಾಣದ ಬಂಡವಾಳ ಹಿಂತೆಗೆತದಿಂದ ಸರ್ಕಾರಕ್ಕೆ ಅಂದಾಜು ರೂ. 67,456 ಕೋಟಿಯಿಂದ ರೂ. 80,928 ಕೋಟಿ ಬರುತ್ತಿತ್ತು. ಆದರೆ “ಪ್ರತಿಕೂಲ ಮಾರುಕಟ್ಟೆ” ಸ್ಥಿತಿಯನ್ನು ಉಲ್ಲೇಖಿಸಿ ಸರ್ಕಾರವನ್ನು ಅಂತರರಾಷ್ಟ್ರೀಯ ಹೂಡಿಕೆದಾರರು ನಿರಂತರವಾಗಿ ಒತ್ತಾಯಿಸುತ್ತಿದ್ದು, ಸರ್ಕಾರವು ಇದಕ್ಕೆ ಮಣಿದು ಈಗ ಗುಣಾಕಾರಾಂಶವನ್ನು ಗಣನೀಯವಾಗಿ ಇಳಿಸಿ, 1.1 ಕ್ಕೆ ತಂದಿದೆ. ಎಲ್‌ಐಸಿಯ ಅಂತರ್ಗತ ಮೌಲ್ಯವನ್ನೂ ಅತ್ಯಂತ ಅಸಮರ್ಪಕವಾಗಿ ನಿರ್ಧರಿಸಲಾಗಿದೆ. ಭಾರತದ ಅತ್ಯಂತ ದೊಡ್ಡ ಜೀವ ವಿಮಾ ಸಂಸ್ಥೆ ಮತ್ತು ವಿಶ್ವದ ಅತ್ಯಂತ ದೊಡ್ಡ ಸಂಸ್ಥೆಗಳಲ್ಲಿ ಒಂದಾದ ಎಲ್‌ಐಸಿಯಂತಹ ಸಂಸ್ಥೆಗೆ ಕಡಿಮೆ ಪ್ರಮಾಣದ ಗುಣಾಕಾರದ ಅಂಶವನ್ನು ನಿಗದಿ ಪಡಿಸಿರುವುದಕ್ಕೆ ಯಾವುದೇ ಸಮರ್ಥನೆ ಇಲ್ಲ. ಅತ್ಯಂತ ಸಣ್ಣ ಖಾಸಗಿ ಜೀವ ವಿಮಾ ಸಂಸ್ಥೆಗಳು ತಮ್ಮ ಅಂತರ್ಗತ ಮಟ್ಟಕ್ಕೆ 2.5 ರಿಂದ 3 ಪಟ್ಟಿನಷ್ಟು ಗುಣಾಕಾರಾಂಶವನ್ನು ಬಳಸಿಕೊಂಡಿವೆ. ಎಲ್‌ಐಸಿಗೆ ನಿಜವಾಗಲೂ ಇನ್ನಷ್ಟು ಹೆಚ್ಚಿನ ಗುಣಾಕಾರಾಂಶ ನೀಡಲೇಬೇಕಿತ್ತು.

1.1 ಪ್ರಮಾಣದ ಗುಣಾಕಾರಾಂಶವನ್ನು ಬಳಸಿದರೆ ಪ್ರತಿ ಒಂದು ಶೇರಿನ ಬೆಲೆ ರೂ. 938 ಆಗುತ್ತದೆ. ಹಿಂದಿನ ಮೌಲ್ಯಮಾಪನದ ಕೆಳಹಂತದ ಬ್ಯಾಂಡ್‌ಗೆ ಹೋಲಿಸಿದರೆ, ಇದು ಶೇ. 44 ರಷ್ಟು ಕಡಿತಗೊಂಡಿದೆ. ಮತ್ತು ಮೇಲ್ಮಟ್ಟದ ಬ್ಯಾಂಡ್‌ಗೆ ಹೋಲಿಸಿದರೆ ಶೇ. 63 ರಷ್ಟು ರಿಯಾಯಿತಿ ನೀಡಿದಂತಾಗಿದೆ.

ಇದನ್ನು ಗಮನಿಸಿ: ಫೆಬ್ರವರಿಯಲ್ಲಿ ಸಮರ್ಥಿಸಿಕೊಳ್ಳಲಾಗಿದ್ದ 2.5 ಮತ್ತು 3 ಗುಣಾಕಾರಾಂಶವನ್ನು ಬಳಸಿದ್ದರೆ ಸರ್ಕಾರಕ್ಕೆ ರೂ. 47,219 ಕೋಟಿ ಮತ್ತು ರೂ.56,650 ಕೋಟಿ ಬರುತ್ತಿತ್ತು. ಈಗ ಹೊರಡಿಸಲಾಗಿರುವ ಐಪಿಒ ಮೂಲಕ ಸರ್ಕಾರಕ್ಕೆ ಬರುತ್ತಿರುವುದು ಅಂದಾಜು ರೂ. 20,765 ಕೋಟಿ ಮಾತ್ರ. ಖಾಸಗೀಕರಣದ ಹೆಡ್ಡತನದ ಪ್ರಶ್ನೆಯನ್ನು ತಕ್ಷಣಕ್ಕೆ ಬದಿಗಿರಿಸಿ ನೋಡಿದರೂ ಕೂಡ, ಇದರಿಂದ ಸರ್ಕಾರಕ್ಕೆ ಆಗಿರುವ ನಷ್ಟ ಅಂದಾಜು ರೂ. 26,443 ರಿಂದ ರೂ. 35,885 ಕೋಟಿ.

ಹೀಗಾಗಿಯೇ, ಎಲ್‌ಐಸಿ ಯಂತಹ ಪ್ರಧಾನ ಸಂಸ್ಥೆಯ ಐಪಿಒ ಮೌಲ್ಯ ಮಾಪನ ಪ್ರಕ್ರಿಯೆಯನ್ನು ಒಂದು ದೈತ್ಯಾಕಾರದ ಹಗರಣ ಎಂದಲ್ಲದೆ ಬೇರೇನು ಹೇಳಬೇಕು?

“ಮೌಲ್ಯಮಾಪನ’ವೆಂಬ ಆಟದಲ್ಲಿ

ಎಲ್‌ಐಸಿಯ ‘ಹುದುಗಿರುವ ಮೌಲ್ಯ’ (ಎಂಬೆಡ್ಡೆಡ್ ವ್ಯಾಲ್ಯು–ಇ.ವಿ.)ದ ಮಾಪನದಲ್ಲಿ ಕೂಡ ಅಂದಾಜು ಮಾಡಿರುವ ಮೂಲ ಬೆಲೆಯೇ ಎಲ್‌ಐಸಿಯ ನೈಜ ಮೌಲ್ಯವನ್ನು ಬಹಳ ಕಡಿಮೆ ಅಂದಾಜು ಮಾಡಿದೆ.


‘ಹುದುಗಿರುವ ಮೌಲ್ಯ’(ಇ.ವಿ.)ಎಂಬ ಪರಿಕಲ್ಪನೆಯಲ್ಲಿ ವಿಮಾ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರದ ಅನುಮತಿಯೊಂದಿಗೆ ಕೈಗೊಂಡ ಈ ಮೌಲ್ಯ ಮಾಪನದ ಕಾರ್ಯದಿಂದಲೇ ಎಲ್‌ಐಸಿಯ ಮೌಲ್ಯ ಕೆಳಗಿಳಿದಿರುವುದು ಕಾಣುತ್ತದೆ. ಈ ಇ.ವಿ.ಯೇ ಅಸಮರ್ಪಕವಾಗಿದ್ದು ಎಲ್‌ಐಸಿ ಯಂತಹ ವಿಶಿಷ್ಟ ಹಣಕಾಸು ಸಂಸ್ಥೆಯ ಮೌಲ್ಯ ಅಳೆಯುವಲ್ಲಿ ವಿಫಲವಾಗಿದೆ. ಜಾಗತಿಕ ಹಣಕಾಸು ಬಿಕ್ಕಟ್ಟು ಪ್ರಾರಂಭವಾದ ನಂತರದ ಅವಧಿಯಲ್ಲಿ ಜೀವ ವಿಮಾ ಸಂಸ್ಥೆಗಳ ಇ.ವಿ. ಕಂಡು ಹಿಡಿಯುವ ಪರಿಕಲ್ಪನೆ ಪ್ರಾರಂಭವಾಗಿದ್ದು ಎನ್ನುವುದನ್ನು ಮನಗಾಣಬೇಕು.

ಪುಟ 14 ಕ್ಕೆ

50,000 ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ ಹಗರಣ!

ಕೇವಲ ಎರಡು ತಿಂಗಳ ಹಿಂದೆ ಮಾಡಿದ ಮೌಲ್ಯಮಾಪನದ ಪ್ರಕಾರ ಎಲ್‌ಐಸಿಯ ಪ್ರತಿ ಒಂದು ಶೇರಿನ ಬೆಲೆ ರೂ. 2133 ರಿಂದ ರೂ. 2559 ರ ನಡುವೆ ಇರಬೇಕಿತ್ತು. ಉದ್ದೇಶಿತ ಶೇ. 5 ರ ಪ್ರಮಾಣದ ಬಂಡವಾಳ ಹಿಂತೆಗೆತದಿಂದ ಸರ್ಕಾರಕ್ಕೆ ಅಂದಾಜು ರೂ. 67,456 ಕೋಟಿಯಿಂದ ರೂ. 80,928 ಕೋಟಿ ಬರುತ್ತಿತ್ತು. ಆದರೆ ಈಗ ಆರಂಭಿಸಿರುವ ಐಪಿಒ ಮೂಲಕ ಸರ್ಕಾರಕ್ಕೆ ಬರುತ್ತಿರುವುದು ಅಂದಾಜು ರೂ. 20,765 ಕೋಟಿ ಮಾತ್ರ. ಇದನ್ನೂ ಗಮನಿಸಿ: ಫೆಬ್ರವರಿಯಲ್ಲಷ್ಟೇ ಸರಕಾರ ಸಮರ್ಥಿಸಿಕೊಂಡಿದ್ದ ಮಾನದಂಡವನ್ನು ಬಳಸಿದ್ದರೆ ಸರ್ಕಾರಕ್ಕೆ ರೂ. 47,219 ಕೋಟಿ ಮತ್ತು ರೂ.56,650 ಕೋಟಿ ಬರುತ್ತಿತ್ತು. ಖಾಸಗೀಕರಣದ ಹೆಡ್ಡತನದ ಪ್ರಶ್ನೆಯನ್ನು ತಕ್ಷಣಕ್ಕೆ ಬದಿಗಿರಿಸಿ ನೋಡಿದರೂ ಕೂಡ, ಇದರಿಂದ ಸರ್ಕಾರಕ್ಕೆ ಆಗಿರುವ ನಷ್ಟ ಅಂದಾಜು ರೂ. 26,443 ರಿಂದ ರೂ. 35,885 ಕೋಟಿ.

ಹೀಗಾಗಿಯೇ, ಎಲ್‌ಐಸಿ ಯಂತಹ ಪ್ರಧಾನ ಸಂಸ್ಥೆಯ ಐಪಿಒ ಮೌಲ್ಯ ಮಾಪನ ಪ್ರಕ್ರಿಯೆಯನ್ನು ಒಂದು ದೈತ್ಯಾಕಾರದ ಹಗರಣ ಎಂದಲ್ಲದೆ ಬೇರೇನೆನ್ನಬೇಕು?



2020 ರ 45% ಸಾವುಗಳು ವೈದ್ಯಕೀಯ ಗಮನ ಸಿಗದ್ದರಿಂದ ಸಂಭವಿಸಿದವೇ?

2020 ರ ನಾಗರಿಕ ನೋಂದಾವಣೆ ವ್ಯವಸ್ಥೆ(ಸಿವಿಲ್ ರಿಜಿಸ್ಟ್ರೇಷನ್ ಸಿಸ್ಟಮ್–ಸಿಆರ್‌ಎಸ್)ಯ ದತ್ತಾಂಶ ಈಗ ಪ್ರಕಟವಾಗಿದ್ದು, ಆ ವರ್ಷ ಸಂಭವಿಸಿದ್ದ ಸಾವುಗಳಲ್ಲಿ 45%ದಷ್ಟು ವೈದ್ಯಕೀಯ ನೆರವು ಸಿಗದೇ ಇದ್ದುದರಿಂದ ಆಗಿದೆ ಎಂದು ಕಂಡು ಬಂದಿದೆ. ಇದುವರೆಗೆ ಇಷ್ಟೊಂದು ಪ್ರಮಾಣದಲ್ಲಿ ಇಂತಹ ಸಾವುಗಳು ಸಂಭವಿಸಿದ ದಾಖಲೆಗಳಿಲ್ಲ. ಆಸ್ಪತ್ರೆಗಳಲ್ಲಿ ಮತ್ತು ಇತರ ವೈದ್ಯಕೀಯ ಸೌಲಭ್ಯಗಳಲ್ಲಿ ಸಂಭವಿಸಿದ ಸಾವುಗಳ ಪ್ರಮಾಣ ತೀವ್ರವಾಗಿ ಇಳಿದಿದೆ ಎಂಬುದನ್ನೂ ಈ ದತ್ತಾಂಶಗಳು ಹೇಳುತ್ತವೆ.


202ರಲ್ಲಿ ನೋಂದಾಯಿಸಲ್ಪಟ್ಟ ಒಟ್ಟು 81.2ಲಕ್ಷ ಸಾವುಗಳಲ್ಲಿ 36.5 ಲಕ್ಷ ಮಂದಿಗೆ ಯಾವುದೇ ವೈದ್ಯಕೀಯ ಗಮನ ಸಿಗದೆ ಸಾವು ಸಂಭವಿಸಿದೆ.

ಸಾಂಸ್ಥಿಕ ವೈದ್ಯಕೀಯ ಗಮನ ಪಡೆದವರು	28.0%
ಸಾಂಸ್ಥಿಕೇತರ ವೈದ್ಯ ಗಮನ ಪಡೆದವರು	16.4%
ಅಲೊಪೆಥಿಕ್ ವೈದ್ಯರ ಗಮನ ಸಿಕ್ಕವರು	0.8%
ಇತರ ವೈದ್ಯರ ಗಮನ ಪಡೆದವರು	0.5%
ಯಾವುದೇ ವೈದ್ಯಕೀಯ ಗಮನ ಸಿಗದಿದ್ದವರು	45.0%
ಮಾಹಿತಿ ಲಭ್ಯವಿಲ್ಲ	0.4%


(ಕೃಪೆ: ಸ್ಕ್ರಾಲ್.ಇನ್, ಮೇ 5)

2020ರಲ್ಲಿ ಕೊವಿಡ್ ಸಾಂಕ್ರಾಮಿಕ ಎರಗಿದಾಗ, ಹಲವು ತಿಂಗಳ ಕಾಲ ಎಲ್ಲ ವೈದ್ಯಕೀಯ ನೆರವುಗಳು 80ರಿಂದ 100ಶೇ.ದಷ್ಟು ಕೋವಿಡ್ ರೋಗಿಗಳಿಗೇ ಮೀಸಲಾಗಿದ್ದು, ಇತರರಿಗೆ ವೈದ್ಯಕೀಯ ಸೇವೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಿಆರ್‌ಎಸ್ ದತ್ತಾಂಶ ಈಗ ಈ ಅವಧಿಯಲ್ಲಿ ಕೋವಿಡೇತರ ರೋಗಿಗಳ ನೋವನ್ನು ಬಿಂಬಿಸುತ್ತಿದೆ ಎಂದು ಇನ್ನೊಬ್ಬ ವಿಶ್ಲೇಷಕರು ಹೇಳುತ್ತಾರೆ(ಅಮಿತಾಭ್ ಸಿನ್ಹ , ಇಂಡಿಯನ್ ಎಕ್ಸ್‌ಪ್ರೆಸ್, ಮೇ 5)

2019ರಲ್ಲಿ ಈ ಪ್ರಮಾಣ 34.5% ಇತ್ತು.



ಕೃಪೆ: ಸ್ಕ್ರಾಲ್.ಇನ್, ಮೇ 5



ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್, ಮೇ 5

ಈ ಗ್ರಾಫ್ ಪ್ರಕಾರ 2011ರಲ್ಲಿ 10% ಸಾವುಗಳು ಮಾತ್ರ ವೈದ್ಯಕೀಯ ಪಾಲನೆ ಇಲ್ಲದೆ ಸಂಭವಿಸಿದ್ದವು. ಆದರೆ ಇಲ್ಲಿ ಗಮನಿಸಬೇಕಾದ ವಿಷಯ ಎಂದರೆ ಆಗ 67% ಸಾವುಗಳು ಮಾತ್ರ ನೋಂದಾಯಿಸಲ್ಪಡುತ್ತಿದ್ದವು. ಮರಣ ನೋಂದಾವಣೆ ಪ್ರಮಾಣ ಹೆಚ್ಚಲಾರಂಭಿಸಿದಂತೆ ಸಾಂಸ್ಥಿಕ ಸಾವುಗಳ ಪ್ರಮಾಣ, ಜತೆಗೆ ಆಸ್ಪತ್ರೆಗಳ ಹೊರಗೆ ಸಂಭವಿಸಿದ ಸಾವುಗಳ ಪ್ರಮಾಣ ಹೆಚ್ಚಲಾರಂಭಿಸಿದವು.2014ರ ವೇಳೆಗೆ ಇದು 30% ತಲುಪಿತ್ತು. ಮೇಲೆ ಹೇಳಿದಂತೆ 2019ರಲ್ಲಿ ಇದು 34.5% ತಲುಪಿತ್ತು. ಆ ವರ್ಷ ವೈದ್ಯಕೀಯ ನೆರವು ಪಡೆದವರ ಪ್ರಮಾಣವೂ ಸುಮಾರಾಗಿ ಅಷ್ಟೇ ಇತ್ತು. 2018ರಲ್ಲೂ ವೈದ್ಯಕೀಯ ನೆರವು ಪಡೆದವರು ಮತ್ತು ಪಡೆಯದವರ ಪ್ರಮಾಣ ಸುಮಾರಾಗಿ ಒಂದೇ ಆಗಿತ್ತು.

ವೈದ್ಯಕೀಯು ಸಂಸ್ಥೆಗಳಲ್ಲಿ ನೆರವು ಪಡೆದವರಲ್ಲಿ ಸಾವಿನ ಪ್ರಮಾಣ 2011ರಲ್ಲಿ 40% ಇದ್ದದ್ದು 2020ರಲ್ಲಿ ಸುಮಾರು 26%ಕ್ಕೆ ಇಳಿದಿದೆ ಎಂಬುದೂ ಗಮನಾರ್ಹ.

ನಮ್ಮ ಆರೋಗ್ಯಪಾಲನೆ ವ್ಯವಸ್ಥೆ ಎಷ್ಟು ಶೋಚನೀಯವಾಗಿದೆ ಎಂಬುದು ಕೊವಿಡ್ ಕಾಲದಲ್ಲಿ ಎದ್ದು ಕಂಡಿತ್ತು. ಈ ದತ್ತಾಂಶಗಳು ಅದನ್ನು ಸಮರ್ಥಿಸುತ್ತವೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಬಾಬ್ತು ಜಿಡಿಪಿಯ ಕನಿಷ್ಟ 5% ವೆಚ್ಚ ಮಾಡಬೇಕು ಎಂದು ಎಡಪಕ್ಷಗಳು ಹೇಳುತ್ತಿರುವುದನ್ನು ಗಮನಿಸಬೇಕಾಗಿದೆ.

ಭಾರತದಲ್ಲಿ ಕೊವಿಡ್‌ಗೆ ಬಲಿಯಾದವರ ಸಂಖ್ಯೆ 47 ಲಕ್ಷಕ್ಕಿಂತಲೂ ಹೆಚ್ಚು–ಡಬ್ಲ್ಯುಹೆಚ್‌ಒ

ವಿಶ್ವ ಆರೋಗ್ಯ ಸಂಘಟನೆ(ಡಬ್ಲ್ಯುಹೆಚ್‌ಒ)ಯ ಒಂದು ಹೊಸ ವರದಿಯ ಪ್ರಕಾರ ಭಾರತದಲ್ಲಿ 47 ಲಕ್ಷ ಮಂದಿ ಕೊವಿಡ್‌ನಿಂದ ಸಾವನ್ನಪ್ಪಿದ್ದಾರೆ.

ಭಾರತ ಸರಕಾರದ ಪ್ರಕಾರ ಕೊವಿಡ್ ಸಾವುಗಳ ಸಂಖ್ಯೆ 5 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು. ಜನವರಿ 1, 2020 ರಿಂದ ಡಿಸೆಂಬರ್ 31, 2021ರ ನಡುವೆ ಕೊವಿಡ್‌ನಿಂದ ಮರಣ ಹೊಂದಿದವರ ಸಂಖ್ಯೆ ಅಧಿಕೃತವಾಗಿ 4,81,000. ಡಬ್ಲ್ಯುಹೆಚ್‌ಒ ಅಂದಾಜು ಇದರ ಹತ್ತು ಪಟ್ಟಿನಷ್ಟಾಗುತ್ತದೆ. ಭಾರತ ಸರಕಾರ ಈ ಅಂದಾಜು ದೋಷಪೂರ್ಣವಾಗಿದೆ ಎಂದು ತಿರಸ್ಕರಿಸಿದೆ.

ನವಂಬರ್ 2020ರಲ್ಲಿ 'ವರ್ಲ್ಡ್ ಮೋರ್ಟಾಲಿಟಿ ಡಾಟಸೆಟ್' ಸಂಸ್ಥೆಯ ಸಂಶೋಧಕರು ಎಲ್ಲ ಕಾರಣಗಳಿಂದ ಸಂಭವಿಸಿರುವ ಸಾವುಗಳ ದತ್ತಾಂಶಗಳನ್ನು ಕೇಳಿದರು. ಒಬ್ಬ ಸಂಶೋಧಕರ ಪ್ರಕಾರ ಇಂತಹ ಮಾಹಿತಿ ಇಲ್ಲ ಎಂದು ಭಾರತದ ಮುಖ್ಯ ಅಂಕಿ–ಅಂಶಗಳ ಕಚೇರಿ ಹೇಳಿದುದಾಗಿ ವರದಿಯಾಗಿದೆ.


ಡಬ್ಲ್ಯುಹೆಚ್‌ಒ ಪ್ರಕಾರ ಕೊವಿಡ್‌ನಿಂದ ಜಗತ್ತಿನಲ್ಲಿ ಸಂಭವಿಸಿದ ಸಾವುಗಳಲ್ಲಿ ಮೂರನೇ ಒಂದರಷ್ಟು ಭಾರತದಲ್ಲಿ ಸಂಭವಿಸಿದೆ. ಡಬ್ಲ್ಯುಹೆಚ್‌ಒ ಅಂದಾಜು ಮಾಡಿದ ಹೆಚ್ಚುವರಿ ಕೊವಿಡ್ ಸಾವುಗಳಲ್ಲಿ 80%ದಷ್ಟು ಕೇವಲ 20 ದೇಶಗಳಲ್ಲಿ ಸಂಭವಿಸಿದೆ. ಈ 20 ರಲ್ಲಿ ಭಾರತವೂ ಸೇರಿದೆ. ಇದುವರೆಗೆ ಲೆಕ್ಕ ಹಾಕದ ಸಾವುಗಳಲ್ಲಿ ಸುಮಾರು ಅರ್ಧದಷ್ಟು ಭಾರತದಲ್ಲೇ ಆಗಿವೆ ಎಂದೂ ಈ ಮಾಹಿತಿಗಳು ಹೇಳುತ್ತವೆ.

ಭಾರತದಲ್ಲಿ ಕೊವಿಡ್ ಸಾವುಗಳು ಬೇರೆಡೆಗೆ ಹೋಲಿಸಿದರೆ ಬಹಳ ಕಡಿಮೆ ಎಂದು ಭಾರತ ಸರಕಾರದ ಮುಖಂಡರು ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ವಾಸ್ತವವಾಗಿ, ಅತೀ ಕಡಿಮೆಯಿರುವುದು ಕೊವಿಡ್ ಸಾವಿನ ಸಂಖ್ಯೆಯಲ್ಲ, ಅದರ ಲೆಕ್ಕ ಎಂದು ಟೊರಾಂಟೊದಲ್ಲಿರುವ ಜಾಗತಿಕ ಆರೋಗ್ಯ ಸಂಶೋಧನಾ ಕೇಂದ್ರದ ಪ್ರಭಾತ್ ಝಾ ಹೇಳಿರುವುದಾಗಿ ವರದಿಯಾಗಿದೆ.

ಕೊವಿಡ್ ಸಾವುಗಳನ್ನು ಕುರಿತಾದ ಮೂರು ಅಧ್ಯಯನಗಳ ಪ್ರಕಾರ ಸಪ್ಟಂಬರ್ 2021ರ ವರೆಗಿನ ಕೊವಿಡ್ ಸಾವುಗಳ ಸಂಖ್ಯೆ ಅಧಿಕೃತವಾಗಿ ವರದಿಯಾಗಿರುವುದಕ್ಕಿಂತ ಆರರಿಂದ ಏಳು ಪಟ್ಟು ಹೆಚ್ಚಿದೆ.

ಇತರ ಅಧ್ಯಯನಗಳೂ ಡಬ್ಲ್ಯುಹೆಚ್‌ಒ ಅಂದಾಜಿನ ಹತ್ತಿರವೇ ಬಂದಿವೆ. ಆದರೆ ಭಾರತ ಸರಕಾರ ನಿರಂತರವಾಗಿ ಇದಕ್ಕೆ ಸವಾಲು ಹಾಕುತ್ತ ಬರುತ್ತಿದೆ. ಭಾರತ ಅತ್ಯಂತ ಯಶಸ್ವಿಯಾಗಿ ಕೊವಿಡ್ ಮಹಾಸೋಂಕನ್ನು ಎದುರಿಸಿದೆ ಎಂದು ವಿಜಯೋತ್ಸವದ ಭಾವದಲ್ಲಿರುವ ಸರಕಾರಕ್ಕೆ ಇದು ಅನಿವಾರ್ಯ ಕೂಡ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

'ಮಾಹಿತಿಯಿಲ್ಲಾ' ಕಾರ್ಯವಿಧಾನ



"ಭಾರತದಲ್ಲಿ ಸುಮಾರು 4.7 ಮಿಲಿಯ ಕೊವಿಡ್ ಸಾವುಗಳು" -ಡಬ್ಲ್ಯುಹೆಚ್‌ಒ
"ಅವರು ಹಳಸಲಾದ ಕಾರ್ಯವಿಧಾನವನ್ನು ಬಳಸುತ್ತಿದ್ದಾರೆ"
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಫೇಸ್‌ಬುಕ್

ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತದ ಸ್ಥಾನ 142 ರಿಂದ 150ಕ್ಕೆ

'ರಿಪೋರ್ಟರ್ಸ್ ಸಾನ್ಸ್ ಫ್ರಾಂಟಿಯರೆಸ್' (ಗಡಿಗಳಿಲ್ಲದ ವರದಿಗಾರರು) ಸಂಸ್ಥೆ 2022ರ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕವನ್ನು ಪ್ರಕಟಿಸಿದೆ. ಅದರ ಪ್ರಕಾರ ಕಳೆದ ವರ್ಷ 142 ನೇ ಸ್ಥಾನದಲ್ಲಿದ್ದ ಭಾರತ ಈ ವರ್ಷ 180ರಲ್ಲಿ 150ನೇ ಸ್ಥಾನಕ್ಕೆ ಜಾರಿದೆ. 2016ರಲ್ಲಿ ಭಾರತ 133 ನೇ ಸ್ಥಾನದಲ್ಲಿತ್ತು.



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ, ಕನ್ನಡ ಒನ್ ನ್ಯೂಸ್



"ವಿಶ್ವ ಪತ್ರಿಕಾ ಸವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ ಮತ್ತಷ್ಟು ಕೆಳಗಿಳಿದಿದೆ"
"ಹೌದು, ನಾನೂ ಕೇಳಿದ್ದೇನೆ. ಅದು ಯಾಕೆ ಎಂದೇನಾದರೂ ಗೊತ್ತಾ?"
ವ್ಯಂಗ್ಯಚಿತ್ರ ಕೃಪೆ:: ಮಂಜುಲ್, ನ್ಯೂಸ್‌ಲೈವ್.ಕಾಂ

ಹಿಂಗಾರು ಗೋಧಿ ಖರೀದಿಯಲ್ಲಿ 50% ಕಡಿತ "ರೈತರೊಂದಿಗೆ ಅಮಾನುಷ ವಿಶ್ವಾಸಘಾತ"

ಪ್ರಸಕ್ತ ಹಿಂಗಾರು ಸೀಜನ್ನಿನಲ್ಲಿ ಗೋದಿ ಖರೀದಿಯ ಅಂದಾಜನ್ನು ಭಾರತ ಸರಕಾರ 1.95 ಕೋಟಿ ಟನ್ನಿಗೆ ಇಳಿಸಿದೆ. ಇದು ಕಳೆದ 13 ವರ್ಷಗಳಲ್ಲೇ ಅತೀ ಕಡಿಮೆ ಖರೀದಿ ಎನ್ನಲಾಗಿದೆ. 4.4 ಕೋಟಿ ಟನ್ ಖರೀದಿ ನಡೆಯುವುದಾಗಿ ಈ ಹಿಂದೆ ಅಂದಾಜುಮಾಡಲಾಗಿತ್ತು. 2021–22ರಲ್ಲಿ ಗೋದಿ ಖರೀದಿ 4.33 ಕೋಟಿ ಟನ್ ಇತ್ತು. 2020–21ರಲ್ಲಿ 3.9ಕೋಟಿ ಟನ್. 2010–11ರಲ್ಲೂ ಇದು 2.25 ಕೊಟಿ ಟನ್ ಇತ್ತು.

ಈ ಬಾರಿ ಗೋದಿ ಬೆಳೆ 6% ದಷ್ಟು ಕಡಿಮೆಯಾಗಿ 10.5 ಕೋಟಿ ಟನ್‌ಗಳಾಗಬಹುದು ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಹೇಳಿದ್ದಾರೆ. ಕಳೆದ ವರ್ಷ ಇದು 10.96 ಕೋಟಿ ಟನ್, ಅದರ ಹಿಂದಿನ ವರ್ಷ 10.78 ಕೋಟಿ ಟನ್ ಇತ್ತು.

ಖಾಸಗಿಂಯವರು ನೇರವಾಗಿ ರೈತರಿಂದ ಖರೀದಿ ಮಾಡುತ್ತಿರುವುದರಿಂದಾಗಿ ಈ ಕಡಿತ ಎಂದು ಈಭಾರೀ ಕಡಿತವನ್ನು ಸರಕಾರ ಸಮರ್ಥಿಸಿಕೊಂಡಿದೆ.

ಆದರೆ ಇದು ಕನಿಷ್ಟ ಬೆಂಬಲ ಬೆಲೆ ಆಧಾರಿತ ಖರೀದಿಯನ್ನು ಮಾಡುವುದಾಗಿ ಆಶ್ವಾಸನೆ ನೀಡಿದ ಸರಕಾರ ರೈತರಿಗೆ ಬಗೆದಿರುವ ಅಮಾನುಷ ವಿಶ್ವಾಸಘಾತ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

‘ಕಲ್ಯಾಣ ಪ್ರಭುತ್ವ’ ಶ್ರೀಲಂಕಾ ‘ರೋಗಿ’ ಪ್ರಭುತ್ವವಾದದ್ದು ಹೇಗೆ?



ನವ-ಉದಾರವಾದದ ಆಳ್ವಿಕೆಯಲ್ಲಿ, ಹೆಚ್ಚಾಗಿ ಸಣ್ಣ ಸಣ್ಣ ಅರ್ಥವ್ಯವಸ್ಥೆಗಳನ್ನು ಅತಿಯಾಗಿ ಬಾಧಿಸುವ ರೀತಿಯ ಒಂದು ಬಿಕ್ಕಟ್ಟು ಎರಗುತ್ತದೆ. ಇದು ಅದರ ಅದೃಷ್ಟವನ್ನು ಕ್ಷಣಮಾತ್ರದಲ್ಲಿ ಬದಲಿಸಬಲ್ಲದು. ಇದು ವಿಶ್ವ ಅರ್ಥವ್ಯವಸ್ಥೆಯನ್ನು ಇಡಿಯಾಗಿ ಬಾಧಿಸುವುದಿಲ್ಲ. ಅಷ್ಟೇ ಏಕೆ, ಅದರ ಒಂದು ದೊಡ್ಡ ಭಾಗವನ್ನೂ ಸಹ ಬಾಧಿಸುವುದಿಲ್ಲ. ಯಾವುದೋ ಒಂದು ನಿರ್ದಿಷ್ಟ ಸಮಯದಲ್ಲಿ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡ ನಿರ್ದಿಷ್ಟ ದೇಶಗಳನ್ನು ಬಾಧಿಸುತ್ತದೆ. ಈ ಬಿಕ್ಕಟ್ಟಿನ ಹೆಗ್ಗುರುತೆಂದರೆ, ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವ ಹಾಗೆ ಬಿಕ್ಕಟ್ಟು ಘಟಿಸಿದ ನಂತರವೇ ವಿವೇಕ ಮೂಡುವುದು. ಶ್ರೀಲಂಕಾದ ಬಿಕ್ಕಟ್ಟಿನ ಅನುಭವದಿಂದ ಕಲಿಯಬಹುದಾದ ಎರಡು ಸ್ಪಷ್ಟ ಪಾಠಗಳಿವೆ. ಮೊದಲನೆಯದು, ಜನಕಲ್ಯಾಣ ಕಾರ್ಯಕ್ರಮಗಳು ನವ-ಉದಾರವಾದಿ ಆಳ್ವಿಕೆಯೊಂದಿಗೆ ಪೂರ್ಣವಾಗಿ ಹೊಂದಿಕೆಯಾಗುವುದಿಲ್ಲ ಎಂಬುದು. ಎರಡನೆಯದು, ನವ-ಉದಾರವಾದದ ಆಳ್ವಿಕೆಯಲ್ಲಿ ಪ್ರತಿಯೊಂದು ದೇಶವೂ ಇಂತಹ ಬಿಕ್ಕಟ್ಟಿಗೆ ಈಡಾಗಲಿದೆ ಎಂಬುದು. ಶ್ರೀಲಂಕಾಕ್ಕೆ ಏನಾಗಿದೆಯೋ ಅದು ನವ-ಉದಾರವಾದಿ ಆಡಳಿತದಲ್ಲಿ ಸಿಲುಕಿರುವ ಯಾವುದೇ ದೇಶದಲ್ಲೂ ಸಂಭವಿಸಬಹುದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ. ನಾಗರಾಜ್**

ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಬಂದಿರುವ ಬಹಳಷ್ಟು ಲೇಖನಗಳನ್ನು ಓದಿದ್ದೀರಿ. ಉದಾಹರಣೆಗೆ, ಫ್ರಂಟ್‌ಲೈನ್ ಏಪ್ರಿಲ್ 22 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಿ.ಪಿ. ಚಂದ್ರಶೇಖರ್ ಅವರ ಲೇಖನ (ಜನಶಕ್ತಿ, ಸಂಚಿಕೆ 18). ಹೊರಗಿನ ಸಾಲಗಳ ಬೃಹತ್ ಹೆಚ್ಚಳ; ಮೌಲ್ಯವರ್ಧಿತ ತೆರಿಗೆಗಳ ಭಾರೀ ಇಳಿಕೆ; ವಿತ್ತೀಯ ಕೊರತೆಯ ಬೃಹತ್ ಏರಿಕೆ; ತನ್ನ ಮಾಮೂಲಿ ಖರ್ಚುಗಳಿಗೂ ಸಹ ವಿದೇಶಿ ಸಾಲ ಮಾಡಬೇಕಾದ ಪರಿಸ್ಥಿತಿ; ಕೊರೊನಾದಿಂದಾಗಿ ಪ್ರವಾಸೋದ್ಯಮ ಆದಾಯದ ಕುಸಿತ; ವಿದೇಶಿ ವಿನಿಮಯ ಮೀಸಲು ಸಂಗ್ರಹದ ಕುಸಿತ; ಡಾಲರ್ ಎದುರು ಶ್ರೀಲಂಕಾ ಕರೆನ್ಸಿಯ ತೀವ್ರ ಅಪಮೌಲ್ಯ, ವಿದೇಶಗಳಲ್ಲಿರುವ ಶ್ರೀಲಂಕಾ ಮೂಲದ ಅನೇಕ ಕೆಲಸಗಾರರು ಅನೌಪಚಾರಿಕ ಹಣ ವರ್ಗಾವಣೆ ಮಾರ್ಗವನ್ನು ಅನುಸರಿಸಿದ ಕ್ರಮ; ವಿದೇಶಿ ವಿನಿಮಯದ ಕೊರತೆಯಿಂದಾಗಿ ರಾಸಾಯನಿಕ ಗೊಬ್ಬರಗಳನ್ನು ಆಮದು ಮಾಡಿಕೊಳ್ಳಲಾಗದೆ ಆಹಾರ ಧಾನ್ಯಗಳ ಉತ್ಪಾದನೆಯ ಇಳಿಕೆ; ಇತ್ಯಾದಿ.

ಒಂದು "ಮಾದರಿ" ಕಲ್ಯಾಣ ಪ್ರಭುತ್ವ ಎನಿಸಿಕೊಂಡಿದ್ದ ಶ್ರೀಲಂಕಾ, ದಕ್ಷಿಣ ಏಷ್ಯಾದ "ರೋಗಿ-ದೇಶ"ವಾಗಿ ಬದಲಾವಣೆ ಹೊಂದಿದ ಪರಿಸ್ಥಿತಿಗೆ ಯಾರು ಹೊಣೆಗಾರರು ಎಂಬುದರ ಬಗ್ಗೆ ಸಹಮತವಿಲ್ಲ. ಶ್ರೀಲಂಕಾದ ಈ ರೀತಿಯ ಪತನದ ಹೊಣೆಯನ್ನು ರಾಜಪಕ್ಸೆ ಸರ್ಕಾರವು ಹೊರಲೇಬೇಕು ಎಂಬುದರ ಬಗ್ಗೆ ಸಹಮತ ಇದೆಯಾದರೂ, ಸರ್ಕಾರ ಎಡವಿದ್ದೆಲ್ಲಿ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

ಚೀನಾದೊಂದಿಗೆ ತನ್ನ ಆರ್ಥಿಕ ಸಂಬಂಧಗಳನ್ನು ಶ್ರೀಲಂಕಾ ಹೆಚ್ಚಿಸಿಕೊಳ್ಳುತ್ತಿರುವುದರಿಂದಾಗಿ ಬಿಕ್ಕಟ್ಟಿಗೆ ಸಿಲುಕಿದೆ ಎಂಬುದಾಗಿ ಅಮೆರಿಕದ ಆಡಳಿತ ಮತ್ತು ಅದರ ಹೊಸ ಶೀತಲ ಸಮರ ಯೋಧರು ವ್ಯಾಖ್ಯಾನಿಸುತ್ತಾರೆ. ಅವರಿಂದ ಇನ್ನೂ ಹೆಚ್ಚು ವಿವರಣೆಗಳನ್ನು ನಾವು ಮುಂದಿನ ದಿನಗಳಲ್ಲಿ ಕೇಳಲಿದ್ದೇವೆ. ಇನ್ನೂ ಕೆಲವರು, ಶ್ರೀಲಂಕಾದ ಬಾಹ್ಯ ಸಾಲಗಳು ಏರುತ್ತಿದ್ದಾಗ ಸರ್ಕಾರ ನಿದ್ರಿಸುತ್ತಿತ್ತು ಎಂಬುದಾಗಿ ಸರ್ಕಾರದ "ಬೇಜವಾಬ್ದಾರಿತನ"ವನ್ನು ದೂಷಿಸುತ್ತಾರೆ. ಭಾರತದ ಕೆಲವು ವ್ಯಾಖ್ಯಾನಕಾರರು, ಭಾರತದ ಹಲವು ರಾಜ್ಯ ಸರ್ಕಾರಗಳು ಶ್ರೀಲಂಕಾದ ದಾರಿಯಲ್ಲಿಯೇ ಸಾಗುತ್ತಿವೆ. ಆದ್ದರಿಂದ, ಇಲ್ಲಿ ಬಿಕ್ಕಟ್ಟು ತಲೆದೋರುವ ಮುನ್ನವೇ ಅವುಗಳನ್ನು ನಿಯಂತ್ರಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಮೂರನೇ ರೀತಿಯ ಬಿಕ್ಕಟ್ಟು

ಈ ವಿವರಣೆಗಳಲ್ಲಿರುವ ಒಂದು ಸಮಸ್ಯೆಯೆಂದರೆ, ಶ್ರೀಲಂಕಾದಲ್ಲಿ ಸೃಷ್ಟಿಯಾದ ಬಿಕ್ಕಟ್ಟನ್ನು ತ್ವರಿತಗೊಳಿಸುವಲ್ಲಿ ನವ-ಉದಾರವಾದವು ವಹಿಸಿದ ಪಾತ್ರವನ್ನು ಈ ವಿವರಣೆಗಳು ಸಂಪೂರ್ಣವಾಗಿ ನಿರ್ಲಕ್ಷಿಸಿವೆ. ಈ ಮಾತನ್ನು ದಿನವೂ ಪಠಿಸುವ ಅದೇ ಮಂತ್ರ ಎಂಬಂತೆ ಭಾವಿಸುವಂತಿಲ್ಲ. ನವ-ಉದಾರವಾದದ ಆಳ್ವಿಕೆಯಲ್ಲಿ, ದುಡಿಯುವ ಜನರು ಅತ್ಯಂತ ಅನುಕೂಲಕರ ದಿನಗಳಲ್ಲೂ ಸಂಕಷ್ಟಗಳಿಗೆ ಒಳಗಾಗುವುದು ಒಂದು ರೀತಿಯ ಬಿಕ್ಕಟ್ಟು. ಪ್ರತಿಯೊಂದು ಅರ್ಥವ್ಯವಸ್ಥೆಯಲ್ಲೂ ಮತ್ತು ಒಟ್ಟಾರೆಯಾಗಿ ಜಾಗತಿಕ ಅರ್ಥವ್ಯವಸ್ಥೆಯಲ್ಲಿ, ಉತ್ಪಾದನೆಯ ಪ್ರಕ್ರಿಯೆಯಲ್ಲಿ ಹೆಚ್ಚುತ್ತಿರುವ ಆರ್ಥಿಕ ಮಿಗುತಾಯದ ಪಾಲಿನಿಂದ ಉದ್ಭವಿಸುವ ರಾಚನಿಕ (ಮೂಲರಚನೆಗೆ ಸಂಬಂಧಪಟ್ಟಂತಹ) ಬಿಕ್ಕಟ್ಟು ಮತ್ತೊಂದು ರೀತಿಯದು.

ಸಣ್ಣ ಸಣ್ಣ ಅರ್ಥವ್ಯವಸ್ಥೆಗಳನ್ನು ಅತಿಯಾಗಿ ಬಾಧಿಸುವ ಮೂರನೇ ರೀತಿಯ ಒಂದು ಬಿಕ್ಕಟ್ಟೂ ಇದೆ. ಈ ಮೂರನೇ ರೀತಿಯ ಬಿಕ್ಕಟ್ಟು, ಸಣ್ಣ ಸಣ್ಣ ಅರ್ಥವ್ಯವಸ್ಥೆಗಳ ಅದೃಷ್ಟವನ್ನು ಕ್ಷಣಮಾತ್ರದಲ್ಲಿ ಬದಲಿಸಬಲ್ಲದು. ಇದನ್ನು ನಾನು, ನವ-ಉದಾರವಾದವು ಹರಿಯಬಿಟ್ಟ "ಸಾಂದರ್ಭಿಕ ಬಿಕ್ಕಟ್ಟು" (contingent crisis) ಎಂದು ಕರೆಯುತ್ತೇನೆ. ಈ "ಸಾಂದರ್ಭಿಕ" ಬಿಕ್ಕಟ್ಟು, "ರಾಚನಿಕ" ಬಿಕ್ಕಟ್ಟಿಗೆ ತದ್ವಿರುದ್ಧವಾದದ್ದು. ಏಕೆಂದರೆ, ಇದು ವಿಶ್ವ ಅರ್ಥವ್ಯವಸ್ಥೆಯನ್ನು ಇಡಿಯಾಗಿ ಬಾಧಿಸುವುದಿಲ್ಲ. ಅಷ್ಟೇ ಏಕೆ, ಅದರ ಒಂದು ದೊಡ್ಡ ಭಾಗವನ್ನೂ ಸಹ ಬಾಧಿಸುವುದಿಲ್ಲ. ಯಾವುದೋ ಒಂದು ನಿರ್ದಿಷ್ಟ ಸಮಯದಲ್ಲಿ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡ ನಿರ್ದಿಷ್ಟ ದೇಶಗಳನ್ನು ಬಾಧಿಸುತ್ತದೆ. ಈ ಬಿಕ್ಕಟ್ಟಿನ ಹೆಗ್ಗುರುತೆಂದರೆ, ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವ ಹಾಗೆ ಬಿಕ್ಕಟ್ಟು ಘಟಿಸಿದ ನಂತರವೇ ವಿವೇಕ ಮೂಡುವುದು. ಈ ಅರ್ಥದಲ್ಲಿ, ಗ್ರೀಸ್ ದೇಶವು ಎದುರಿಸಿದ ಬಿಕ್ಕಟ್ಟು ಒಂದು "ಸಾಂದರ್ಭಿಕ" ಬಿಕ್ಕಟ್ಟಾಗಿತ್ತು. ಗ್ರೀಸ್, ಬಾಹ್ಯ ಸಾಲಗಳನ್ನು ಒಂದರ ಮೇಲೆ ಇನ್ನೊಂದರಂತೆ ಅಪಾರ ಪ್ರಮಾಣದಲ್ಲಿ ಪೇರಿಸಿಕೊಳ್ಳುತ್ತಿದ್ದರೂ, ಅಷ್ಟೊಂದು ಸಾಲಗಳನ್ನು ಅದು ತೀರಿಸಬಲ್ಲದೇ ಎಂಬ ಪ್ರಶ್ನೆಯಾಗಲಿ ಅಥವಾ ವಿವೇಚನೆಯಾಗಲಿ ಮೂಡಲಿಲ್ಲ. ಈ ಸಾಲಗಳನ್ನು ತೀರಿಸಲು ಸಾಧ್ಯವಿಲ್ಲ ಎನ್ನುವ ವಿವೇಕ ಮೂಡುವ ಹೊತ್ತಿಗೆ, ಅರ್ಥವ್ಯವಸ್ಥೆಯು ಅದಾಗಲೇ ಈ ಸಾಲಗಳನ್ನು ಮನ್ನಾ ಮಾಡದ ಹೊರತು ಬದುಕುಳಿಯುವ ಹಂತವನ್ನು ಮೀರಿದ ಪರಿಸ್ಥಿತಿಯಲ್ಲಿತ್ತು. ಈ "ಸಾಂದರ್ಭಿಕ" ಬಿಕ್ಕಟ್ಟುಗಳು ಆಕಸ್ಮಿಕ ವಿದ್ಯಮಾನಗಳಲ್ಲ. ಈ ಬಿಕ್ಕಟ್ಟುಗಳು ನವ-ಉದಾರವಾದಿ ಆಳ್ವಿಕೆಯೊಂದಿಗೆ ಒಂದು ನಿಕಟ ಮತ್ತು ಜೀವಂತ ಸಂಬಂಧ ಹೊಂದಿವೆ. ಇದ್ದಕ್ಕಿದ್ದಂತೆ ಬಿಕ್ಕಟ್ಟು ಎರಗುವ ವರೆಗೂ, ಎಷ್ಟು ಪ್ರಮಾಣದ ಸಾಲವನ್ನು "ಮಿತಿಮೀರಿದ್ದು" ಎಂದು ಮುಂಚಿತವಾಗಿ ತಿಳಿದುಕೊಳ್ಳುವ ಮಾರ್ಗವಿಲ್ಲವಾದ್ದರಿಂದ ಈ ಬಿಕ್ಕಟ್ಟುಗಳು ಉದ್ಭವಿಸುತ್ತವೆ. ನವ-ಉದಾರವಾದವು ಒಂದು ಅರ್ಥವ್ಯವಸ್ಥೆಯಲ್ಲಿ, ಆನ್-ಆಫ್ ಮಾಡುವ ಸ್ವಿಚ್‌ಅನ್ನು ಒತ್ತಿದ ರೀತಿಯಲ್ಲಿ ತರುವ ಬಿಕ್ಕಟ್ಟನ್ನು, ಒಂದು "ಸಾಂದರ್ಭಿಕ ಬಿಕ್ಕಟ್ಟು" ಎಂದು ನಾನು ಕರೆಯುತ್ತೇನೆ.



ಈ ಅಭಿಪ್ರಾಯವನ್ನು ಕೆಲವರು ಅಲ್ಲಗಳೆಯುತ್ತಾರೆ, ಬಿಕ್ಕಟ್ಟು ಬರುವುದನ್ನು ಅವರು ಗ್ರಹಿಸಿದ್ದರು ಎಂಬ ನೆಲೆಯಲ್ಲಿ. ಆದರೆ ಚುನಾವಣಾ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಸರ್ಕಾರವು, ಅದೊಂದು ಪ್ರತಿಗಾಮಿ ಸರ್ಕಾರವೇ ಇರಲಿ, ಕೆಲವು ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆರಂಭದಿಂದಲೇ ಕೆಲವರು ಈ ಬಗ್ಗೆ ಕೆಲವು ಭಯಾನಕ ಮುನ್ಸೂಚನೆಗಳನ್ನು ಕೊಡಲಾರಂಭಿಸಿದರೂ ಕೂಡ, ಅಂತಹ ಸರಕಾರಕ್ಕೂ ತನ್ನ ವೆಚ್ಚಗಳನ್ನು ಕಡಿತಗೊಳಿಸಲು, ಕಲ್ಯಾಣ ಕಾರ್ಯಕ್ರಮಗಳನ್ನು ರದ್ದು ಮಾಡಲು (ಈ ಕಾರ್ಯಕ್ರಮಗಳು ಎಷ್ಟೇ ಮಿತಿಗಳಿಂದ ಕೂಡಿದ್ದರೂ ಸಹ), ಪಿಂಚಣಿಯ ಮೊತ್ತವನ್ನು ಕಡಿತಗೊಳಿಸಲು, ಸರ್ಕಾರಿ ಕಾಲೇಜುಗಳ ಶಿಕ್ಷಕರು, ಸರ್ಕಾರಿ ಆಸ್ಪತ್ರೆಗಳ ವೈದ್ಯರೂ ಸೇರಿದಂತೆ ಸರ್ಕಾರಿ ನೌಕರರ ವೇತನವನ್ನು ತಡೆಹಿಡಿಯಲು ಸಾಧ್ಯವಾಗದು.

ನವ-ಉದಾರವಾದ ಮೂಲಕಾರಣ

ಪಾವತಿ ಶೇಷದ (ವಿದೇಶ ವ್ಯಾಪಾರದ ಬಾಕಿ ಚುಕ್ತಾ) ಸಮಸ್ಯೆಯನ್ನು ತಾತ್ಕಾಲಿಕವಾಗಿ ಎದುರಿಸುತ್ತಿರುವ ಒಂದು ಅರ್ಥವ್ಯವಸ್ಥೆಯ ಪರಿಸ್ಥಿತಿಯನ್ನು ನೋಡೋಣ. ಪಾವತಿ ಶೇಷದ ಸಮಸ್ಯೆಯನ್ನು ಆ ದೇಶವು ವಿದೇಶಿ ಸಾಲದ ಮೂಲಕ ಪರಿಹರಿಸಿಕೊಳ್ಳಬಹುದು. ಅದು ಸುಲಭ ಸಾಧ್ಯವೂ ಹೌದು. ಏಕೆಂದರೆ, ಅಲ್ಲಿಯವರೆಗೂ ಆ ದೇಶವು ಯಾವುದೇ ಬಿಕ್ಕಟ್ಟನ್ನೂ ಕಂಡಿಲ್ಲ. ಅದೂ ಅಲ್ಲದೆ, ಈ ಉದ್ದೇಶಕ್ಕಾಗಿ ಸಾರ್ವಜನಿಕ ಸೌಕರ್ಯಗಳ ಮೇಲಿನ ವೆಚ್ಚಗಳನ್ನು ಕಡಿತಗೊಳಿಸಿ ಜನರಿಗೆ ಕಷ್ಟ ಕೊಡುವುದರ ಬದಲು, ಮತ್ತು ಅದೂ ಸಾಲದು ಎಂಬಂತೆ ಒಂದು ಆರ್ಥಿಕ ಹಿಂಜರಿತವನ್ನೂ ಸಹ ಉಂಟುಮಾಡುವುದರ ಬದಲು, ಹೊರಗಿನ ಸಾಲವೇ ಒಂದು ಉತ್ತಮ ಆಯ್ಕೆಯಾಗಿ ತೋರುತ್ತದೆ. ಆದರೆ, ಈ ತಾತ್ಕಾಲಿಕ ಪಾವತಿ ಶೇಷದ ಸಮಸ್ಯೆಯು ಒಂದು ವೇಳೆ ಮೂಲತಃ ಊಹಿಸಿಕೊಂಡದ್ದಕ್ಕಿಂತ ಹೆಚ್ಚು ದಿನಗಳ ಕಾಲ ಮುಂದುವರಿದರೆ, ಆಗ ಸಾಲದ ಕಂತುಗಳನ್ನು ಕಠಿಣ ಷರತ್ತುಗಳೊಂದಿಗೆ ಮಾಡಿದ ಹೊಸ ಸಾಲಗಳ ಮೂಲಕ ತೀರಿಸಬೇಕಾಗುತ್ತದೆ. ಹೊಸ ಸಾಲಗಳ ಈ ಕಠಿಣ ಷರತ್ತುಗಳು ಶೀಘ್ರದಲ್ಲೇ ಎಷ್ಟು ಪ್ರತಿಕೂಲವಾಗಿ ಪರಿಣಮಿಸುತ್ತವೆ ಎಂದರೆ, ಬಿಕ್ಕಟ್ಟು ಬಾಗಿಲ ಬಳಿಗೇ ಬಂದಿರುತ್ತದೆ.

ಬಿಕ್ಕಟ್ಟಿನ ಈ ವಿವರಣೆಯು ರಾಜಪಕ್ಸೆ ಸರ್ಕಾರವನ್ನು ಅದು ಮಾಡಿದ ಅಪರಾಧಗಳಿಂದ ಮುಕ್ತಗೊಳಿಸುವ ಉದ್ದೇಶ ಹೊಂದಿಲ್ಲ. ಪರೋಕ್ಷ ತೆರಿಗೆ ಕಡಿತದ ಕ್ರಮಗಳು ವಿತ್ತೀಯ ಕೊರತೆಯನ್ನು ತೀವ್ರವಾಗಿ ಹೆಚ್ಚಿಸಿದವು, ನಿಜ. ಆದರೆ, ಪರೋಕ್ಷ ತೆರಿಗೆ ಕಡಿತದಿಂದ ಉಂಟಾದ ನಷ್ಟವನ್ನು ನೇರ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಸರಿಪಡಿಸಿಕೊಳ್ಳಲಿಲ್ಲ. ನಂತರ ಜಾರಿಗೊಳಿಸಿದ ಸಂಪತ್ತಿನ ತೆರಿಗೆಯ ಏರಿಕೆಯ ಪ್ರಮಾಣವು ಅತ್ಯಲ್ಪವೂ ಹೌದು ಮತ್ತು ತುಂಬಾ ತಡವಾಗಿ ಜಾರಿ ಮಾಡಿದ ಕ್ರಮವೂ ಹೌದು. ಹಾಗಾಗಿ ಬಿಕ್ಕಟ್ಟು ಬೃಹದಾಕಾರವಾಗಿ ಬೆಳೆಯಿತು. ಹಾಗೆಯೇ, ರಾಜಪಕ್ಸೆ ಸರ್ಕಾರದ ಅಸಂಖ್ಯಾತ ಲೋಪ-ದೋಷಗಳ ಬಗ್ಗೆ (ಅಂದರೆ, ಮಾಡಬೇಕಾದದ್ದನ್ನು ಬಿಟ್ಟು ಮಾಡಬಾರದ ಕೃತ್ಯಗಳ ಬಗ್ಗೆ) ಕಣ್ಣುಮುಚ್ಚಿಕೊಳ್ಳುವುದು ಸಾಧ್ಯವಿಲ್ಲ. ಆದರೆ, ಸರ್ಕಾರದ ಲೋಪ-ದೋಷಗಳ ಬಗ್ಗೆ ಮಾತ್ರ ಗಮನವನ್ನು ಕೇಂದ್ರೀಕರಿಸಿ, ಸಂಕಷ್ಟಕ್ಕೊಳಗಾದ ಜನರು ಬೀದಿಗಿಳಿಯುವಂತೆ ಮಾಡಿದ ಶ್ರೀಲಂಕಾದ ಬಿಕ್ಕಟ್ಟು ಪ್ರಕಟಗೊಳ್ಳಲು ಮೂಲಭೂತವಾಗಿ ಕಾರಣವಾದ ನವ-ಉದಾರವಾದದ ಸಂದರ್ಭವನ್ನು ನಿರ್ಲಕ್ಷಿಸುವುದು ಬುದ್ಧಿಹೀನ ಕೃತ್ಯವಾಗುತ್ತದೆ.

ಎರಡು ಸ್ಪಷ್ಟ ಪಾಠಗಳು

ಶ್ರೀಲಂಕಾದ ಬಿಕ್ಕಟ್ಟಿನ ಅನುಭವದಿಂದ ಕಲಿಯಬಹುದಾದ ಎರಡು ಸ್ಪಷ್ಟ ಪಾಠಗಳಿವೆ. ಮೊದಲನೆಯದು, ಕಲ್ಯಾಣ ಕಾರ್ಯಕ್ರಮಗಳು ನವ-ಉದಾರವಾದಿ ಆಳ್ವಿಕೆಯೊಂದಿಗೆ ಪೂರ್ಣವಾಗಿ ಹೊಂದಿಕೆಯಾಗುವುದಿಲ್ಲ ಎಂಬುದು. ಕೆಲವು ವರ್ಷಗಳ ಹಿಂದೆ ಶ್ರೀಲಂಕಾವು ಮೂರನೇ ಜಗತ್ತಿನ ಸನ್ನಿವೇಶದಲ್ಲಿ ಅಸೂಯೆಪಡುವಂತಹ ಒಂದು ಕಲ್ಯಾಣ ರಾಜ್ಯವನ್ನು ನಿರ್ಮಿಸಿತ್ತು. ನವ-ಉದಾರವಾದಿಯಲ್ಲದ ಒಂದು ಆಳ್ವಿಕೆಯಲ್ಲಿ ವಿದೇಶಿ ವಿನಿಮಯ ಗಳಿಕೆಯಲ್ಲಿ ಒಂದು ವೇಳೆ ಹಠಾತ್ ಕುಸಿತವಾದರೂ ಸಹ, ಬಾಹ್ಯ ಸಾಲವನ್ನು ಹೆಚ್ಚಿಸಿಕೊಳ್ಳದೆಯೂ ಸಹ, ಅಗತ್ಯವಲ್ಲದ ಅನೇಕ ಆಮದುಗಳನ್ನು ಕಡಿತಗೊಳಿಸುವ ಮೂಲಕ, ಕಲ್ಯಾಣ ರಾಜ್ಯವನ್ನು ಉಳಿಸಿಕೊಳ್ಳಬಹುದು. ಆದರೆ, ಇದೇ ಈ ಪರಿಸ್ಥಿತಿಯಲ್ಲಿ, ನವ-ಉದಾರವಾದ ನೀತಿಯ ಸರ್ಕಾರವು ತನ್ನ ವೆಚ್ಚಗಳ ಕಡಿತದ ಮೂಲಕ ಕಲ್ಯಾಣ ಕಾರ್ಯಕ್ರಮಗಳನ್ನು ಕಡಿತಗೊಳಿಸಿ, ಒಟ್ಟಾರೆ ಬೇಡಿಕೆಯನ್ನು ತಗ್ಗಿಸಿ, ಆ ಮೂಲಕ ಆಮದುಗಳು ತಗ್ಗುವಂತೆ ನೋಡಿಕೊಳ್ಳುತ್ತದೆ. ಅಥವಾ, ಬಾಹ್ಯ ಸಾಲಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ ಕಲ್ಯಾಣ ಕಾರ್ಯಕ್ರಮಗಳೂ ಸೇರಿದಂತೆ ತನ್ನ ಖರ್ಚು-ವೆಚ್ಚಗಳನ್ನು ಮುಂದುವರೆಸುತ್ತದೆ. ಇಂತಹ ಒಂದು ಸನ್ನಿವೇಶದಲ್ಲಿ, ವಿದೇಶಿ ವಿನಿಮಯ ಗಳಿಕೆಯ ವಸೂಲಾತಿಯಲ್ಲಿ (ರಫ್ತು ಬಾಕಿ ಪಡೆಯುವಲ್ಲಿ) ವಿಳಂಬವಾದರೆ, ಮತ್ತು ಅಂತಹ ಕಾರಣದಿಂದಾಗಿ ಸಾಲದ ಕಂತು ಕಟ್ಟುವುದು ತಡವಾದ ಸಂದರ್ಭಗಳಲ್ಲಿ, ಸಾಲದ ಕಠಿಣ ಷರತ್ತುಗಳನ್ನು ಜಾರಿಗೊಳಿಸಿದಾಗ ಬಹಳ ಬೇಗನೇ ದೇಶವು ಸಾಲದ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಆಗ, ಕಲ್ಯಾಣ ಕಾರ್ಯಕ್ರಮಗಳ ಮುಂದುವರಿಕೆ ಅಸಾಧ್ಯವಾಗುತ್ತದೆ. ಇದನ್ನು ಬೇರೆ

ಪುಟ 14 ಕ್ಕೆ

'ಕಲ್ಯಾಣ ಪ್ರಭುತ್ವ' ಶ್ರೀಲಂಕಾ 'ರೋಗಿ' ಪ್ರಭುತ್ವವಾದದ್ದು ಹೇಗೆ?.......

ಪುಟ 13 ರಿಂದ

ಮಾತುಗಳಲ್ಲಿ ಹೇಳುವುದಾದರೆ, ನವ-ಉದಾರವಾದಿ ಆಳ್ವಿಕೆಯಲ್ಲಿಯೂ ಒಂದು ದೇಶವು ತನ್ನ ಕಲ್ಯಾಣ ಕಾರ್ಯಕ್ರಮಗಳನ್ನು ಮುಂದುವರೆಸುತ್ತದೆ ಎಂದು ಸ್ವಲ್ಪ ಸಮಯದವರೆಗೆ ತೋರಿಸಿಕೊಳ್ಳಬಹುದಾದರೂ, ವ್ಯವಸ್ಥೆಗೆ ಮೊದಲ ಆಘಾತ ತಾಗಿದ ಕೂಡಲೇ, ನವ-ಉದಾರವಾದಿ ಆಳ್ವಿಕೆಗೂ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೂ ಆಗಿ ಬರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಕಲ್ಯಾಣ ಕಾರ್ಯಕ್ರಮಗಳಿಗೂ ಮತ್ತು ತನಗೂ ಆಗಿ ಬಾರದ ಅಂಶವನ್ನು ನವ-ಉದಾರವಾದಿ ಆಳ್ವಿಕೆಯು ತಾತ್ಕಾಲಿಕವಾಗಿ ಮರೆಮಾಚಿದರೂ ಸಹ, ಆಘಾತಗಳು ಅದನ್ನು ಬಹಿರಂಗಪಡಿಸುತ್ತವೆ.

ಈ ವಿದ್ಯಮಾನವು ಅನೇಕ ಅರ್ಥಶಾಸ್ತ್ರಜ್ಞರು ಮಂಡಿಸುವ ವಾದಗಳಿಗೆ ವಿರುದ್ಧವಾಗಿದೆ. ಒಂದು "ಹೂಡಿಕೆದಾರ-ಸ್ನೇಹಿ ವಾತಾವರಣ"ವನ್ನು ಸೃಷ್ಟಿಸುವ ಮೂಲಕ ನವ-ಉದಾರವಾದಿ ಆಳ್ವಿಕೆಯು ವಿದೇಶಿ ಹೂಡಿಕೆಯನ್ನು ಆಕರ್ಷಿಸುತ್ತದೆ ಮತ್ತು ದೇಶದಲ್ಲಿ ಹೂಡಿಕೆಯನ್ನು ಉತ್ತೇಜಿಸುತ್ತದೆ. ದೇಶದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ದರ ಉನ್ನತವಾಗುತ್ತದೆ. ಹಾಗಾಗಿ, ಕಲ್ಯಾಣ ಕಾರ್ಯಕ್ರಮಗಳ ಅಳವಡಿಕೆಯನ್ನು ಅಷ್ಟುಮಟ್ಟಿಗೆ ಸುಗಮಗೊಳಿಸುತ್ತದೆ ಎಂಬುದಾಗಿ ಈ ಅರ್ಥಶಾಸ್ತ್ರಜ್ಞರು ನಂಬುತ್ತಾರೆ. ಈ ವಾದದಲ್ಲಿ ಎರಡು ಸ್ಪಷ್ಟ ನ್ಯೂನತೆಗಳಿವೆ: ಮೊದಲನೆಯದು, ಶ್ರೀಮಂತರ ಮೇಲೆ ಸೂಕ್ತ ತೆರಿಗೆಗಳನ್ನು ವಿಧಿಸದ ಹೊರತು ಜಿಡಿಪಿ ಬೆಳವಣಿಗೆ ದರ ಹೆಚ್ಚಳವೇ ಕಲ್ಯಾಣ ಪ್ರಭುತ್ವ ನಿರ್ಮಾಣಕ್ಕೆ ಅನುವಾಗುವುದಿಲ್ಲ. ಮತ್ತು, "ಹೂಡಿಕೆಯ ವಾತಾವರಣ"ವನ್ನು ಉಳಿಸಿಕೊಳ್ಳುವ ಗೀಳಿನಲ್ಲಿ ಸರ್ಕಾರವು ಶ್ರೀಮಂತರ ಮೇಲೆ ತೆರಿಗೆಗಳನ್ನು ಹೆಚ್ಚಿಸುವುದೇ ಇಲ್ಲ. ಇದು ದೊಡ್ಡ ಪ್ರಮಾಣದ ಕಲ್ಯಾಣ ವೆಚ್ಚಗಳಿಗೆ ಅಡ್ಡಿಯಾಗುತ್ತದೆ. ಎರಡನೆಯದು, ನಾವು ಈಗಷ್ಟೇ ಚರ್ಚಿಸಿದಂತೆ, ಹಲವಾರು ವರ್ಷಗಳಿಂದಲೂ ದೇಶವು ಪರಂಪರಾಗತವಾಗಿ ಅನುಸರಿಸಿದ ಕಲ್ಯಾಣ ಕಾರ್ಯಕ್ರಮಗಳನ್ನು ಒಂದು ವೇಳೆ ನವ-ಉದಾರವಾದಿ ಆಳ್ವಿಕೆಯು ಮುಂದುವರಿಸಿ, ತನಗೂ ಮತ್ತು ಕಲ್ಯಾಣ ಪ್ರಭುತ್ವ ಪೋಷಣೆಗೂ ಸಂಘರ್ಷವಿಲ್ಲ ಎಂದು ತೋರಿಸಿಕೊಳ್ಳುತ್ತದೆ. ಆದರೆ ವ್ಯವಸ್ಥೆಗೆ ಆಘಾತ ತಾಗಿದ ಒಡನೆಯೇ ತನ್ನ ನಿಜ ರೂಪವನ್ನು ತೋರಿಸುತ್ತದೆ.

ಶ್ರೀಲಂಕಾದ ಬಿಕ್ಕಟ್ಟಿನ ಎರಡನೆಯ ಪಾಠವೆಂದರೆ, ನವ-ಉದಾರವಾದದ ಆಳ್ವಿಕೆಯಲ್ಲಿ ಪ್ರತಿಯೊಂದು ದೇಶವೂ ಇಂತಹ "ಸಾಂದರ್ಭಿಕ ಬಿಕ್ಕಟ್ಟಿಗೆ" ಈಡಾಗಲಿದೆ. ಶ್ರೀಲಂಕಾಕ್ಕೆ ಏನಾಗಿದೆಯೋ ಅದು ನವ-ಉದಾರವಾದಿ ಆಡಳಿತದಲ್ಲಿ ಸಿಲುಕಿರುವ ಯಾವುದೇ ದೇಶಕ್ಕೂ ಸಂಭವಿಸಬಹುದು. ನವ-ಉದಾರವಾದಿ ಆಳ್ವಿಕೆಯಲ್ಲಿ, ರಾಜ್ಯ ಸರ್ಕಾರಗಳನ್ನು ಭಾರತದ ಅನೇಕ ವ್ಯಾಖ್ಯಾನಕಾರರು ಒತ್ತಾಯಿಸುತ್ತಿರುವಂತೆ, ಸಾರ್ವಜನಿಕ ವೆಚ್ಚಗಳ ಕಡಿತ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಮೊಟಕು ಮಾಡುವುದು ಸರಿಯಾದ ಮಾರ್ಗವಲ್ಲ. ಬದಲಿಗೆ, ನವ-ಉದಾರವಾದಿ ಆಳ್ವಿಕೆಯಿಂದ ಪೂರ್ಣವಾಗಿ ಹೊರಬರುವುದೇ ಸರಿಯಾದ ಮಾರ್ಗ. ಖಚಿತವಾಗಿ ಹೇಳುವುದಾದರೆ, ನವ-ಉದಾರವಾದಿ ಆಳ್ವಿಕೆಯಿಂದ ಹೊರಬರುವುದು ಸುಲಭವಲ್ಲ. ಅದನ್ನು ಬಿಟ್ಟರೆ ಬೇರೆ ದಾರಿಯೂ ಇಲ್ಲ. ಶ್ರೀಲಂಕಾದ ಸರ್ಕಾರ ಎಡವಿದ್ದು ಎಲ್ಲಿ ಎಂದರೆ, ಆ ದೇಶವನ್ನು ನವ-ಉದಾರವಾದದ ಕಪಿಮುಷ್ಟಿಯಲ್ಲಿ ಸಿಲುಕಿಸುವಲ್ಲಿ ಎಂದೇ ಹೇಳಬಹುದು. ಸರ್ಕಾರಗಳಿಗೆ ಆಯ್ಕೆಗಳೇ ಇಲ್ಲ. ಹಾಗಾಗಿ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ನವ-ಉದಾರವಾದಿ ಆಳ್ವಿಕೆಯನ್ನು ಅಳವಡಿಸಿಕೊಳ್ಳುವತ್ತ ದೇಶ ದೇಶಗಳನ್ನು ತಳ್ಳುತ್ತದೆ.

ಪರಿಶಿಷ್ಟರಿಗೆ ಬಗೆದ ದ್ರೋಹ........


ಪುಟ 3 ರಿಂದ

ಸಾಧನೆಗೆ ಮೀಸಲಿಟ್ಟ ಹಣ ಇಂತಹ ಮೂಲಭೂತ ಅಗತ್ಯಗಳಿಗೆ ಖರ್ಚಾಗುವುದಿಲ್ಲ. ಬದಲಾಗಿ ಮೇಲ್ಪದರಿನಲ್ಲಿಯೇ ಸುಲಭವಾಗಿ ಸೋರಿ ಹೋಗುತ್ತದೆ. ವಾಸ್ತವದಲ್ಲಿ, ಈ ಸಮುದಾಯಗಳಿಗೆ ಪರಿವರ್ತನೆಯ ಗಂಧಗಾಳಿಯೂ ಸೋಂಕದಂತೆ ನೋಡಿಕೊಳ್ಳುವ ದುಷ್ಟ ಸಂಚಿನ ಭಾಗವಾಗಿ ಈ ಕ್ರಿಮಿನಲ್ ಕೃತ್ಯಗಳು ನಡೆಯುತ್ತಲೇ ಇರುತ್ತವೆ. ಹೀಗಾಗಿ ರಾಜಕೀಯ ಇಚ್ಛಾಶಕ್ತಿ ಹೀನತೆ ಮತ್ತು ಸಂವಿಧಾನಾತ್ಮಕ ಬದ್ಧತೆ, ಕಳಕಳಿ ಇಲ್ಲದೆ ಕೇವಲ ಇವರ ಹೆಸರಿನಲ್ಲಿ ಕೆಲವು ಸ್ಥಾಪಿತ ಹಿತಾಸಕ್ತಿಗಳು ದುಡ್ಡುಮಾಡುವ ದಂಧೆಯಾಗಿ ಯೋಜನೆಯ ಜಾರಿಯನ್ನು ಮಾರ್ಪಡಿಸಲಾಗಿದೆ. ಪರಿಣಾಮ ಈ ಸಮುದಾಯಗಳ ಪರಿಸ್ಥಿತಿ ಯಥಾರೀತಿ ಮುಂದುವರಿಯುತ್ತಿದೆ. ಇದು ಆಳುವವರ ಮಹಾ ಪಿತೂರಿ.

ಮತ್ತೂ ವಿಚಿತ್ರವೆಂದರೆ ಇಲ್ಲಿಯವರೆಗೂ ಯೋಜನೆಯ ಅಡಿಯಲ್ಲಿ ಮಾಡಲಾದ ವೆಚ್ಚಗಳ ಒಟ್ಟು ಸಾಮುದಾಯಿಕ ಪರಿಣಾಮಗಳ ಮೌಲ್ಯಮಾಪನವೇ ನಡೆದಿಲ್ಲ. ಹಾಗೆ ನಡೆದಲ್ಲಿ ಆಳುವವರ ವಂಚನೆಗಳು, ಉದ್ಧಾರದ ಸೋಗಲಾಡಿತನ ಬಯಲುಗೊಂಡು ಸಮುದಾಯಗಳ ದೀನ ಸ್ಥಿತಿ ಹೊರಬರುತ್ತಿತ್ತು. ಹೊಸ ಕಾರ್ಯತಂತ್ರವನ್ನು ರೂಪಿಸಬಹುದಿತ್ತು.

ಗಂಗಾ ಕಲ್ಯಾಣ ಯೋಜನೆ ಯ ಜಾರಿ ಹಗರಣದಿಂದ ತುಂಬಿದೆ. ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿಲ್ಲ. ಪದೇ ಪದೇ ಫಲಾನುಭವಿಗಳು ಅರ್ಜಿ ಹಾಕಲು ಕೇಳಬೇಕಾಗಿಲ್ಲ. ದಲಿತರ ಹೆಸರಿನಲ್ಲ ಎಂಎಲ್ ಎ ಹಿಂಬಾಲಕರ ಲೂಟಿಯು ನಡೆಯುತ್ತದೆ. ಕೇಂದ್ರ ಸರಕಾರ ಜನ ಸಂಖ್ಯೆಗನುಗುಣವಾದ ಅನುದಾನ ನೀಡುತ್ತಿಲ್ಲ.

ಬಿಜೆಪಿ ಸರಕಾರದ ಈ ಅವಧಿಯಲ್ಲಿ ಇಷ್ಟು ದುರುಪಯೋಗ ನಡೆಯುತ್ತಿದ್ದರೂ ಸಂಬಂಧಿಸಿದ



ಮಂತ್ರಿಗಳು ಆಯಾ ಸಮುದಾಯಗಳಿಗೆ ಸೇರಿದ ಸಚಿವರು, ಶಾಸಕರಾಗಲಿ ಒಂದು ಸಣ್ಣ ಆಕ್ಷೇಪವನ್ನೂ ಎತ್ತದೇ ಬಾಯಿ ಮುಚ್ಚಿ ಕೊಂಡಿರುವುದು ಅವರು ಆಳುವ ವರ್ಗದ ಭಾಗ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಅದರಲ್ಲಿ ತಮಗೊಂದು ಪಾಲು ಸಿಕ್ಕರೆ ಸಾಕು ಎನ್ನುವಂತಿದೆ ಅವರ ವರ್ತನೆ. ಈ ವಿಭಾಗಗಳಿಂದಲೇ ಅತಿ ಹೆಚ್ಚಿನ ಶಾಸಕರು ಆಳುವ ಬಿಜೆಪಿಗೆ ಸಂಬಂಧಿಸಿದವರಾಗಿದ್ದಾರೆ ಎನ್ನುವುದು ಗಮನಾರ್ಹ.

2022-23 ರ ಸಾಲಿನ ಮೊತ್ತದಲ್ಲಿಯೂ 5000 ಕೋಟಿ ರೂ.ಗಳನ್ನು ಅನ್ಯ ಉದ್ದೇಶಗಳಿಗೆ ಬಳಸಲಾಗುವುದು ಎಂದು ಸಚಿವ ಗೋವಿಂದ ಕಾರಜೋಳ ಯಾವುದೇ ಅಳುಕಿಲ್ಲದೆ ಪ್ರಕಟಿಸಿದ್ದರು. ಇದರ ವಿರುದ್ಧ ತೀವ್ರ ಪ್ರತಿಭಟನೆ ವಿಧಾನಸಭೆಯಲ್ಲಿ ಮತ್ತು ಸಾರ್ವಜನಿಕವಾಗಿ ಎದ್ದಾಗ ಆ ನಿರ್ಧಾರವನ್ನು ಕೈಬಿಡುವುದಾಗಿ ಹೇಳಲಾಯಿತು. ಮುಜುಗರ ಅನುಭವಿಸಿದ ಸರಕಾರ ಇನ್ನು ಮುಂದೆ ಎಲ್ಲಾ ದಲಿತ ಮತ್ತು ಬುಡಕಟ್ಟು ಸಮುದಾಯಗಳ ಕಲ್ಯಾಣ ಕಾರ್ಯಕ್ರಮಗಳ ಉಸ್ತುವಾರಿಯನ್ನು ಮುಖ್ಯಮಂತ್ರಿಗಳೇ ವಹಿಸಿಕೊಳ್ಳುವುದಾಗಿ ಹೇಳಿರುವುದು ಕೂಡ ನಡೆದಿರುವ ಹಗರಣವನ್ನು ಮುಚ್ಚಿ ಹಾಕಲು ನಡೆಸಿದ ಪ್ರಯತ್ನ ಆಗಿರಬಹುದೇ? ಭಾರೀ ಕಾಳಜಿ ಇರುವಂತೆ ನಟಿಸಿ ಜನರ ಗಮನ ಬೇರೆಡೆಗೆ ಸೆಳೆಯುವ ಕುತಂತ್ರವಾಗಿರಬಾರದೇಕೆ? ಏಕೆಂದರೆ ಈಗಲೂ ಎಸ್ಸಿ ಮತ್ತು ಎಸ್ಟೀ ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿ ಮುಖ್ಯಮಂತ್ರಿಗಳ ಉಸ್ತುವಾರಿಯಲ್ಲಿ ನಿಯತಕಾಲಿಕವಾಗಿ ವಿಮರ್ಶೆ ನಡೆಯಬೇಕಿರುವುದು ಆದ್ಯ ಹೊಣೆಗಾರಿಕೆ ಆಗಿದೆ. ಯಾವುದೇ ಬದ್ಧತೆ ಮತ್ತು ಸಾರ್ವಜನಿಕ ಉತ್ತರದಾಯಿತ್ವದ ಸೂಕ್ಷ್ಮತೆ ಇಲ್ಲದ ಸರ್ಕಾರ ತನ್ನ ಮಾತನ್ನು ಉಳಿಸಿಕೊಳ್ಳುತ್ತದೆ ಎಂದು ನಂಬುವುದಾದರೂ ಹೇಗೆ? ಆದ್ದರಿಂದ ಹೀಗೆ ದುರುಪಯೋಗ ಮಾಡಲ್ಪಟ್ಟ ಎಲ್ಲ ಹಣವನ್ನು ಈ ಸಮುದಾಯಗಳ ವಿಶೇಷ ನಿಧಿಗೆ ಮರಳಿಸಬೇಕು ಮತ್ತು ನಿರ್ಲಕ್ಷ್ಯ ವಹಿಸಿದ ಸಚಿವರು, ಸತತವಾಗಿ ಕಾಯ್ದೆಯನ್ನು ಉಲ್ಲಂಘಿಸಿರುವ ಅಧಿಕಾರಿಗಳ ಮೇಲೆ ಕಠಿಣ ಕ್ರಮಗಳನ್ನು ಜರುಗಿಸಲೇಬೇಕು. ಇದರ ಸಂವಿಧಾನಾತ್ಮಕ ಹೊಣೆಗಾರಿಕೆ ಮುಖ್ಯಮಂತ್ರಿಗಳ ಹೆಗಲ ಮೇಲಿದ್ದು ಸಾರ್ವಜನಿಕ ಉತ್ತರದಾಯಿತ್ವ ಮತ್ತು ಕಾನೂನಾತ್ಮಕ ಕ್ರಮಗಳಿಂದ ಅವರು ತಪ್ಪಿಸಿಕೊಳ್ಳುವಂತಿಲ್ಲ. ಇದೀಗ ಬಸವರಾಜ ಬೊಮ್ಮಾಯಿಯವರೂ ಕಟಕಟೆಯಲ್ಲಿ ನಿಂತಿದ್ದಾರೆ.

ಎಲ್‌ಐಸಿಯ ಶೇರು ಮಾರಾಟದ ಆರಂಭ ಒಂದು ದೈತ್ಯಾಕಾರದ ಹಗರಣದ.......

ಪುಟ 11 ರಿಂದ

ವಿಮಾ ವಹಿವಾಟನ್ನು ಕೊಳ್ಳುವವರಿಗೆ ತಾವು ಕೊಳ್ಳುವ ಜೀವ ವಿಮಾ ಸಂಸ್ಥೆಯ ಅಂತಸ್ಸತ್ವದ ಬೆಲೆಯೆಷ್ಟು ಎಂಬುದನ್ನು ಕಂಡು ಹಿಡಿಯುವ ಪ್ರಯತ್ನವನ್ನು ಈ 'ಹುದುಗಿರುವ ಮೌಲ್ಯ' ಮಾಡುತ್ತದೆ. ಇದೊಂದು ಸಂಕುಚಿತ ಆಧಾರದಲ್ಲಿ ನಿರ್ಧಾರವಾಗುವ ಮೌಲ್ಯ.

ವಾಸ್ತವವಾಗಿ, ಮತ್ತೊಂದು ಸಂದರ್ಭದಲ್ಲಿ ಮೌಲ್ಯಮಾಪನದ ಕುರಿತು ಮಾತನಾಡುತ್ತಾ, "ಮೌಲ್ಯಮಾಪನ ಗುರು" ಎಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟಿರುವ ನ್ಯೂಯಾರ್ಕ್‌ನ ಸ್ಟರ್ನ್ ಸ್ಕೂಲ್ ಆಫ್ ಬ್ಯುಸಿನೆಸ್‌ನ ಹಣಕಾಸು ಪ್ರಾಧ್ಯಾಪಕ ಅಶ್ವಥ್ ದಾಮೋದರನ್, ಯಾವುದೇ ಮೌಲ್ಯಮಾಪನವು ಮೌಲ್ಯಮಾಪಕನ ಪಕ್ಷಪಾತವನ್ನು ಪ್ರತಿಬಿಂಬಿಸುವ ಆಧಾರಗಳ ಮೇಲೆ ಅವಲಂಬಿತವಾಗಿದೆ ಎಂದು ಪದೇ ಪದೇ ಒತ್ತಿಹೇಳಿದ್ದಾರೆ.

ಇದಲ್ಲದೆ, ಎರಡು ಜೆಕ್ ವಿದ್ವಾಂಸರ ಇತ್ತೀಚಿನ ಲೇಖನವು ಮೌಲ್ಯಮಾಪನಗಳನ್ನು ನಿರ್ಧರಿಸಲು ಈ 'ಇ.ವಿ.' ಮೇಲೆ ಅತಿಯಾದ ಅವಲಂಬನೆಯು ಅಪಾಯಕಾರಿ ಎಂದು ತೀರ್ಮಾನಿಸಿದೆ.

ಬದಲಾಗಿ, ವಿಮಾ ವ್ಯವಹಾರದ ಮೌಲ್ಯದ ಉತ್ತಮ ಅಂದಾಜನ್ನು ತಲುಪಲು 'ಇ.ವಿ.' ಜೊತೆಗೆ ಬೇರೆ ವಿಧಾನವನ್ನು ಬಳಸಬೇಕೆಂದು ಅವರು ಸೂಚಿಸುತ್ತಾರೆ.

ಎಲ್‌ಐಸಿ ಯ ಸಂದರ್ಭದಲ್ಲಿ 'ಇ.ವಿ.' ಲೆಕ್ಕಾಚಾರದಿಂದ ಮರೆಯಾದ ಅತ್ಯಂತ ಗಮನಾರ್ಹ ಅಂಶವೆಂದರೆ ಮಿಲಿಮನ್ ಎಲ್‌ಐಸಿಯ ಸ್ವಾಧೀನದಲ್ಲಿರುವ ಆಸ್ತಿಗಳ ಮೌಲ್ಯವನ್ನು ಸಂಪೂರ್ಣವಾಗಿ ತೆಗೆದುಹಾಕಿರುವುದು.

ಗಮನಾರ್ಹ ಲೋಪ

ಎಲ್ಲಾ ಭಾರತೀಯ ಮಹಾನಗರಗಳು ಮತ್ತು ದೊಡ್ಡ ನಗರಗಳಲ್ಲಿ ಮಾತ್ರವಲ್ಲದೆ ದೇಶದ ಉದ್ದಗಲದಲ್ಲಿ ಅವಿಭಾಜ್ಯ ಆಸ್ತಿಗಳನ್ನು ಹೊಂದಿರುವ ಎಲ್‌ಐಸಿ ಬಹುಶಃ ಭಾರತದ ಅತಿದೊಡ್ಡ ರಿಯಾಲ್ಟರ್ ಆಗಿದೆ ಎಂಬ ಅಂಶವನ್ನು ಗಮನಿಸಿದರೆ ಇದು ಗಮನಾರ್ಹ ಲೋಪವಾಗಿದೆ.

ಅದರ ರಿಯಲ್ ಎಸ್ಟೇಟ್ ಆಸ್ತಿಗಳ ಮೌಲ್ಯ ಏನು ಎಂಬುದರ ಬಗ್ಗೆ ಯಾವುದೇ ವಿಶ್ವಾಸಾರ್ಹ ಅಂದಾಜುಗಳಿಲ್ಲ, ಆದರೆ ಕೆಲವರು ಮಿಲಿಮನ್ ಅಂದಾಜು ಮಾಡಿದ 'ಇ.ವಿ.'ಗಿಂತ ಹಲವಾರು ಲಕ್ಷ ಕೋಟಿ ರೂಪಾಯಿ ಹೆಚ್ಚಿನ ಮೌಲ್ಯ ಇರಬಹುದು ಎಂದು ಅಂದಾಜು ಮಾಡಿದ್ದಾರೆ. ಎಲ್‌ಐಸಿ ಯು ಅಗತ್ಯ ವಿಲ್ಲದ್ದರಿಂದ ಸ್ವತಃ ಈ ಸ್ವತ್ತುಗಳ ಮೌಲ್ಯದ ಅಂದಾಜನ್ನು ಎಂದಿಗೂ ಮಾಡಿಲ್ಲ.


ಆದರೆ ಖಾಸಗಿ ಸಂಸ್ಥೆಗಳ ಪರವಾಗಿ ಸರ್ಕಾರಿ ಪಾಲನ್ನು ಹಿಂಪಡೆಯುವುದರಿಂದ ಅದರ ಹೊಸ ಮಾಲೀಕರಾಗುವವರು ಈಗ ಎಲ್‌ಐಸಿಯ ಸ್ವಾಧೀನದಲ್ಲಿರುವ ಆಸ್ತಿಗಳ ಮೇಲೆ ಹಕ್ಕು ಹೊಂದುತ್ತಾರೆ ಮತ್ತು ಈ ಕಡಿಮೆ ಮೌಲ್ಯಮಾಪನವು ಈ ಸ್ವತ್ತುಗಳನ್ನು ಹೊಂದಲು ಯಾವುದೇ ಪಾತ್ರವನ್ನು ವಹಿಸದ ಹೊಸ ಮಾಲೀಕರಿಗೆ ನೇರವಾಗಿ ಪ್ರಯೋಜನವನ್ನು ನೀಡುತ್ತದೆ ಎಂಬುದನ್ನು ಗಮನಿಸಬೇಕು.

ಮೇಲೆ ಹೇಳಿದ ಡಿಆರ್‌ಹೆಚ್‌ಪಿ ಯಿಂದ ಹೊರ ಬಂದಿರುವ ಅತ್ಯಂತ ಸ್ಪಷ್ಟವಾದ ಸತ್ಯವೆಂದರೆ ಅಸ್ತಿತ್ವದಲ್ಲಿರುವ ಲಕ್ಷಾಂತರ ಪಾಲಿಸಿದಾರರನ್ನು ವಶಪಡಿಸಿಕೊಂಡಿರುವ ವಿಧಾನ. ವಾಸ್ತವವಾಗಿ, ಎಲ್‌ಐಸಿ ಕಾಯಿದೆಗೆ ಮಾಡಿದ ಬದಲಾವಣೆಗಳಿಂದಾಗಿ ಎಲ್‌ಐಸಿ ಯ 'ಇ.ವಿ.' ಮಾರ್ಚ್ 2021 ರಲ್ಲಿ ರೂ.0.96 ಲಕ್ಷ ಕೋಟಿ ಇದ್ದದ್ದು ಸೆಪ್ಟೆಂಬರ್ 2021 ರಲ್ಲಿ ರೂ.5.40 ಲಕ್ಷ ಕೋಟಿ (ಆರು ತಿಂಗಳೊಳಗೆ)ಗೆ ಗಣನೀಯವಾಗಿ ಹೆಚ್ಚಿದೆ.

ಈ ಬದಲಾವಣೆಗಳು ಒಂದೇ ಹೊಡೆತದಲ್ಲಿ, ಬೋನಸ್ ಪಡೆಯಲು ಅರ್ಹವಾಗುವ ಪಾಲಿಸಿಗಳನ್ನು ಹೊಂದಿರುವವರನ್ನು ವಂಚಿಸುತ್ತದೆ. ಈ ಮೊದಲು ಇವರು ಬೋನಸ್ ಗೆ ಅರ್ಹವಾಗದ ಪಾಲಿಸಿಗಳಿಗೆ ಸಂಬಂಧಿಸಿದ ರಿಸ್ಕ್ ನಲ್ಲಿ ಭಾಗವಹಿಸುವುದರಿಂದ ಈ ಪಾಲಿಸಿಗಳಿಂದ ಉಂಟಾಗುವ ಮಿಗುತಾಯ(ಸರ್‌ಪ್ಲಸ್)ದಲ್ಲಿ 95% ಗೆ ಅರ್ಹರಾಗಿದ್ದರು.

ಪಾಲಿಸಿದಾರರ ಹಕ್ಕುಗಳನ್ನು ಕಸಿದುಕೊಂಡು ಅದನ್ನು "ಷೇರುದಾರರಿಗೆ" ವರ್ಗಾಯಿಸುವ ಮೂಲಕ 'ಇ.ವಿ.'ಯಲ್ಲಿ ಅದ್ಭುತವಾದ ಹೆಚ್ಚಳವನ್ನು ಮಾಡಲಾಗಿದೆ. ಷೇರುದಾರರ ವಶಕ್ಕೆ ಹೋಗುವ 'ಇ.ವಿ.' ಅಥವ ಹುದುಗಿರುವ ಮೌಲ್ಯವನ್ನು ಹೆಚ್ಚಿಸಿರುವುದು ತಮ್ಮ ಉಳಿತಾಯಗಳನ್ನು ಎಲ್‌ಐಸಿ ಯಲ್ಲಿ ನಿಯೋಜಿಸಿದ ಕೋಟ್ಯಂತರ ಪಾಲಿಸಿದಾರರ ಹಕ್ಕುಗಳನ್ನು ವಶಪಡಿಸಿಕೊಳ್ಳುವ ಮೂಲಕ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಈ ದೃಷ್ಟಿಯಿಂದ ನೋಡಿದಾಗ, ಕಡಿಮೆ ಮೌಲ್ಯಮಾಪನವು ಎರಡು ವಿಧಗಳಲ್ಲಿ ಒಂದು ಹಗರಣವಾಗಿದೆ: ಒಂದು, ಇದು ಐಪಿಒ ನಿಂದ ಗಳಿಸಬಹುದಾಗಿದ್ದ "ಆದಾಯ"ಗಳು ಸರಕಾರಕ್ಕೆ ದಕ್ಕದಂತಾಗುತ್ತಿದೆ. ಅದಕ್ಕಿಂತ ಮುಖ್ಯವಾಗಿ, ಇದು ದಶಕಗಳಿಂದ ಎಲ್‌ಐಸಿಯನ್ನು ಪೋಷಿಸಿಕೊಂಡು ಬಂದಿರುವ ಪಾಲಿಸಿದಾರರ ಹಕ್ಕುಗಳನ್ನು ಕಸಿದುಕೊಂಡು, ಎಲ್‌ಐಸಿ ಯನ್ನು ಕಟ್ಟುವಲ್ಲಿ ಮತ್ತು ಪೋಷಿಸುವಲ್ಲಿ ಯಾವುದೇ ಪಾತ್ರವನ್ನು ವಹಿಸದ ಖಾಸಗಿ ಸಂಸ್ಥೆಗಳಿಗೆ ವರ್ಗಾಯಿಸುತ್ತದೆ.



ಮೇ 7 ರಂದು ವಿಠ್ಠಲ ಭಂಡಾರಿ ಅವರ ನೆನಪಿನ ದಿನ ವನ್ನು ಉತ್ತರ ಜನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕೆರೆಕೋಣದ 'ಸಹಯಾನ ಅಂಗಳ'ದಲ್ಲಿ ಆಚರಿಸಲಾಯಿತು. ಅಂದು ಬಿಡುಗಡೆಯಾದ ಮೂರು ಪುಸ್ತಕಗಳಲ್ಲಿ ಒಂದಾದ ವಿಠ್ಠಲ ಭಂಡಾರಿ ಅವರು ಬರೆದ 'ಸ್ವಾತಂತ್ರ್ಯಾನೂ ಬೇಕು, ಭೂಮಿನೂ ಬೇಕು' ಪುಸ್ತಕವನ್ನು ಕಾ.ವಿ.ಜೆ.ಕೆ ನಾಯರ್ ಬಿಡುಗಡೆ ಮಾಡಿದ್ದಾರೆ. ಅದರ ಆಯ್ದ ಭಾಗಗಳು.

ಸ್ವಾತಂತ್ರ್ಯಾನೂ ಬೇಕು, ಭೂಮಿನೂ ಬೇಕು

ಪ್ರಕಾಶಕರ ಮಾತು (ಆಯ್ದ ಭಾಗಗಳು)

ಕರ್ನಾಟಕದಲ್ಲಿ ರೈತ ಚಳುವಳಿಯ ಇತಿಹಾಸ ಎಂದರೆ ಕಾಗೋಡು ಸತ್ಯಾಗ್ರಹ, ಮಲಪ್ರಭಾ ರೈತರ ಹೋರಾಟವೆಂದೂ, ರೈತ ಸಂಘಟನೆ ಎಂದರೆ ಕರ್ನಾಟಕ ರಾಜ್ಯ ರೈತ ಸಂಘ ಎಂದೂ ಸಮೀಕರಿಸಲಾಗುತ್ತದೆ. ಕರಾವಳಿ (ದಕ್ಷಿಣ ಮತ್ತು ಉತ್ತರ ಕನ್ನಡ) ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ಸಹ ಪ್ರಮುಖವಾಗಿ ನಡೆದ ಗೇಣಿದಾರ ರೈತರ ಹಲವು ದಶಕಗಳ ಹೋರಾಟಗಳು ಇತಿಹಾಸದಲ್ಲಿ ದಾಖಲಾಗಿಲ್ಲ. ಈ ಹೋರಾಟಗಳು ಮತ್ತು ಕೋಲಾರ ಮುಂತಾದ ಕಡೆ ರೈತ ಹೋರಾಟಗಳನ್ನು ಸಂಘಟಿಸಿದ ಅಖಿಲ ಭಾರತ ಕಿಸಾನ ಸಭಾಕ್ಕೆ ಸಂಯೋಜಿತವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದ ಹೆಸರೂ ಇತಿಹಾಸದಲ್ಲಿ ಕೇಳಿ ಬರುವುದಿಲ್ಲ. ಅದರಿಂದಾಗಿ ಇವು ಜನಮಾನಸದಲ್ಲೂ ದಾಖಲಾಗಿಲ್ಲ. 'ಅರಸು ಕೊಡುಗೆ' ಎಂದೇ ಹೆಸರಾಗಿರುವ ಗೇಣಿದಾರರಿಗೆ ಭೂಮಿ ಒಡೆತನ ಕೊಟ್ಟ ಭೂಸುಧಾರಣೆ ಕಾನೂನು ಬರಲು ಮತ್ತು ಸೀಮಿತವಾಗಿಯಾಗಿಯಾದರೂ ಜಾರಿಯಾಗಲು ಕರ್ನಾಟಕ ಪ್ರಾಂತ ರೈತ ಸಂಘದ ನಾಯಕತ್ವದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ದಶಕಗಳ ಕಾಲ ನಡೆದ ಸಮರಶೀಲ ಗೇಣಿದಾರ ರೈತ ಚಳುವಳಿಯ ಒತ್ತಡ ಕಾರಣವೆನ್ನುವುದು ಈಗಂತೂ ಯಾರಿಗೂ ತಿಳಿದೇ ಇಲ್ಲ. ಇದಕ್ಕೆ ಈ ಚಳುವಳಿಯ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆಗಳು ನಡೆಯದಿರುವುದು ಕಾರಣ.

ಅದೇ ರೀತಿ ಉತ್ತರ ಕನ್ನಡದ ರೈತ ಚಳುವಳಿ ಮತ್ತು ದಿನಕರ ದೇಸಾಯಿ ಅವರ ನಾಯಕತ್ವದ ರೈತ ಹೋರಾಟಗಳನ್ನು ಸಮೀಕರಿಸುವುದು ಸಹ ಸಾಮಾನ್ಯ. ಇಲ್ಲೂ ಕಿಸಾನ ಸಭಾ ಮತ್ತು ಕಮ್ಯುನಿಸ್ಟ್ ನಾಯಕತ್ವದ ರೈತ ಹೋರಾಟಗಳ ಕುರಿತು ಅಕಾಡೆಮಿಕ್ ಮತ್ತು ಬುದ್ಧಿಜೀವಿ ವಲಯಗಳಲ್ಲೂ ಜಾಣ ಮೌನ ಮತ್ತು ಜಾಣ ಕುರುಡು ಕಾಣುತ್ತೇವೆ. ಈ ಕೊರತೆಗಳನ್ನು ಭಾಗಶಃವಾದರೂ ಈ ಪುಸ್ತಕ ತುಂಬುತ್ತದೆ.

ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. ಒಂದು ಡಾ.ವಿಠ್ಠಲ ಭಂಡಾರಿ ಅವರು ಯು.ಜಿ.ಸಿ ಪ್ರಾಯೋಜಕತ್ವದಲ್ಲಿ ನಡೆಸಿದ ಕಿರು ಸಂಶೋಧನಾ ಪ್ರಾಜೆಕ್ಟಿನ ವರದಿ. ಈ ಕಿರು ಸಂಶೋಧನೆ ಈ ವರೆಗೆ ಗೊತ್ತಿರದ ಎಲ್ಲೂ ದಾಖಲಾಗದ 1920–40ರ ಮೂರು ದಶಕಗಳ ಉತ್ತರ ಕನ್ನಡದ ಕೆಂಬಾವುಟ ನಾಯಕತ್ವದ ರೈತ ಹೋರಾಟಗಳ ವೀರಗಾಥೆ ಹೇಳುತ್ತದೆ. ಇದನ್ನು ಈ ಹೋರಾಟಗಳ ನಾಯಕರ, ಪಾಲುಗೊಂಡವರ, ಕುಟುಂಬದವರ ಸಂದರ್ಶನಗಳ ಮತ್ತು ದಾಖಲೆಗಳ ಸಂಗ್ರಹಗಳ ಆಧಾರದ ಮೇಲೆ ಮೊದಲ ಬಾರಿಗೆ ದಾಖಲು ಮಾಡಲಾಗಿದೆ. ಇನ್ನೊಂದು ಭಾಗದಲ್ಲಿ ಉತ್ತರ ಕನ್ನಡದ ರೈತ ಚಳುವಳಿ ಮತ್ತು ಅದರ ಪ್ರಮುಖ ನಾಯಕರ ಕುರಿತು ಅವರು ವಿವಿಧ ಸಂದರ್ಭಗಳಲ್ಲಿ ಬರೆದ ಪ್ರಕಟವಾದ ಲೇಖನಗಳು ಇವೆ. ಎರಡನೆಯ ಭಾಗವನ್ನು ಮೊದಲನೆಯ ಭಾಗಕ್ಕೆ ಪೂರಕವಾಗುವುದರಿಂದ ಇಲ್ಲಿ ಸೇರಿಸಲಾಗಿದೆ. ಈ ಎರಡೂ ಒಟ್ಟಾಗಿ ಸುಮಾರು 1970ರ ದಶಕದ ವರೆಗಿನ ಉತ್ತರ ಕನ್ನಡದ ರೈತ ಚಳುವಳಿಯ ಗೊತ್ತಿರದ ಇತಿಹಾಸದ ಭಾಗಗಳನ್ನು ಬೆಳಕಿಗೆ ತರುವ ಮೂಲಕ ಅದನ್ನು ಹೆಚ್ಚು ಪೂರ್ಣ ಮತ್ತು ಸಮಗ್ರಗೊಳಿಸುತ್ತದೆ.. .. ..

ಇದನ್ನು ವಿಠ್ಠಲ ಭಂಡಾರಿ ಅವರ ನೆನಪಿನ ಪುಸ್ತಕವಾಗಿ ಮಾತ್ರ ನಾವು ಪ್ರಕಟಿಸುತ್ತಿಲ್ಲ. ಕರ್ನಾಟಕದ ರೈತ ಚಳುವಳಿಯ ಇತಿಹಾಸದಲ್ಲಿ ಇರುವ ಕೊರತೆಗಳನ್ನು ನೀಗಿಸಲು ಬೇಕಾದ ದಾಖಲೆಗಳ ಸಂಗ್ರಹ, ಅಧ್ಯಯನ, ಸಂಶೋಧನೆಗಳಲ್ಲಿ ತೊಡಗಲು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ವಿದ್ವಾಂಸರಿಗೆ ಇದು ಸ್ಫೂರ್ತಿ ತುಂಬಬಲ್ಲದು ಎಂದು ನಾವು ಭಾವಿಸಿದ್ದೇವೆ.. .. ..

ಈ ಪುಸ್ತಕದ ಪ್ರಕಟಣೆಯು ಉತ್ತರ ಕನ್ನಡದ, ಕರ್ನಾಟಕದ ರೈತ ಚಳುವಳಿಯ ಸಮಗ್ರ ಇತಿಹಾಸವನ್ನು ಕಟ್ಟಿ ಕೊಡುವತ್ತ ಉತ್ತಮ ಪ್ರಗತಿಗೆ ಪ್ರೇರಕವಾಗುವುದು ಎಂಬುದು ನಮ್ಮ ಆಶಯ.

ಮುರಾರ್ಜಿ ದೇಸಾಯಿಯವರು ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಅವಧಿಯಲ್ಲಿ ಬಾಂಬೆ ಪ್ರಾಂತೀಯ ಸರ್ಕಾರದ ಕಂದಾಯ ಮತ್ತು ಗೃಹ ಮಂತ್ರಿಗಳಾಗಿದ್ದಾಗ ರೈತ ಮುಂದಾಳುಗಳನ್ನು ಗಡಿಪಾರು ಮಾಡಿದ ಆದೇಶವನ್ನು ಹೊರಡಿಸಿದ್ದರು. ಅವನ್ನು ರದ್ದು ಮಾಡಲು ಮುರಾರ್ಜಿ ದೇಸಾಯಿಯವರಿಗೆ 06-09-1947 ರಂದು (ಅಂದರೆ ಸ್ವಾತಂತ್ರ್ಯ ಬಂದ ಮೇಲೆ) ಉತ್ತರ ಕನ್ನಡ ಜಿಲ್ಲಾ ಕಮ್ಯುನಿಷ್ಟ ಪಾರ್ಟಿ ಮತ್ತು ಕಿಸಾನ ಸಭಾ ಸಮಿತಿಗಳ ಪರವಾಗಿ ಬರೆದ ಪತ್ರ.ದ ಪೂರ್ಣ ಪಾಠ ಪುಸ್ತಕದಲ್ಲಿರುವ ಪ್ರಮುಖ ಆಕರಗಳಲ್ಲಿ ಒಂದು. ಅದರ ಆಯ್ದ ಭಾಗಗಳು.

'ಕಮ್ಯುನಿಸ್ಟ್, ಕಿಸಾನ ಸಭಾ ನಾಯಕರ ಗಡಿಪಾರು, ಜೈಲುವಾಸ ರದ್ದು ಮಾಡಿ'

"ಬ್ರಿಟಿಷರು ನಿರ್ಮಿಸಿದ ಸಾಮಾಜಿಕ ಪದ್ಧತಿಯ ಒತ್ತಡದಿಂದ ಉತ್ತರ ಕನ್ನಡ ಜಿಲೆಯ ರೈತರು ಬಹಳ ಕಷ್ಟ ಪಟ್ಟಿದ್ದಾರೆ. ಈ ಜಿಲ್ಲೆಯಲ್ಲಿಯ ಗೇಣಿಯ ಮಾನವು ಎಲ್ಲಕ್ಕಿಂತ ಹೆಚ್ಚಿದೆ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಒಮ್ಮೆ ರೈತರ ಸ್ವಂತದ್ದಾಗಿದ್ದ ಭೂಮಿಗಳು ಈಗ ಒಡೆಯರ (ಜಮಿನ್ದಾರರ) ಸೊತ್ತಾಗಿದೆ. ಯಾವ ಭೂಮಿಗಳ ಮೇಲೆ ರೈತರ ಮನೆಗಳಿವೆಯೋ ಆ ಭೂಮಿಗಳು ರೈತರ ಕಣ್ಣ ಮುಂದೆ ಜಮೀನ್ದಾರರ ಕಬಜೆಯೊಳಗೆ ಹೋಗಿವೆ. ಮೇಲೆ ಈ ಭೂಮಿಗಳಿಗೆ ಅವರು ಗೇಣಿ ಕೊಡಬೇಕಾಗಿದೆ. ಗೇಣಿಯ ಮಾನವು ಭಾರವಾದ್ದರಿಂದ ರೈತರ ಪೈಕಿ ಎಷ್ಟೋ ರೈತರು ಸಾಲದಲ್ಲಿ ಮುಳುಗಿದ್ದಾರೆ.. .. ..

ಬ್ರಿಟಿಷ್ ಸಾಮ್ರಾಜ್ಯಶಾಹಿ ನಿರ್ಮಿಸಿದ ಸಮಾಜ ಪದ್ಧತಿ ಬೇರೂರಿದ ಹಾಗೆ ನಮ್ಮ ಜಿಲ್ಲೆಯ ಜಮೀನು ಸಂಖ್ಯೆ 13 ಲಕ್ಷಗಳಿಂದ 4 ವರೆ ಲಕ್ಷಕ್ಕೆ ಇಳಿದಿದೆ. ಶೇಕಡಾ 80 ರೈತರು ಪ್ರತಿ ವರ್ಷ ಅಡವಿಗಳಲ್ಲಿ ಹೋಗಿ ಅಲ್ಲಿ ಅಡವಿ ಕಂಟ್ರಾಕ್ಟರ್ ಕೈಕೆಳಗೆ ದುಡಿಯುತ್ತಾರೆ. ಈ ವರ್ಷ ಅವರ ಕೂಲಿ ಇಳಿಸಲಾಗಿದೆ. .. ..

ಒಂದು ಕಡೆ ಜನ ಅರೆ ಹೊಟ್ಟೆ ಉಣ್ಣುತ್ತಿದ್ದಾರೆ. ಮತ್ತೊಂದೆಡೆ ಕಳ್ಳ ಪೇಟೆ ವ್ಯಾಪಾರ ಜಮೀನದಾರರ ನಿತ್ಯದ ವ್ಯವಹಾರವಾಗಿದೆ.. .. ಈ ನಿರ್ಲಜ್ಜ ಕಳ್ಳಪೇಟೆ ವ್ಯಾಪಾರ ನಡೆಸುವ ಕೆಲವು ದೊಡ್ಡ ಜಮೀನ್ದಾರರೇ ಅಧಿಕಾರಿಗಳ ಕಣ್ಣಲ್ಲಿ ಮಣ್ಣೆರಚುವದಕ್ಕೆ, ಕಿಸಾನ್ ಸಭೆಯ ಮತ್ತು ಅದರ ಮುಂದಾಳುಗಳ ಮೇಲೆ ಸುಳ್ಳು ಕೇಸ್ ಆರೋಪ ಹೊರಿಸಿ ಅಪಪ್ರಚಾರ ನಡೆಸುತ್ತಾರೆಂದು ಈ ಮೇಲಿನ ಪ್ರಕರಣಗಳಿಂದ ಎಲ್ಲರಿಗೂ ತಿಳಿದು ಬಂದಿತು.

ಮೇಲೆ ವರ್ಣಿಸಿದ ಕಷ್ಟದಲ್ಲಿದ್ದ ರೈತರು ತಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಬೇರೆ ಬೇರೆ ಸಂಘಟನೆಗಳನ್ನು 1940 ನಂತರ ಶುರು ಮಾಡಿದರು. 1945 ರಲ್ಲಿ ಈ ಬೇರೆಬೇರೆ ಸಂಘಟನೆಗಳು ಒಂದು ಸೇರಿ ಉಳಗಾದಲ್ಲಿ ಜಿಲ್ಲಾ ಕಿಸಾನ್ ಪರಿಷತ್ತನ್ನು ಕರೆದರು. ಆಗಿನಿಂದ ಕಿಸಾನ್ ಸಂಘಟನೆ ಸರಿಯಾಗಿ ಶುರುವಾಯಿತು. ತಾಲೂಕು ಮತ್ತು ಜಿಲ್ಲಾ ಪರಿಷತ್ತುಗಳು ಪ್ರತಿವರ್ಷ ಆಗಹತ್ತಿದವು. ಕಿಸಾನರು (ರೈತರು) ಜಿಲ್ಲೆಯಲ್ಲೇ ಸಂಘಟಿತರಾಗುವುದನ್ನು ಕಂಡು ಜಮೀನದಾರರು ಸಹ ಶೇತಕರಿ ಸಂಘ ಎಂಬ ತಮ್ಮ ಸಂಘಟನೆ ಸ್ಥಾಪಿಸಿದರು. ಮತ್ತು ಅದರ ಮಾರ್ಫತ್ ಆದ ಮೀಟಿಂಗುಗಳಲ್ಲಿ ಕಿಸಾನ್ ಸಂಘಟನೆಯನ್ನು ಚೂರುಗೊಳಿಸುವ ಪ್ರಚಾರ ಮಾಡಿದರು.. ..

ಜಮಿನದಾರರು ನಡೆಸಿದ ಸುಲಿಗೆ ಬಯಲಿಗೆ ಎಳೆಯಲು ಉಳಗಾದಲ್ಲಿ ಕಿಸಾನ ಸಭೆಯವರು ಸತ್ಯಾಗ್ರಹ ಹೂಡಿದರು. ಈ ಪ್ರಕರಣದಲ್ಲಿ ಜಮಿನದಾರರು ರೈತರ ಮಾತಿಗೆ ಒಪ್ಪಬೇಕಾಯಿತೆಂದು ಗೊತ್ತಿದೆ. ಈ ಜಮಿನದಾರರು ಸಬ್ ಜಜ್ ಕೋರ್ಟಿನಲ್ಲಿ ನಾಜೀರ್ ಇದ್ದಾರೆಂದು ನಾವು ಲಕ್ಷದಲ್ಲಿಡಬೇಕು. ಬೇಳೆಯ 2/3 ಅಂಶ ರೈತನ ಬಳಿಯಲ್ಲಿ ಇರಬೇಕೆಂದು ಮುಂಬಯಿ ಟೆನೆನ್ಸಿ ಕಾಯಿದೆ ತಿದ್ದುಪಡಿ ಅಮಲಿನಲ್ಲಿ ಬಂದ ಕೂಡಲೇ ಜಮಿನದಾರರು ಗಾಭರಿಯಾಗಿ ಲೋಕಪ್ರಿಯ ಮಂತ್ರಿಗಳ ವಿರುದ್ಧ ಪ್ರಚಾರ ನಡೆಸಿದರು. .. .. ಬೇಕಾಯ್ದೆಶೀರ್ ಜಮಾವದಲ್ಲಿದ್ದರೆಂದು ಪುರುಷೋತ್ತಮ ನಾಯ್ಕ ಅವರ ತಮ್ಮ ಬಾಬಣಿ ನಾಯ್ಕ ಮತ್ತಿಬ್ಬರ ಮೇಲೆ ಖಟ್ಲೆ ಶುರುವಾಯಿತು. ಟೌನ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಇಬ್ಬರನ್ನು ಮತ್ತು ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಮತ್ತಿಬ್ಬರನ್ನು ನಿರ್ದೋಷಿಗಳೆಂದು ನಿರ್ಣಯಿಸಲಾಯಿತು. ಮಾಮಲೆದಾರರು ಈ ಖಟ್ಲೆಗೆ ಭಯಂಕರ ರೂಪ ಕೊಡಲು ಯತ್ನಿಸಿದರು. ಜಿಲ್ಲೆಯಲ್ಲಿ ಅಶಾಂತತೆಯ ವಾತಾವರಣ ಉಂಟಾಗುವಂತೆ ಕಿಸಾನ ಸಭೆಯವರು ಎಲ್ಲಿಯೂ ಪ್ರಚಾರ ನಡೆಸಿದ್ದಿಲ್ಲವೆಂದು ಸ್ಪಷ್ಟವಾಗುತ್ತದೆ.

ಆದರೆ ಜಮಿನದಾರರು ಕಿಸಾನ ಸಭೆಯ ವಿರುದ್ಧ ನಡೆಸಿದ ಅಪಪ್ರಚಾರದ ಫಲವಾಗಿ ಸರಕಾರದವರು ಮುಂಬಯಿ ಪ್ರಾಂತದಿಂದ ಎನ್.ಎಲ್. ಉಪಾಧ್ಯಾಯ ಮತ್ತು ಡಿ.ವಿ. ಸಿಂಗರನ್ನು ಹದ್ದುಪಾರು ಮಾಡಿದರು.. .. ಎನ್.ಜಿ.ಮಾಲಸೇಕರ, ಪುರುಷೋತ್ತಮ ನಾಯ್ಕ, ಸೈಯದ್ ಹೈದರ್ ಸೈಯದ್ ಯೂಸುಫ್ ಇವರನ್ನು ಜಿಲ್ಲೆಯಿಂದ ಹದ್ದುಪಾರು ಮಾಡಲಾಗಿದೆ. .. ..ಚುಡೋ ಫಕೀರ್ ಪಡ್ತಿ, ಕಾಯತಾನ ಮನವೇಲ ಡಿಸೋಜಾ, ಮುಕುಂದ ಬಾಂದೇಕರ್, ಸೈಯದ್ ಅಬ್ದುಲ್ ಹಮೀದ್ ಸೈಯದ್ ಹೈದರ್, ಶೇಖ್ ಮಹಮ್ಮದ್ ಅಬ್ದುಲ್ ರಜಾಕ್, ಗುಬ್ಬು ನಾಯ್ಕ, ಬಿ.ಎನ್. ಧಾರವಾಡಕರ್ ಇವರನ್ನೆಲ್ಲ ಕಾರವಾರ ಸಬ್ ಜೈಲಿನಲ್ಲಿ ಸ್ಥಾನಬದ್ಧ ಕೈದಿಯಾಗಿ ಇಟ್ಟಿದ್ದಾರೆ.. ..

ಹಿಂದಿ ಸ್ವಾತಂತ್ರ್ಯ ದಿನವೆಂದು ಆಚರಿಸಲ್ಪಟ್ಟು ತಾರೀಖು 15 ಅಗಷ್ಟ ತಮ್ಮ ಮುಂದಾಳುಗಳು ತಮ್ಮ ನಡುವೆ ಇರುವುದು ಯೋಗ್ಯವೆಂದು ಜಿಲ್ಲಾ ಕಿಸಾನ ಸಭಾ ಕಮಿಟಿಯವರು ಸ್ಥಾನಬದ್ಧರ ಬಿಡುಗಡೆಯ ಬಗ್ಗೆ ಮತ್ತು ಹದ್ದುಪಾರು ಹುಕುಂ, ವಾರಂಟುಗಳನ್ನು ರದ್ದುಗೊಳಿಸುವ ಬಗ್ಗೆ ಮುಖ್ಯಮಂತ್ರಿ ಮತ್ತು ಗೃಹ ಮಂತ್ರಿಗಳಿಗೆ ತಾ. 11 ಅಗಷ್ಟ ದಿನ ತಂತಿ ಮಾಡಿದರು. "ಹಿಂದುಸ್ತಾನದಿಂದ ತೊಲಗುವೆವು" ಎಂದು ಸಾಮ್ರಾಜ್ಯವಾದಿಯವರು ಕೊಟ್ಟ ಮಾತನ್ನು ಅವರಿಂದ ನಿಜಗೊಳಿಸಬೇಕಾದರೆ ಹಿಂದಿಯವರೆಲ್ಲರೂ ಹೆಚ್ಚಿಗೆ ಸಹಕಾರದಿಂದ ನಡೆಯಬೇಕೆಂದು ಕಿಸಾನ ಸಭೆಗೆ ಗೊತ್ತಿದೆ. ಆದ್ದರಿಂದಲೇ ಟೆನೆನ್ಸಿ ಕಾಯಿದೆ ಸುರುಳೀತವಾಗಿ ನಡೆಯಲಿಕ್ಕೆ ಬ್ರಿಟಿಷ್ ನಿರ್ಮಿತ ಜಮಿನದಾರಿ ಪದ್ಧತಿಯನ್ನು ಸಾವಕಾಶ ನಾಶಗೊಳಿಸುವ ಬಗ್ಗೆ ಕಳ್ಳಪೇಟೆಯನ್ನು ನಿರ್ಮೂಲನಗೊಳಿಸಿ ರೇಷನ್ ಪದ್ಧತಿ ಯಶಸ್ವಿಗೊಳಿಸಲಿಕ್ಕೆ ಈಗಿನ ಸರಕಾರ ದೊಡನೆ ಸಹಕರಿಸುವದಾಗಿ ತಾರೀಖ 15 ಅಗಷ್ಟ ರ ದಿನ ಠರಾವು ಮಾಡಲಾಯಿತು. ಈ ಮೇಲಿನ ಗುರಿಯನ್ನು, ಕಾರ್ಯಕ್ರಮವನ್ನು ಅನುಸರಿಸಲಿಕ್ಕೆ ಅನುವು ಮಾಡಲು ಮುಂಬಯಿ ಸರಕಾರವು ಸ್ಥಾನಬದ್ಧ ಕೈದಿಗಳನ್ನು ಬಿಡಿಗಡೆ ಮಾಡುವುದು ಮತ್ತು ಹದ್ದುಪಾರು ಹುಕ್ಕುಂ ವಾರಂಟುಗಳನ್ನು ರದ್ದು ಗೊಳಿಸುವರೆಂದು ಕಿಸಾನ ಸಭೆಯಿಂದ ಆಶಿಸಲಾಗಿದೆ.. ..

JANASHAKTHI KANNADA VARA PATRIKE MAY 9-15, 2022 Price: Rs. 10/- Date of Publication: 6 MAY 2022 RNI No. KARKAN /2006/17926 Posted on 9-05-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2



ನ್ಯೂ ಯಾರ್ಕ್, ಯು.ಎಸ್


ಕೊಲಂಬೊ, ಶ್ರೀಲಂಕಾ


ಪ್ಯಾರೀಸ್

ಜಗದಗಲದಲ್ಲೂ ಮೇ ದಿನ 2022

ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಅವರ ಹೋರಾಟಗಳ ಐಕ್ಯತೆಯನ್ನು ಸಾರುವ ದಿನವಾಗಿ ಈ ವರ್ಷವೂ ಜಗದಗಲದಲ್ಲೂ ಮೇ ದಿನವನ್ನು ಆಚರಿಸಲಾಯಿತು.

ಯು.ಎಸ್. ನಲ್ಲಿ ನ್ಯೂ ಯಾರ್ಕ್ ಸೇರಿದಂತೆ ಎಲ್ಲೆಡೆ ಈ ವರ್ಷದ ಮೇ ದಿನದಲ್ಲಿ ಕಾರ್ಮಿಕರ ಯೂನಿಯನ್ ಕಟ್ಟಿಕೊಳ್ಳುವ ಹಕ್ಕಿನ ಬಗ್ಗೆ ಹೆಚ್ಚಿನ ಒತ್ತು ಇತ್ತು. ಅಮೆಜಾನ್ ಮತ್ತು ಸ್ಟಾರ್ ಬಕ್ಸ್ ಕೆಲವು ಘಟಕಗಳಲ್ಲಿ ಯೂನಿಯನ್ ಕಟ್ಟುವುದರಲ್ಲಿ ಸಫಲತೆ, ಇತರ ಘಟಕಗಳಲ್ಲಿ ಇದಕ್ಕೆ ಕಂಪನಿಯ ದಮನ–ಪ್ರತಿರೋಧಗಳ ಉತ್ತರಗಳ ಹಿನ್ನೆಲೆಯಲ್ಲಿ ಯೂನಿಯನ್ ಹಕ್ಕುಗಳ ಕುರಿತು ನಡೆಯುತ್ತಿರುವ ರಾಷ್ಟ್ರೀಯ ಅಭಿಯಾನದ ಭಾಗವಾಗಿತ್ತು. ಹೆಚ್ಚಿನ ನಗರಗಳಲ್ಲಿ ಕಾರ್ಮಿಕರ ಮೆರವಣಿಗೆ ಅಮೆಜಾನ್ ಮತ್ತು ಸ್ಟಾರ್ ಬಕ್ಸ್ ಕೆಲವು ಘಟಕಗಳ ಮುಂದೆ ಹಾದು ಹೋಗಿ ಆಯಾ ಕಂಪನಿ ನಿರ್ವಾಹಕ ಮಂಡಳಿಗಳ ಧೋರಣೆಗಳ ವಿರುದ್ಧ ಘೋಷಣೆ ಕೂಗಲಾಯಿತು. ವಲಸೆ ಕಾರ್ಮಿಕರ ಹಕ್ಕಿನ ಮೇಲೂ ಹೆಚ್ಚಿನ ಮೆರವಣಿಗೆ–ಸಭೆಗಳಲ್ಲಿ ಒತ್ತು ಇತ್ತು.

ಫ್ರಾನ್ಸ್ ನಲ್ಲಿ ಹೊಸದಾಗಿ ಚುನಾಯಿತರಾದ ಅಧ್ಯಕ್ಷ ಮ್ಯಾಕ್ರಾನ್ ಕಾರ್ಮಿಕ ನೀತಿಗಳನ್ನು ಹಿಂತೆಗೆದುಕೊಳ್ಳಬೇಕು. ಜೂನ್ ನಲ್ಲಿ ಬರಲಿರುವ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಮ್ಯಾಕ್ರಾನ್ ಅವರ ಮತ್ತು ನವನಾಝಿ ಪಕ್ಷಗಳೆರಡನ್ನೂ ಸೋಲಿಸಬೇಕು. ಇದನ್ನು ಸಾಧಿಸಲು ರಚಿಸಲಾಗಿರುವ ಕಮ್ಯುನಿಸ್ಟ್–ಗ್ರೀನ್ ಎಡಕೂಟವನ್ನು ಬೆಂಬಲಿಸಬೇಕು ಎನ್ನುವುದು ಸಾಮಾನ್ಯ ವಿಷಯವಾಗಿತ್ತು.

ಶ್ರೀಲಂಕಾ ಮತ್ತು ಟರ್ಕಿಗಳಲ್ಲಿ ಮೇ ದಿನದ ಮೆರವಣಿಗೆಗೆ ಇದ್ದ ನಿಷೇಧ ಉಲ್ಲಂಘಿಸಿ ಮೇ ದಿನಾಚರಣೆ ಮಾಡಿದ ವರದಿಗಳು ಬಂದಿವೆ. ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್ ನಲ್ಲಿ ಎಂದಿನಂತೆ ಕಾರ್ಮಿಕರ ಭಾರೀ ಮೆರವಣಿಗೆ ರ್‍ಯಾಲಿ ನಡೆದಿದೆ.

ಗ್ರೀಸ್ ನ ಅಥೆನ್ಸ್ ಸೇರಿದಂತೆ ಎಲ್ಲ ಯುರೋಪಿಯನ್ ದೇಶಗಳಲ್ಲಿ, ಪನಾಮಾ ಸೇರಿದಂತೆ ಎಲ್ಲ ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಮೇ ದಿನಾಚರಣೆ ನಡೆದಿದೆ. ಕ್ಯೂಬಾ ರಾಜಧಾನಿ ಹವಾನಾದಲ್ಲಿ ಎಂದಿನಂತೆ ಬಹುಶಃ ಜಗತ್ತಿನ ಅತ್ಯಂತ ದೊಡ್ಡ ರ್‍ಯಾಲಿಯಾಗಿದೆ.



ಇಸ್ತಾನ್ ಬುಲ್, ಟರ್ಕಿ


ಪನಾಮಾ, ದ. ಅಮೆರಿಕಾ


ಸಿಯೋಲ್, ದ.ಕೊರಿಯಾ



ಹವಾನಾ, ಕ್ಯೂಬಾ


ಅಥೆನ್ಸ್, ಗ್ರೀಸ್

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**